ಅಧ್ಯಾಯ ೬

# ಬ್ಯಾಂಕಿಂಗ್, ಹಣಕಾಸು ವ್ಯವಹಾರ, ವ್ಯಾಪಾರ ಮತ್ತು ವಾಣಿಜ್ಯ

## ಬ್ಯಾಂಕಿಂಗ್ ಮತ್ತು ಹಣಕಾಸು

ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ರೂಪುಗೊಳ್ಳುವ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಣಕಾಸಿನ ಸಾಲದ ವ್ಯವಹಾರಗಳು ಸೀಮಿತ ಪ್ರಮಾಣದಲ್ಲಿ ನಡೆಯುತ್ತಿದ್ದವು. ವ್ಯಾಪಾರಿಗಳು ಖಾಸಗಿ ಲೇವಾದೇವಿಗಾರರಿಂದ ಅತಿ ಹೆಚ್ಚಿನ ಬಡ್ಡಿದರದ ಮೇಲೆ ಸಾಲವನ್ನು ಪಡೆಯಬೇಕಾಗುತ್ತಿತ್ತು. ಜನಸಮುದಾಯಕ್ಕೆ ಉಳಿತಾಯ ಸೌಲಭ್ಯವನ್ನು ಒದಗಿಸುವ ಅಥವಾ ವ್ಯಾಪಾರ ವಹಿವಾಟಿಗೆ ಸಾಲ ಒದಗಿಸುವ ಯಾವುದೇ ಸ್ಥಳೀಯ ಹಣಕಾಸು ಸಂಸ್ಥೆಗಳು ಆಗಿನ್ನು ಹುಟ್ಟಿಕೊಂಡಿರಲಿಲ್ಲ. ಆನಂತರದಲ್ಲಿ ವ್ಯಾಪಾರ ವಹಿವಾಟುಗಳು ವಿಸ್ತಾರಗೊಂಡು ವೈವಿಧ್ಯತೆಯನ್ನು ಹೊಂದಿದುದರಿಂದ ಹಾಗೂ ಹಣಕಾಸಿನ ವ್ಯಾಪಕ ಬಳಕೆಯ ಪರಿಣಾಮದಿಂದಾಗಿ ವೈಯಕ್ತಿಕ ಸಾಲ ಕೊಡುಕೊಳ್ಳುವಿಕೆ ವ್ಯವಹಾರಗಳೂ ಹೆಚ್ಚುವಂತಾದವು. ಯಾವುದೇ ಆಧಾರವಿಲ್ಲದೇ ನೀಡಲಾದ ಸಾಲದ ಮೇಲೆ ಪಡೆಯಲಾದ ಬಡ್ಡಿಯ ಹಣದಲ್ಲಿ ಸಾಮಾನ್ಯವಾಗಿ ಒಂದು ಪಾಲನ್ನು ದೇವಾಲಯಗಳಿಗೂ ಸಂದಾಯವಾಗುತ್ತಿದ್ದ ವಿಷಯ ಚಾರಿತ್ರಿಕ ಆಧಾರಗಳಿಂದ ತಿಳಿಯಬಹುದಾಗಿದೆ. ಯಾವುದೇ ಆಧಾರವಿಲ್ಲದೇ ನೀಡಲಾಗುತ್ತಿದ್ದ ಅಂತಹ ಸಾಲವನ್ನು 'ಮೈ ಸಾಲ'ವೆಂದೂ ಕರೆಯಲಾಗುತ್ತಿತ್ತು. ಹಣದ ರೂಪದಲ್ಲಿ ನೀಡಲಾದ ಸಾಲಕ್ಕೆ ಕೆಲವೊಮ್ಮೆ ಬಡ್ಡಿಯನ್ನು ವಸ್ತುವಿನ ರೂಪದಲ್ಲಿ ಪಡೆಯುವ ಪದ್ಧತಿ ಸಹ ರೂಢಿಯಲ್ಲಿತ್ತು. ವಿರಳವಾಗಿ ಇಂದಿಗೂ ಸಹ ಈ ಪದ್ಧತಿ ಆಚರಣೆಯಲ್ಲಿರುವುದು ಕಂಡುಬಂದಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಕ್ಕೆ ಸಾಲ ಒದಗಿಸುವ ಲೇವಾದೇವಿಗಾರರು ಜಿಲ್ಲೆಯಲ್ಲಿ ಕಾಣಸಿಗುತ್ತಾರೆ. ವಿಪರೀತ ಬಡ್ಡಿಯ ಮೇಲೆ (ಕೆಲವೊಮ್ಮೆ ಶೇ.೨೫ರಿಂದ ೫೦ರವರೆಗೆ) ವಸ್ತುವಿನ ರೂಪದಲ್ಲಿ ಸಾಲ ಕೊಡುವ 'ಹೊಲಿ'ಪದ್ಧತಿ ಜಿಲ್ಲೆಯ ಒಳಭಾಗದ ಕೆಲ ಗ್ರಾಮಗಳಲ್ಲಿ ಈಗಲೂ ಸಹ ಪ್ರಚಲಿತವಿರುವುದಾಗಿ ತಿಳಿದುಬಂದಿದೆ. ಈ ಪದ್ಧತಿಯ ಅನುಸಾರ ಗೇಣಿದಾರನು ಲೇವಾದೇವಿಗಾರನಿಂದ ಅಕ್ಕಿಯನ್ನು ಸಾಲವಾಗಿ ಪಡೆದು, ಕರಾರಿನಂತೆ ಸುಗ್ಗಿಯ ನಂತರ ಆ ರೀತಿ ಪಡೆದ ಪ್ರತಿ ೪೨ ಸೇರು ಅಕ್ಕಿಗೆ ೧೪ ಸೇರು ಅಕ್ಕಿಯನ್ನು ಹೆಚ್ಚಿಗೆ ನೀಡಬೇಕಿತ್ತು.

### ಪರಸ್ಪರ ಸಹಾಯಕ ನಿಧಿಗಳು ಮತ್ತು 'ಕುರಿ' ಫಂಡ್‌ಗಳು

ಆಧುನಿಕ ಬ್ಯಾಂಕಿಂಗ್ ಉದ್ದಿಮೆಯು ಪ್ರಾರಂಭವಾಗುವ ಪೂರ್ವದಲ್ಲಿ ಸ್ಥಳೀಯ 'ನಿಧಿ' ಹಣಕಾಸು ಸಂಸ್ಥೆಗಳು ನಡೆಸುತ್ತಿದ್ದ ಲೇವಾದೇವಿ ವ್ಯವಹಾರಗಳು ದಕ್ಷಿಣ ಭಾರತದಲ್ಲಿ ಸಾಕಷ್ಟು ಜನಪ್ರಿಯತೆಯನ್ನುಗಳಿಸಿದ್ದವು. ಪರಸ್ಪರ ಸಹಾಯ ಅಗತ್ಯವಿದ್ದ ಆ ದಿನಗಳಲ್ಲಿ ಸ್ಥಳೀಯ

ಕೆಲ ಪ್ರಭಾವಿ ವ್ಯಕ್ತಿಗಳಿಂದ ಪ್ರಾರಂಭಿಸಲ್ಪಟ್ಟ ಈ 'ನಿಧಿ' ಸಂಸ್ಥೆಗಳು ಸದಸ್ಯರ ವ್ಯಾಪಾರೋದ್ಯಮಕ್ಕೆ, ಮನೆತನದ ತುರ್ತು ವೆಚ್ಚಕ್ಕೆ ಹಾಗೂ ಅನಿರೀಕ್ಷಿತ ಹಣಕಾಸಿನ ಅಗತ್ಯತೆಗಳಿಗೆ ಸಾಲವನ್ನು ನೀಡುತ್ತಿದ್ದವು. ಸದಸ್ಯರೇ ರಚಿಸಿಕೊಂಡ ನಿರ್ದಿಷ್ಟ ನೀತಿ ನಿಯಮಗಳನ್ವಯ ಈ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ನಗರ್ತ ಜನಾಂಗಕ್ಕೆ ಸೇರಿದ ವ್ಯಕ್ತಿಗಳೇ ಪ್ರಮುಖವಾಗಿ ಈ ಸ್ಥಳೀಯ 'ನಿಧಿ' ಸಂಸ್ಥೆಗಳ ಸ್ಥಾಪನೆಗೆ ಕಾರಣಕರ್ತರಾಗಿದ್ದರು. ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಈಗಲೂ ಈ 'ನಿಧಿ' ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದನ್ನು ಕಾಣಬಹುದಾಗಿದೆ. ಹಿಂದಿನ (೧೯೨೯) ಬ್ಯಾಂಕಿಂಗ್ ವಿಚಾರಣಾ ಸಮಿತಿಯ ವರದಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವೆಡೆ 'ಕುರಿ' ಫಂಡ್‌ಗಳೂ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ತಿಳಿಸಲಾಗಿದೆ. ನಿರ್ದಿಷ್ಟ ಪ್ರಮಾಣದಲ್ಲಿ ಹಣವನ್ನು ಸದಸ್ಯರಿಂದ ಸಂಗ್ರಹಿಸಿ ಅಂತಹ ಸದಸ್ಯರ ಒಂದು ಗುಂಪನ್ನು ಸಂಘಟಿಸುವ ಕಾರ್ಯದಲ್ಲಿ ಈ 'ಕುರಿ' ಫಂಡ್ ಸಂಸ್ಥೆಗಳು ನಿರತವಾಗಿದ್ದವು. ಸದಸ್ಯರ ಸಂಖ್ಯೆಗೆ ಹಾಗೂ ಹೂಡಿಕೆ ಮೊತ್ತಕ್ಕನುಗುಣವಾಗಿ ಬೇರೆಬೇರೆ ಗುಂಪುಗಳನ್ನು ಸಹ ಈ 'ಫಂಡ್'ಸಂಸ್ಥೆಗಳು ರಚಿಸಿಕೊಂಡಿದ್ದವು. ಆಯಾ ಗುಂಪಿನ ಒಟ್ಟು (ಗಂಟು) ಹಣವನ್ನು ಹರಾಜಿನಲ್ಲಿ ಅತಿ ಹೆಚ್ಚಿನ ಮೊತ್ತಕ್ಕೆ ಕೂಗಿದವರಿಗೆ ನೀಡಲಾಗುತ್ತಿತ್ತು ಮತ್ತು ಹರಾಜು ಮೊತ್ತವನ್ನು (ಬಿಡ್ ಹಣ) ಗುಂಪಿನ ಎಲ್ಲ ಸದಸ್ಯರಿಗೆ ಸಮನಾಗಿ ಹಂಚಲಾಗುತ್ತಿತ್ತು.

**ಲೇವಾದೇವಿಗಾರರು**

ಗ್ರಾಮೀಣ ಜನಸಂಖ್ಯೆಯಲ್ಲಿ ಅಧಿಕ ಸಂಖ್ಯೆಯಲ್ಲಿರುವ ಸಣ್ಣ ಹಿಡುವಳಿದಾರರು ಮತ್ತು ಕೃಷಿ ಕಾರ್ಮಿಕರು ತಮಗೆ ಅತ್ಯಗತ್ಯವಿದ್ದ ಸಾಲಕ್ಕಾಗಿ ಅನಿವಾರ್ಯವಾಗಿ ಹಳ್ಳಿಯ ಸಾಹುಕಾರ ಅಥವಾ ವೃತ್ತಿನಿರತ ಲೇವಾದೇವಿಗಾರರನ್ನೇ ಅವಲಂಬಿಸಿರುವುದು ಬಹಳ ಹಿಂದಿನಿಂದಲೂ ನಡೆದುಬಂದಿದೆ. ಈ ಹಿಂದೆ ತಿಳಿಸಿದ 'ಹೊಲಿ' ಪದ್ಧತಿ ಒಂದೆಡೆ ವೃತ್ತಿನಿರತ ಸಾಲಿಗನ ಐಶ್ವರ್ಯವನ್ನು ಮತ್ತಷ್ಟು ಹೆಚ್ಚುವಂತೆ ಮಾಡಿದ್ದರೆ, ಮತ್ತೊಂದೆಡೆ ನಿರಂತರ ಸಾಲದ ಬವಣೆಯಲ್ಲೇ ನರಳುತ್ತಿದ್ದ ಬಡಸಾಲಗಾರನ ಸ್ಥಿತಿಯನ್ನು ಶೋಚನೀಯಗೊಳಿಸಿತ್ತು. ಲೇವಾದೇವಿಗಾರರು ಸಾಮಾನ್ಯವಾಗಿ ಪ್ರಾಮಿಸರಿ ನೋಟ್ ಮತ್ತು ವೈಯಕ್ತಿಕ ಜಾಮೀನು, ಇಲ್ಲವೇ ಜಂಟಿ ಜಾಮೀನು ಮುಂತಾದ ಆಧಾರಗಳನ್ನೇ ಪಡೆದು ದುಬಾರಿ ಬಡ್ಡಿಯ ಸಾಲವನ್ನು ನೀಡುತ್ತಿದ್ದರು. ಅವರು ಜಮೀನು ಮತ್ತು ಇತರ ಸ್ಥಿರಾಸ್ತಿಗಳ ಭದ್ರತೆಯನ್ನು ಪಡೆದು ಸಹ ಸಾಲವನ್ನು ನೀಡುತ್ತಿದ್ದರು. ಬಹಳವಾಗಿ ಒಂದು ಅಥವಾ ಎರಡು ವರ್ಷಗಳ ಅವಧಿಗಷ್ಟೆ ಸಾಲವನ್ನು ನೀಡುವುದಾಗಿತ್ತು. ಬಡ್ಡಿಯನ್ನು ಸಮಯಕ್ಕೆ ಸರಿಯಾಗಿ ನೀಡದಿದ್ದಲ್ಲಿ, ಚಕ್ರ ಬಡ್ಡಿಯನ್ನು ಕೊಡಬೇಕಾಗುತ್ತಿತ್ತು. ಒತ್ತೆ ಇಟ್ಟ ಭೂಮಿ ಅಥವಾ ಇತರ ಸ್ವತ್ತುಗಳನ್ನು ಸಕಾಲದಲ್ಲಿ ಹಿಂದಕ್ಕೆ ಪಡೆಯುವುದು ಸಣ್ಣ ರೈತರಿಂದ ಅಸಾಧ್ಯವಾಗುತ್ತಿತ್ತು. ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ರೈತರಿಗೆ ಸಾಲ ದೊರೆಯುವಂತಾದ ಮೇಲೂ, ಸಾಲದ ನಿರ್ವಹಣೆಯಲ್ಲಾಗುತ್ತಿದ್ದ ಅಲ್ಲಿನ ವಿಳಂಬವು ಸಾಲದ ತುರ್ತು ಅಗತ್ಯವಿದ್ದ ರೈತಾಪಿ ಜನರಿಗೆ ಸರಳವಾಗಿ ಅತಿ ಶೀಘ್ರದಲ್ಲಿ ಸಾಲ ಒದಗಿಸುವ ಲೇವಾದೇವಿಗಾರರನ್ನೇ ಮೊರೆಹೋಗುವಂತೆ ಮಾಡಿತ್ತು.

**ಋಣಗ್ರಸ್ತತೆ**

ಜಿಲ್ಲೆಯ ಒಟ್ಟಾರೆ ಋಣಗ್ರಸ್ತತೆಯ ಬಗ್ಗೆ ವಿವರವಾದ ಅಥವ ಕ್ರಮಬದ್ಧವಾದ ಯಾವುದೇ ಸಮೀಕ್ಷಾ ವರದಿಗಳು ಇಲ್ಲದಿರುವುದರಿಂದ ಜಿಲ್ಲೆಯ ಆರ್ಥಿಕ ಸ್ಥಿತಿಗತಿ ಹಾಗೂ ಸಮಗ್ರ ಸಾಲ ವ್ಯವಸ್ಥೆಯ ಬಗ್ಗೆ ತಿಳಿಸುವುದು ಸಾಧ್ಯವಾಗದಾಗಿದೆ. ಒಬ್ಬ ಸಾಮಾನ್ಯ ರೈತನ ಬಗ್ಗೆ ಹೇಳುವುದಾದಲ್ಲಿ, ಆತ ತಾನು ಬೆಳೆದದ್ದರಲ್ಲಿ ಭೂಮಾಲೀಕನಿಗೆ ಗೇಣಿ ನೀಡಿ, ಉಳಿದುದ್ದರಲ್ಲಿ ಬಹಳ ಕಷ್ಟದಿಂದ ಕುಟುಂಬದ ನಿರ್ವಹಣೆಯನ್ನು ಮಾಡಬೇಕಾಗುತ್ತಿತ್ತು. ಮುಂಗಾರಿನ ಕೃಷಿಕಾರ್ಯಗಳೂ ಸಹ ಬಹಳವಾಗಿ ಜೂನ್ ಅಂತ್ಯದ ವೇಳೆಗೆ ಪೂರ್ಣಗೊಂಡಿರುತ್ತವೆ. ನಂತರದ ಮೂರು ತಿಂಗಳ ಕಾಲ ಸಣ್ಣಪುಟ್ಟ ಕೆಲಸಗಳ ಹೊರತಾಗಿ ನಿರಂತರ ಆದಾಯ ನೀಡಬಲ್ಲ ಯಾವುದೇ ಉದ್ಯೋಗ ಸಹ ಸಣ್ಣ ರೈತರಿಗೆ ಸಿಗುವ ಸಂಭವ ಇರುವುದಿಲ್ಲ. ಅನಿವಾರ್ಯವಾಗಿ ರೈತರು ಅತ್ಯಗತ್ಯವಾದ ಸಾಲಕ್ಕಾಗಿ ಭೂಮಾಲೀಕ ಅಥವಾ ಲೇವಾದೇವಿಗಾರರ ಮೊರೆಹೋಗಿ ಹಣ ಅಥವಾ ಬಹಳವಾಗಿ ಅಕ್ಕಿಯನ್ನು ಸಾಲವಾಗಿ ಪಡೆಯಬೇಕಾಗುತ್ತದೆ. ಹಿಂದೆಯೇ ತಿಳಿಸಿದಂತೆ ಈ ತರಹದ 'ಹೊಲಿ' ಪದ್ಧತಿಯು ವೃತ್ತಿನಿರತ ಸಾಲಿಗರ ಐಶ್ವರ್ಯವನ್ನು ಮತ್ತಷ್ಟು ಹೆಚ್ಚಿಸುವಲ್ಲಿ ಮಾತ್ರ ಸಹಕಾರಿಯಾಗಿತ್ತು. ಆದರೂ ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ ಸರ್ಕಾರವು ಅಕ್ಕಿ ಸಂಗ್ರಹಣೆ ಕಾರ್ಯವನ್ನು ಕೈಗೊಂಡಿದ್ದರಿಂದ 'ಹೊಲಿ' ಪದ್ಧತಿಗೆ ಸ್ವಲ್ಪ ತಡೆಯುಂಟಾಯಿತು. ಆದರೆ ಯುದ್ಧ ಮುಗಿದ ಬಳಿಕ ಮತ್ತೆ ಈ ಪದ್ಧತಿ ಮುಂದುವರಿಯುವಂತಾಯಿತು. ಅದೇ ವೇಳೆಗೆ ಸರ್ಕಾರ ಸಹ ಸಮಾಜ ವಿಕಾಸ ಕಾರ್ಯಕ್ರಮದಡಿಯಲ್ಲಿ ರೈತರಿಗೆ ಅಲ್ಪಾವಧಿಯ ಸಾಲವನ್ನು ವಿತರಿಸುವ ಯೋಜನೆಯನ್ನು ಕೈಗೊಂಡಿತು. ಈ ಯೋಜನೆಯಡಿ

ಸಾಲ ಪಡೆದ ಕೆಲ ರೈತರು ಅದನ್ನು ಉತ್ಪಾದನಾ ಉದ್ದೇಶಕ್ಕೆ ಬಳಸದೇ, ಮನೆತನದ ವೆಚ್ಚಕ್ಕೆ ಬಳಸಿದ್ದರಿಂದ, ಅಂತಹವರೆಲ್ಲರೂ ನಿರಂತರ ಸಾಲದಲ್ಲೇ ಮುಳುಗುವಂತಾದರು.

ರೈತರ ಆರ್ಥಿಕ ಸ್ಥಿತಿಗತಿಗಳನ್ನು ತಿಳಿದು ಅವರ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಸೂಚಿಸಲು ಅಂದಿನ ಮದ್ರಾಸ್ ಸರ್ಕಾರ ೧೮೯೫ರಲ್ಲಿ ಸರ್ ಫ್ರೆಡ್ರಿಕ್ ನಿಕೋಲ್‌ಸನ್ ಎಂಬ ಬ್ರಿಟಿಷ್ ಅಧಿಕಾರಿಯನ್ನು, ೧೯೩೦ರಲ್ಲಿ ಪ್ರಾಂತೀಯ ಬ್ಯಾಂಕಿಂಗ್ ವಿಚಾರಣಾ ಸಮಿತಿಯನ್ನು, ೧೯೩೪ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಡಾ.ಪಿ.ಜೆ.ಥಾಮಸ್ ಅವರನ್ನು ಕೇಳಿಕೊಂಡಿತು. ಆದರೆ ಈ ವರದಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಯಾವುದೇ ಅಂಕಿಅಂಶಗಳ ಮಾಹಿತಿಯನ್ನು ಒಳಗೊಂಡಿರುವುದಿಲ್ಲ. ೧೯೫೭–೫೮ರಲ್ಲಿ ಪುಣೆಯ ಗೋಖಲೆ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಸಂಸ್ಥೆಯ ಎ.ಆರ್.ರಾಜಪುರೋಹಿತ್‌ರವರಿಂದ ಉಡುಪಿ ತಾಲೂಕಿನ ಪಡುತೋನ್ಸೆ ಗ್ರಾಮದ ಮಾದರಿ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಆ ಸಣ್ಣ ಗ್ರಾಮದ ಪ್ರತಿ ವ್ಯಕ್ತಿಯ ಮೇಲಿನ ಸರಾಸರಿ ಸಾಲವು ರೂ.೧೧೧.೩೦ ಇದ್ದು, ಅಲ್ಲಿನ ಒಟ್ಟು ಕುಟುಂಬಗಳ ಪೈಕಿ ಶೇ.೮೪.೩ ಕುಟುಂಬಗಳು ಸಾಲವಂದಿಗರಾಗಿದ್ದರೆಂದು ಆ ಸಮೀಕ್ಷಾ ವರದಿಯಲ್ಲಿ ತಿಳಿಸಲಾಗಿದೆ. ನಂತರ ೧೯೬೧ರಲ್ಲಿ ಭಾರತದ ಜನಗಣತಿ ಇಲಾಖೆ ಪ್ರಾಯೋಗಿಕವಾಗಿ ಕೈಗೊಂಡ ಬೆಳ್ತಂಗಡಿ ತಾಲೂಕಿನ ನಾರಾವಿ ಗ್ರಾಮದ ಸಮೀಕ್ಷಾ ವರದಿಯನ್ವಯ ರೂ.೨೫ ಮತ್ತು ಅದಕ್ಕೂ ಕಡಿಮೆ ಮಾಸಿಕ ವರಮಾನ ಹೊಂದಿದ ಕುಟುಂಬಗಳ ಸರಾಸರಿ ಸಾಲವು ರೂ.೨೪೧ ಆಗಿದ್ದರೆ, ರೂ.೨೬ರಿಂದ ರೂ.೫೦ರವರೆಗಿನ ಮಾಸಿಕ ವರಮಾನವಿದ್ದ ಕುಟುಂಬಗಳ ಸರಾಸರಿ ಸಾಲವು ರೂ.೧೭೬ ಮಾತ್ರ ಆಗಿತ್ತೆಂದು ತಿಳಿಸಿದೆ. ಸುಮಾರು ಶೇ.೬೬ರಷ್ಟು ಕುಟುಂಬಗಳು ಮನೆತನದ ವೆಚ್ಚಕ್ಕಾಗಿ, ಸುಮಾರು ಶೇ.೪ರಷ್ಟು ಕುಟುಂಬಗಳು ಧಾರ್ಮಿಕ ಕೆಲಸ ಕಾರ್ಯಗಳಿಗಾಗಿ ಮತ್ತೆ ಶೇ.೪ರಷ್ಟು ಬಾಡಿಗೆ ನೀಡುವ ಉದ್ದೇಶಕ್ಕಾಗಿ ಸಾಲವನ್ನು ಮಾಡಿದುದಾಗಿ ದಾಖಲಿಸಲಾಗಿದೆ.

### ಋಣ ಪರಿಹಾರ ಯೋಜನೆಗಳು (೧೯೫೬ರ ಪೂರ್ವದಲ್ಲಿ)

ಸರಕಾರವು ವಾರನ್ ಹೇಸ್ಟಿಂಗ್ಸ್ ಕಾಲದಲ್ಲಿ ಸಾಲ ಒಡಂಬಡಿಕೆ ಸಮಿತಿಗಳ ಮೂಲಕ ಸಾಲ–ಹೊಂದಾಣಿಕೆ ನಿಯಮಗಳನ್ವಯ ರೈತರ ಸಾಹುಕಾರೀ ಸಾಲಕ್ಕೆ ಪರಿಹಾರ ಒದಗಿಸುವ ಪ್ರಯತ್ನ ಮಾಡಿತು. ಮದ್ರಾಸ್ ಸರ್ಕಾರದ ನಿಯಮಗಳನ್ವಯ ೧೮೮೫ಕ್ಕೂ ಸ್ವಲ್ಪ ಮುಂಚೆ ಸಾಲದ ಮೇಲಿನ ಬಡ್ಡಿದರವನ್ನು ಶೇ.೧೨ಕ್ಕೆ ನಿಗದಿ ಮಾಡಲಾಯಿತು. ಭಾರತೀಯ ಕರಾರು ಅಧಿನಿಯಮಕ್ಕೆ ಕೇಂದ್ರ ಸರಕಾರ ೧೮೯೯ರಲ್ಲಿ ತಿದ್ದುಪಡಿ ತಂದು ಅನುಚಿತ ಪ್ರಭಾವ ಹಾಗೂ ಒತ್ತಡ ಹೇರಿ ಕೈಗೊಳ್ಳಲಾದ ಲೇವಾದೇವಿ ವ್ಯವಹಾರ 'ನಿರರ್ಥಕ' ಎಂದು ಘೋಷಿಸಿತು. ಆದರೆ ಈ ಕಾನೂನಿನ್ವಯ ಲೇವಾದೇವಿಗಾರರ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡುವ ಧೈರ್ಯ ಸಾಮಾನ್ಯ ರೈತ ಸಾಲಗಾರರಿಗೆ ಸಾಲದಾಗಿತ್ತು. ದುಬಾರಿ ಬಡ್ಡಿದರವನ್ನು ನಿಯಂತ್ರಿಸಲು ಶಾಸನ ಬದ್ಧ ಕಾನೂನು ಒಂದನ್ನು ರೂಪಿಸಲು ಮದ್ರಾಸ್ ಸರ್ಕಾರ ೧೯೦೬ರಲ್ಲಿ ಭಾರತ ಸರ್ಕಾರವನ್ನು ಒತ್ತಾಯಿಸಿತು. ಭಾರತ ಸರ್ಕಾರ ೧೯೧೮ರಲ್ಲಿ 'ದುಬಾರಿ ಬಡ್ಡಿ ಸಾಲ' ಕಾನೂನನ್ನು ಜಾರಿಗೆ ತಂದಿತಾದರೂ, ಮದ್ರಾಸ್ ಪ್ರಾಂತದ ಎಲ್ಲಾ ಕಡೆಗಳಲ್ಲಿ ಅದರ ಸಮಾನ ಪಾಲನೆಯಾಗಲಿಲ್ಲ. ಅಲ್ಲದೇ ಅದನ್ನು ಬಹಳ ಅಪರೂಪವಾಗಿ ಬಳಸಲಾಯಿತು. ಜಾಗತಿಕ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯು ಎದುರಾದಾಗ (೧೯೨೯–೩೦) ಗ್ರಾಮೀಣ ಸಾಲಗಾರರ ದಾರುಣ ಸ್ಥಿತಿಯನ್ನು ಕಂಡ ಸರ್ಕಾರಕ್ಕೆ ಲೇವಾದೇವಿ ವ್ಯವಹಾರಗಳನ್ನು ನಿಯಂತ್ರಿಸುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯಕವಾಯಿತು. ಅದರಂತೆ ಐದುನೂರು ರೂ. ಗಳಿಗಿಂತ ಕಡಿಮೆ ಸಾಲ ಪಡೆದ ಸಣ್ಣ ಸಾಲಗಾರರಿಗೆ ರಕ್ಷಣೆ ಒದಗಿಸುವ ಉದ್ದೇಶದಿಂದ ಮದ್ರಾಸ್ ಸರ್ಕಾರದ ಶಾಸನ ಬದ್ಧ ಮೊದಲ ಕಾಯ್ದೆಯಾದ 'ಮದ್ರಾಸ್ ಸಾಲಗಾರರ ರಕ್ಷಣಾ ಕಾಯ್ದೆ ೧೯೩೫'ನ್ನು ಜಾರಿಗೆ ತರಲಾಯಿತು. ಮದ್ರಾಸ್ ಅಧಿನಿಯಮ IV ೧೯೩೬ ರನ್ವಯ ಆಧಾರಿತ ಸಾಲದ ಮೇಲಿನ ಬಡ್ಡಿದರವನ್ನು ಶೇ.೯ಕ್ಕೂ ಹಾಗೂ ಆಧಾರ ರಹಿತ ಸಾಲದ ಮೇಲಿನ ಬಡ್ಡಿದರವನ್ನು ಶೇ.೧೫ಕ್ಕೂ ಮಿತಿಗೊಳಿಸಲಾಯಿತು. ವ್ಯವಸಾಯಗಾರರ ಸಾಲ ಕಾನೂನಿಗೆ ಮದ್ರಾಸ್ ಅಧಿನಿಯಮ XVI ೧೯೩೫ರ ಅನ್ವಯ ತಿದ್ದುಪಡಿ ತರುವ ಮೂಲಕ ಖಾಸಗಿ ಸಾಲದ ಮರುಪಾವತಿಗಾಗಿ ವ್ಯವಸಾಯಗಾರರಿಗೆ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಲಾಯಿತು. 'ಮದ್ರಾಸ್ ಋಣ ಸಂಧಾನ ಕಾಯ್ದೆ'ಯನ್ನು ಜಾರಿಗೊಳಿಸಿ ಎಲ್ಲ ಸಾಲಗಳ ಸೌಹಾರ್ದ ಇತ್ಯರ್ಥಕ್ಕೆ ಅವಕಾಶವನ್ನು ಕಲ್ಪಿಸಲಾಯಿತು. ಇದೇ ಮಾದರಿಯಲ್ಲಿ ರೈತರಿಗೆ ಮತ್ತಷ್ಟು ಪರಿಹಾರವನ್ನು ಕಲ್ಪಿಸುವ ಉದ್ದೇಶದಿಂದ ಮತ್ತೊಂದು ಅತಿ ಮಹತ್ವದ 'ಮದ್ರಾಸ್ ವ್ಯವಸಾಯಗಾರರ ಪರಿಹಾರ ಕಾನೂನು ೧೯೩೮'ನ್ನು ಜಾರಿಗೊಳಿಸಿ, ಅದರಂತೆ ಆ ಸಮಯದಲ್ಲಿ ಸಾಲಗಾರರ ಮೇಲಿದ್ದ ಸಾಲದ ಮೊತ್ತವನ್ನು ಕಡಿಮೆ ಮಾಡುವುದರೊಂದಿಗೆ, ಬಡ್ಡಿದರವನ್ನು ಸಹ ಇಳಿಸುವಂತೆ ಕ್ರಮ ಕೈಗೊಳ್ಳಲಾಯಿತು.

ರಾಜ್ಯ ಪುನರ್‌ವಿಂಗಡಣೆಯ ನಂತರ ಸಮಗ್ರ ಕರ್ನಾಟಕಕ್ಕೆ ಅನ್ವಯವಾಗುವಂತೆ ಕರ್ನಾಟಕ ಲೇವಾದೇವಿ ಕಾಯ್ದೆ ೧೯೬೧ ಹಾಗೂ ನಿಯಮಗಳು ೧೯೬೬ ಮತ್ತು ಕರ್ನಾಟಕ ಗಿರವಿದಾರರ ಕಾಯ್ದೆ ೧೯೬೧ ಹಾಗೂ ನಿಯಮಗಳು ೧೯೬೬ ಇವುಗಳನ್ನು ರಾಜ್ಯಾದ್ಯಂತ ೧೯೬೬ರಿಂದ ಜಾರಿಗೆ ತರಲಾಯಿತು. ಈ ಕಾನೂನಿನ್ವಯ ರಾಜ್ಯ ಮಟ್ಟದಲ್ಲಿ ರಾಜ್ಯ ಸಹಕಾರ ಸಂಘಗಳ ನಿಬಂಧಕರನ್ನು ಪದನಿಮಿತ್ತ ಲೇವಾದೇವಿಗಾರರ ರಿಜಿಸ್ಟ್ರಾರ್ ಜನರಲ್ ಎಂದೂ ನೇಮಿಸಲಾಯಿತು.

ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಪದನಿಮಿತ್ತ ಲೇವಾದೇವಿಗಾರರ ರಿಜಿಸ್ಟ್ರಾರ್ ಎಂದೂ ನೇಮಿಸಿ ಅವರಿಗೆ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರಸ್ತುತ ಮೇಲಿನ ಕಾನೂನಿನ್ವಯ ಜಿಲ್ಲೆಯಲ್ಲಿ ಲೇವಾದೇವಿ ವಯವಹಾರವನ್ನು ನಡೆಸಲು ಜಿಲ್ಲೆಯ ಲೇವಾದೇವಿಗಾರರ ರಿಜಿಸ್ಟ್ರಾರ್‌ರಿಂದ ಪರವಾನಗಿಯನ್ನು ಪಡೆಯಬೇಕಿದೆ. ಪರವಾನಗಿ ಇಲ್ಲದೇ ಲೇವಾದೇವಿ ವ್ಯವಹಾರವನ್ನು ಕೈಗೊಳ್ಳುವುದು ಕಾನೂನಿನನ್ವಯ ಅಪರಾಧವಾಗಿದೆ. ಸರ್ಕಾರದ ೧೯೬೫ರ ಅಧಿಸೂಚನೆ ಅನ್ವಯ ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿದರವನ್ನು ಒತ್ತೆ ಸಾಲಕ್ಕೆ ಶೇ.೧೫ ಮತ್ತು ಒತ್ತೆರಹಿತ ಸಾಲಕ್ಕೆ ಶೇ.೧೮ ಎಂದು ನಿಗದಿಪಡಿಸಲಾಗಿತ್ತು.

ಸಹಕಾರ ಇಲಾಖೆಯ ಆಡಳಿತವನ್ನು ೧೯೬೬ರಲ್ಲಿ ಪುನರ್ರಚಿಸಲಾಯಿತು. ಅದರಂತೆ ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಸಹಕಾರ ಸಂಘಗಳ ಉಪನಿಬಂಧಕರೆಂದು ಹಾಗೂ ಉಪವಿಭಾಗದ ಮುಖ್ಯಸ್ಥರನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರೆಂದು ಪುನರ್‌ನಾಮಕರಣ ಮಾಡಲಾಯಿತು. ಅಂದಿನಿಂದ ಈ ಅಧಿಕಾರಿಗಳು ೧೯೬೧ರ ಕರ್ನಾಟಕ ಲೇವಾದೇವಿ ಕಾಯ್ದೆ ಮತ್ತು ಕರ್ನಾಟಕ ಗಿರವಿದಾರರ ಕಾಯ್ದೆಯನ್ನಲ್ಲದೇ, ೧೯೮೨ರಿಂದ ಚಿಟ್‌ಫಂಡ್ ಕಾಯ್ದೆ ೧೯೮೨ ಮತ್ತು ಚಿಟ್‌ಫಂಡ್ (ಕರ್ನಾಟಕ) ನಿಯಮಾವಳಿ ೧೯೮೨ನ್ನು ಸಹಕಾರ್ಯಾಚರಣೆಗೆ ತರುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿಯದರವನ್ನು ೧೯೯೨ರಲ್ಲಿ ಪರಿಷ್ಕರಿಸಿ ಆಧಾರಿತ ಸಾಲದ ಮೇಲೆ ಶೇ.೨೧ ಮತ್ತು ಆಧಾರರಹಿತ ಸಾಲದ ಮೇಲೆ ಶೇ.೨೩ ಎಂದು ರಾಜ್ಯ ಸರ್ಕಾರ ನಿಗದಿಪಡಿಸಿತ್ತು. ಹೊಸ ಶತಮಾನದ ಆರಂಭದ ಮೂರು ವರ್ಷಗಳಲ್ಲಿ ಸತತ ಮೂರು ವರ್ಷ ರಾಜ್ಯ ಅನುಭವಿಸಿದ ತೀವ್ರ ಬರಪರಿಸ್ಥಿತಿಯನ್ನು ಪರಿಗಣಿಸಿ ಸರ್ಕಾರ ಸಾಲದ ಬಡ್ಡಿದರವನ್ನು ಪುನರ್‌ನಿಗಧಿಗೊಳಿಸಿತು.

ಅದರಂತೆ ಸರ್ಕಾರ ೨೦೦೩ರಲ್ಲಿ ಮತ್ತೆ ಅಧಿಸೂಚನೆಯನ್ನು ಹೊರಡಿಸಿ, ಬಡ್ಡಿಯ ದರವನ್ನು ಆಧಾರಸಾಲಕ್ಕೆ ಶೇ.೧೪ ಮತ್ತು ಆಧಾರ ರಹಿತ ಸಾಲಕ್ಕೆ ಶೇ.೧೬ ಎಂದು ನಿಗದಿಪಡಿಸಿದೆ. ಸರ್ಕಾರದ ನಿಯಮದಂತೆ ಲೇವಾದೇವಿಗಾರರು ಮತ್ತು ಗಿರವಿದಾರರು ಪ್ರತಿ ಐದು ವರ್ಷಕ್ಕೊಮ್ಮೆ ತಮ್ಮ ಪರವಾನಗಿಯನ್ನು ನವೀಕರಿಸಬೇಕಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೬೬–೬೭ರಲ್ಲಿ ಪರವಾನಗಿ ಪಡೆದ ೨೪ ಲೇವಾದೇವಿಗಾರರಿದ್ದರು. ೧೯೭೧–೭೨ರಲ್ಲಿನ ಪರವಾನಗಿ ಪಡೆದ ಲೇವಾದೇವಿಗಾರರ ಸಂಖ್ಯೆ ೩೦ ಆಗಿದ್ದು, ಆ ಪೈಕಿ ಮಂಗಳೂರು ನಗರದಲ್ಲಿ ಅವರ ಸಂಖ್ಯೆ ೨೭ ಆಗಿದ್ದಿತು. ವರ್ಷ ೧೯೮೫–೮೬ರಿಂದ ೨೦೦೩–೨೦೦೪ರವರೆಗಿನ ಕೆಲವು ವರ್ಷಗಳಲ್ಲಿದ್ದಂತೆ ಜಿಲ್ಲೆಯಲ್ಲಿನ ಲೇವಾದೇವಿಗಾರರ ಮತ್ತು ಗಿರವಿದಾರರ ಸಂಖ್ಯೆಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧**

| ವಿವರ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೧–೦೨ | ೨೦೦೨–೦೩ | ೨೦೦೩–೦೪ |
|---|---|---|---|---|---|---|
| ಲೇವಾದೇವಿಗಾರರ ಸಂಖ್ಯೆ | ೧೦೮ | ೧೦೭ | ೩೯೪ | ೨೫೮ | ೨೬೯ | ೨೭೮ |
| ಗಿರವಿದಾರರ ಸಂಖ್ಯೆ | ೧೩೨ | ೧೯೬ | ೮೪೯ | ೩೪೨ | ೩೫೪ | ೩೫೪ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು.

ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿನ ಲೇವಾದೇವಿಗಾರರು ಮತ್ತು ಗಿರವಿದಾರರು ನಡೆಸಿದ ಹಣಕಾಸಿನ ವ್ಯವಹಾರವನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೨** (ಲಕ್ಷ ರೂ.ಗಳಲ್ಲಿ)

| ವರ್ಷ | ಲೇವಾದೇವಿಗಾರರು ನೀಡಿದ ಒಟ್ಟು ಸಾಲ | ಗಿರವಿದಾರರು ನೀಡಿದ ಒಟ್ಟು ಸಾಲ | ಗಿರವಿದಾರರು ಸಂಗ್ರಹಿಸಿದ ಠೇವಣಿ |
|---|---|---|---|
| ೨೦೦೦–೦೧ | ೫೦೧.೬೮ | ೯೬೩.೬೭ | ೨೨೪.೧೬ |
| ೨೦೦೧–೦೨ | ೫೦೮.೪೫ | ೫೮೨.೮೧ | ೩೫೬.೭೩ |
| ೨೦೦೨–೦೩ | ೪೯೯.೧೬ | ೮೯.೬೫ | ೧೫.೦೭ |
| ೨೦೦೩–೦೪ | ೪೦೧.೯೩ | ೪೪೬.೮೭ | ೬೮.೩೫ |
| ೨೦೦೪–೦೫ | ೩೭೮.೦೮ | ೯೧.೦೪ | ೧೦.೨೦ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು.

ಕಳೆದ ಐದು ವರ್ಷಗಳಲ್ಲಿ ಲೇವಾದೇವಿಗಾರರು ಮತ್ತು ಇತರರಿಂದ ಪಡೆದ ಪರವಾನಗಿ ಶುಲ್ಕ ಮತ್ತು ಭದ್ರತಾ ಠೇವಣಿ

**ಕೋಷ್ಟಕ ೬.೩** (ಲಕ್ಷ ರೂ.ಗಳಲ್ಲಿ)

| ವರ್ಷ | ಪರವಾನಗಿ ಶುಲ್ಕ | ಭದ್ರತಾ ಠೇವಣಿ |
|---|---|---|
| ೨೦೦೦–೦೧ | ೨.೪೬ | ೪.೨೦ |
| ೨೦೦೧–೦೨ | ೨.೯೨ | ೪.೦೫ |
| ೨೦೦೨–೦೩ | ೭.೩೪ | ೫.೪೦ |
| ೨೦೦೩–೦೪ | ೨.೬೨ | ೩.೦೭ |
| ೨೦೦೪–೦೫ | ೧೨.೧೭ | ೩.೩೦ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು

## ಹಣಕಾಸು ಸಂಸ್ಥೆಗಳು

ಅಸಂಘಟಿತ ವಲಯದ ಹಣಕಾಸು ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಖಾಸಗೀ ಸಾಲಿಗರು ಹಾಗೂ ಗಿರವಿ ಸಾಲಿಗರಲ್ಲದೇ ಹಲವಾರು ಬ್ಯಾಂಕೇತರ ಹಣಕಾಸು ಸಂಸ್ಥೆಗಳಾದ ನಿಧಿಗಳು, ಚಿಟ್‌ಫಂಡ್‌ಗಳು, ಫೈನಾನ್ಸ್ ಕಾರ್ಪೋರೇಷನ್‌ಗಳು, ಮುಂತಾದವುಗಳು ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ನೆಲೆನಿಂತು ಬ್ಯಾಂಕೇತರ ವ್ಯವಹಾರವನ್ನು ನಡೆಸುತ್ತಿವೆ. ಅಲ್ಲದೇ ಹೊರ ರಾಜ್ಯದ/ ಜಿಲ್ಲೆಗಳ ಅನೇಕ ಸಂಸ್ಥೆಗಳೂ ತಮ್ಮ ಶಾಖೆಗಳನ್ನು ಈ ಕೇಂದ್ರಗಳಲ್ಲಿ ತೆರೆದಿವೆ. ಈ ಹಣಕಾಸು ಸಂಸ್ಥೆಗಳು ಸ್ಥಳೀಯವಾಗಿ ವ್ಯಾಪಾರ, ಉದ್ದಿಮೆ, ಯಂತ್ರೋಪಕರಣಗಳ ಖರೀದಿ, ವಾಹನ ಖರೀದಿ, ಮುಂತಾದವುಗಳಿಗೆ ಅಡಮಾನ ಸಾಲ, ಕಂತು ಖರೀದಿ ಸಾಲವನ್ನು ಒದಗಿಸುತ್ತವೆ. ಮಧ್ಯಮ ವರ್ಗದ ಜನರ ಉಳಿತಾಯವನ್ನು ಹಲವಾರು ಆಕರ್ಷಕ ಯೋಜನೆಗಳ ಮೂಲಕ, ಹೆಚ್ಚಿನ ಬಡ್ಡಿಯನ್ನು ನೀಡುವ ಮೂಲಕ ಹಾಗೂ ನಗದು ಬಹುಮಾನಗಳನ್ನು ಕೊಡುವ ಆಮಿಷಗಳ ಮೂಲಕ ಆಕರ್ಷಿಸಿ ಈ ಸಂಸ್ಥೆಗಳು ತಮ್ಮ ಠೇವಣಿ ಸಂಗ್ರಹವನ್ನು ಹೆಚ್ಚಿಸುತ್ತವೆ. ಇವುಗಳಿಂದ ಸಾಲದ ನೆರವನ್ನು ಪಡೆಯುವವರಲ್ಲಿ ಹೆಚ್ಚಿನವರು ಸಣ್ಣ ವ್ಯಾಪಾರಿಗಳು, ನೌಕರವರ್ಗದವರು ಹಾಗೂ ಮೋಟಾರು ಸಾರಿಗೆ ಉದ್ದಿಮೆಯಲ್ಲಿ ತೊಡಗಿರುವವರು. ಈ ಹಣಕಾಸು ಸಂಸ್ಥೆಗಳು ಜನರಲ್ಲಿ ಉಳಿತಾಯ ಪ್ರವೃತ್ತಿಯನ್ನು ಬೆಳೆಸುವಲ್ಲಿ ಶಕ್ತವಾದರೂ, ಅವುಗಳ ಅನಿರ್ಬಂಧಿತ ಬೆಳವಣಿಗೆಯು ಹಲವೊಮ್ಮೆ ಅವುಗಳ ಪತನಕ್ಕೆ ಕಾರಣವಾಗುವುದು. ಈ ಸಂಸ್ಥೆಗಳು ಸಾಮಾನ್ಯವಾಗಿ ಭಾರತೀಯ ಪಾಲುದಾರಿಕೆ ಕಾನೂನು ೧೯೩೨ ಅಥವಾ ಕಂಪನಿ ಕಾಯ್ದೆ ೧೯೫೬ರ ಅನ್ವಯ ನೋಂದಾಯಿತ ಸಂಸ್ಥೆಗಳಾಗಿರುತ್ತವೆ. ಕರ್ನಾಟಕ

ಲೇವಾದೇವಿ ಕಾನೂನು ೧೯೬೧ರ ಅನ್ವಯ ಸಹಕಾರ ಇಲಾಖೆ (ಜಿಲ್ಲಾ ಮಟ್ಟದಲ್ಲಿ ಸಹಕಾರಿ ಸಂಘಗಳ ಉಪನಿಬಂಧಕರು) ಈ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೫–೮೬ರಲ್ಲಿ ೪೭೭; ೧೯೯೦–೯೧ ರಲ್ಲಿ ೬೩೯; ೧೯೯೫–೯೬ರಲ್ಲಿ ೯೧೮; ೨೦೦೧–೦೨ ರಲ್ಲಿ ೯೮೬; ೨೦೦೨–೦೩ರಲ್ಲಿ ೯೫೮ ಮತ್ತು ೨೦೦೩–೦೪ರಲ್ಲಿ ೯೦೭ ಹಣಕಾಸು ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ಈ ಹಣಕಾಸು ಸಂಸ್ಥೆಗಳು ಕಳೆದ ಐದು ವರ್ಷಗಳಲ್ಲಿ ಸಂಗ್ರಹಿಸಿದ ಠೇವಣಿ ಮತ್ತು ನೀಡಿದ ಸಾಲಗಳು ಕ್ರಮವಾಗಿ ೨೦೦೦–೦೧ :೩೪೬.೧೬ ಲಕ್ಷ ರೂ ಮತ್ತು ೫೫೭ ಲಕ್ಷ ರೂ.; ೨೦೦೧–೦೨ : ೫೦೭.೨೪ ಲಕ್ಷ ರೂ. ಮತ್ತು ೮೩೨.೩೭ ಲಕ್ಷ ರೂ.; ೨೦೦೨–೦೩ : ೪೩.೧೬ ಲಕ್ಷ ರೂ. ಮತ್ತು ೬೦೬.೬೮ ಲಕ್ಷ ರೂ ; ೨೦೦೩–೦೪ : ೫೭.೨೦ ಲಕ್ಷ ರೂ. ಮತ್ತು ೫೭೨.೦೫ ಲಕ್ಷ ರೂ.; ೨೦೦೪–೦೫ : ೧೭.೦೧ಲಕ್ಷ ರೂ. ಮತ್ತು ೧೯೯.೭೬ ಲಕ್ಷ ರೂ.ಗಳಾಗಿತ್ತು. ಚಿಟ್‌ಫಂಡ್ ಕಾಯ್ದೆ ೧೯೮೨ರ ಅನ್ವಯ ನೋಂದಣಿ ಪಡೆದ ಜಿಲ್ಲೆಯಲ್ಲಿನ ಚಿಟ್‌ಫಂಡ್‌ಗಳ ಸಂಖ್ಯೆ ೨೦೦೦–೦೧ರಲ್ಲಿ ೧೩; ೨೦೦೧–೦೨ರಲ್ಲಿ ೧೩; ೨೦೦೨–೦೩ರಲ್ಲಿ ೬, ೨೦೦೩–೦೪ರಲ್ಲಿ ೪ ಮತ್ತು ೨೦೦೪–೦೫ರಲ್ಲಿ ೮ ಆಗಿದ್ದು, ಆಯಾ ವರ್ಷಗಳಲ್ಲಿನ ಅವುಗಳ ಹಣಕಾಸಿನ ವ್ಯವಹಾರದ ಮೊತ್ತ ಕ್ರಮವಾಗಿ ರೂ. ೬೭.೨೦ ಲಕ್ಷ ೬೪.೨೦ ಲಕ್ಷ ರೂ; ೧೩.೨೦ ಲಕ್ಷ ರೂ; ೧೮.೬೦ ಲಕ್ಷ ರೂ. ಮತ್ತು ೩೧.೬೦ ಲಕ್ಷ ರೂ.ಗಳಾಗಿದ್ದಿತು.

## ವಾಣಿಜ್ಯ ಬ್ಯಾಂಕುಗಳು

ಲಭ್ಯ ದಾಖಲೆಗಳನ್ವಯ ಇಪ್ಪತ್ತನೆಯ ಶತಮಾನದ ಆರಂಭಕ್ಕೂ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಬಗೆಯ ಸ್ಥಳೀಯ ಹಣಕಾಸು ಸಂಸ್ಥೆಗಳು ತಲೆಎತ್ತಿರಲಿಲ್ಲವೆಂದು ಕಂಡು ಬರುತ್ತದೆ. ಅಂದಿನ ಬಹುಮೂಲ್ಯ ಪ್ರಕಟಣೆಗಳಾದ ಸ್ಟುರ್ರೋಕ್ ಮತ್ತು ಸ್ಟೋರ್ಟ್ ಕೈಪಿಡಿಗಳು (ಮ್ಯಾನ್ಯುಯಲ್) ಸಹ ಆ ಬಗ್ಗೆ ಯಾವುದೇ ಸುಳಿವನ್ನು ನೀಡುವುದಿಲ್ಲ. ಆದರೆ ಅದೇ ಸಮಯದಲ್ಲಿ ಮದ್ರಾಸು ಪ್ರಾಂತದಲ್ಲಿ ಹಲವೆಡೆ ಮಧ್ಯಮ ವರ್ಗದ ಜನರಿಂದ ಸ್ಥಾಪಿಸಲ್ಪಟ್ಟ 'ನಿಧಿ' ಅಥವಾ 'ಪರಸ್ಪರ ಸಹಾಯಕ' ಹಣಕಾಸು ಸಂಸ್ಥೆಗಳು ಬಲವಾಗಿ ನೆಲೆಯೂರಿದ್ದ ವಿಷಯವನ್ನು ೧೮೯೫ರ ಫ್ರೆಡ್ರಿಕ ನಿಕೋಲ್‌ಸನ್‌ನ ಒಂದು ವರದಿಯಿಂದ ತಿಳಿದುಬರುತ್ತದೆ. ಈ ವರದಿಯಲ್ಲೂ ಯಾವುದೇ 'ನಿಧಿ' ಅಥವಾ 'ಪರಸ್ಪರ ಸಹಾಯಕ' ಹಣಕಾಸು ಸಂಸ್ಥೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದ ಬಗ್ಗೆ ಬೆಳಕನ್ನು ಚೆಲ್ಲುವುದಿಲ್ಲ. ಅನೇಕ ವಿಷಯಕ್ಕೆ ಸಂಬಂಧಿಸಿದಂತೆ ವ್ಯಾಪಕ ಮಾಹಿತಿ ಒಳಗೊಂಡಿರುವ ಈ ಪ್ರಕಟಣೆಗಳಲ್ಲಿ ಜಿಲ್ಲೆಯ ದೇಶೀಯ ಹಣಕಾಸು ಸಂಸ್ಥೆಗಳ ಬಗ್ಗೆ ಯಾವುದೇ ದಾಖಲೆ ಇಲ್ಲದಿರುವುದರಿಂದ, ಇಪ್ಪತ್ತನೆಯ ಶತಮಾನದ ಪೂರ್ವದಲ್ಲಿ ಯಾವುದೇ ಹಣಕಾಸು ಸಂಸ್ಥೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿತವಾಗಿರಲಿಲ್ಲವೆಂದು ಹೇಳಬಹುದಾಗಿದೆ.

ಸ್ಥಳೀಯ ಬ್ಯಾಂಕುಗಳು ಜಿಲ್ಲೆಯಲ್ಲಿ ಹುಟ್ಟುವ ಮೊದಲು ಮದ್ರಾಸಿನಿಂದ ಬಂದ ಎರಡು ಬ್ಯಾಂಕುಗಳು ಇಲ್ಲಿ ವ್ಯವಹಾರವನ್ನು ಪ್ರಾರಂಭಿಸಿದ್ದವು. ಈಸ್ಟ್ ಇಂಡಿಯಾ ಕಂಪನಿ ಸರಕಾರದ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ 'ಪ್ರೆಸಿಡೆನ್ಸಿ ಬ್ಯಾಂಕ್ ಆಫ್ ಮದ್ರಾಸ್' (೧೮೪೩) (೧೯೨೦ರಲ್ಲಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಆಗಿಯೂ, ೧೯೫೬ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆಗಿಯೂ ಪರಿವರ್ತನೆ ಹೊಂದಿತು) ಮಂಗಳೂರಿನಲ್ಲಿ ೧೮೬೮ರಲ್ಲಿ ಶಾಖೆಯನ್ನು ತೆರೆದಿತ್ತು. ಅದರ ಸೇವೆ ಶ್ರೀಮಂತ ವರ್ಗದ ಗ್ರಾಹಕರಿಗೆ ಮಾತ್ರ ಸೀಮಿತವಾಗಿತ್ತು. ಆ ಬಳಿಕ ಜಿ.ಅರ್ಬರ್ಟ್‌ನಾಟ್ ಅಂಡ್ ಕಂಪನಿ ಎಂಬ ಆಂಗ್ಲ ವ್ಯಾಪಾರೀ ಸಂಸ್ಥೆ ಕೂಡ ಮಂಗಳೂರಿನಲ್ಲಿ ಹಣಕಾಸು ವ್ಯವಹಾರವನ್ನು ಪ್ರಾರಂಭಿಸಿತ್ತು. ಜನಸಾಮಾನ್ಯರಿಂದ ದೂರವಾಗಿದ್ದ ಈ ಬ್ಯಾಂಕುಗಳು ಲಾಭದಾಯಕ ವ್ಯವಹಾರವನ್ನು ನಡೆಸುತ್ತಿದ್ದವು. ಅರ್ಬರ್ಟನಾಟ್ ಬ್ಯಾಂಕ್ ಅಮೇರಿಕದ ರೈಲುಸಾರಿಗೆ, ದಕ್ಷಿಣ ಆಫ್ರಿಕಾದ ಚಿನ್ನದ ಗಣಿ ಉದ್ಯಮಗಳಲ್ಲಿ ಹಣ ಹೂಡಿತ್ತು. ಈ ಉದ್ಯಮಗಳು ನಷ್ಟಕ್ಕೊಳಗಾದ ಕಾರಣ, ಆ ಬ್ಯಾಂಕು ೧೯೦೬ರಲ್ಲಿ ದಿವಾಳಿಯಾಯಿತು. ಅರ್ಬರ್ಟ್‌ನಾಟ್ ಬ್ಯಾಂಕಿನ ಕುಸಿತ ಹಾಗೂ ಆ ವೇಳೆಗಾಗಲೇ ದೇಶದೆಲ್ಲೆಡೆ ಹರಡಿದ ಸ್ವದೇಶೀ ಚಳವಳಿ ಜಿಲ್ಲೆಯ ಜನರ ಮೇಲೂ ಪ್ರಭಾವ ಬೀರಿ, ದೇಶೀಯ ಹಣಕಾಸು (ಕೂಡು ಬಂಡವಾಳ) ಸಂಸ್ಥೆಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಅಂದಿನ ಕಾಲದಲ್ಲಿ ಕನಿಷ್ಟ ಬಂಡವಾಳದ ನಿರ್ಬಂಧವಿಲ್ಲದ್ದರಿಂದ ವ್ಯಾಪಾರೀ ವರ್ಗದ ಜನ, ವಿದ್ಯಾವಂತ ವರ್ಗದ ಜನ, ಮುಖ್ಯವಾಗಿ ವಕೀಲರು ಮತ್ತು ವೈದ್ಯರು ಸೇರಿ ಸ್ಥಳೀಯ ಬ್ಯಾಂಕುಗಳ ಸ್ಥಾಪನೆಗೆ ಮುಂದಾಗಿದ್ದರು. ಆ ದಿನಗಳಲ್ಲಿ ಕೋಮುವಾರು ನೆಲೆಯಲ್ಲೂ ಬ್ಯಾಂಕುಗಳ ಸ್ಥಾಪನೆಗೆ ಪ್ರೋತ್ಸಾಹ ದೊರಕುತ್ತಿತ್ತು. ಈ ರೀತಿಯ ಕೋಮುವಾರು ಪ್ರೋತ್ಸಾಹವು ಹಲವೊಮ್ಮೆ ಬ್ಯಾಂಕುಗಳಿಗೆ ಆಗುವ ಆಘಾತಗಳಿಂದ ಚೇತರಿಸಿಕೊಳ್ಳಲು ಅವಕ್ಕೆ ಸಹಕಾರಿಯಾಗುತ್ತಿತ್ತು. ಕೆಲವೊಂದು ಬ್ಯಾಂಕುಗಳ ಸ್ಥಾಪನೆಯ ನಿಬಂಧನೆಗಳಲ್ಲಿ ಆಯಾ ಕೋಮು ಅಥವಾ ಜಾತಿಗೆ ಸೇರಿದ ವ್ಯಕ್ತಿಗಳಿಗೆ ಮಾತ್ರ ಬ್ಯಾಂಕುಗಳ ಪಾಲುದಾರರಾಗುವ ಹಕ್ಕು ಮೀಸಲಾಗಿತ್ತು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊಟ್ಟ ಮೊದಲ ದೇಶೀಯ ಬ್ಯಾಂಕು 'ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಉಡುಪಿ) ಲಿ. (೧೯೩೭ರಲ್ಲಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿ ಎಂದು ಮರುನಾಮಕರಣ; ೧೯೫೮ರಲ್ಲಿ ಮಂಗಳೂರಿಗೆ ಆಡಳಿತ ಕಚೇರಿಯ ಸ್ಥಳಾಂತರ; ೧೯೭೨ರಲ್ಲಿ ಕಾರ್ಪೊರೇಷನ್ ಬ್ಯಾಂಕ್ ಲಿ ಎಂದು ಪುನಃ ನಾಮ ಬದಲಾವಣೆ, ೧೯೮೦ರಲ್ಲಿ ರಾಷ್ಟ್ರೀಕರಣ) ೧೯೦೬ರ ಮೇ ೨೮ರಂದು ಉಡುಪಿಯಲ್ಲಿ ನೋಂದಣಿಯಾಯಿತು. ಆ ನಂತರ ಮಂಗಳೂರಿನಲ್ಲಿ ೧೯೦೬ರ ಜುಲೈ ಒಂದರಂದು 'ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಲಿ' (೧೯೧೦ರಲ್ಲಿ ಕೆನರಾ ಬ್ಯಾಂಕ್ ಲಿ ಎಂದು ಹೆಸರಿನ ಬದಲಾವಣೆ; ೧೯೫೪ರಲ್ಲಿ ಬೆಂಗಳೂರಿಗೆ ಆಡಳಿತ ಕಚೇರಿಯ ಸ್ಥಳಾಂತರ; ೧೯೬೯ರಲ್ಲಿ ರಾಷ್ಟ್ರೀಕರಣ) ಸ್ಥಾಪನೆಯಾಯಿತು. ಇಂದು ಖಾಸಗೀ ಕ್ಷೇತ್ರದಲ್ಲಿ ಒಂದು ಪ್ರಮುಖ ಬ್ಯಾಂಕಾಗಿರುವ 'ಕರ್ನಾಟಕ ಬ್ಯಾಂಕ್ ಲಿ' ಮಂಗಳೂರಿನಲ್ಲಿ ೧೯೨೪ರ ಫೆಬ್ರವರಿ ೨೮ರಂದು ನೋಂದಣಿಯಾಯಿತು. 'ಸಿಂಡಿಕೇಟ್ ಬ್ಯಾಂಕ್ ಲಿ' ಎಂದು ೧೯೬೧ರಲ್ಲಿ ಹೆಸರನ್ನು ಬದಲಾಯಿಸಿಕೊಂಡ 'ಕೆನರಾ ಇಂಡಸ್ಟ್ರಿಯಲ್ ಆ್ಯಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ' ೧೯೨೫ರ ಅಕ್ಟೋಬರ್ ೨೦ರಂದು ಉಡುಪಿಯಲ್ಲಿ ಜನ್ಮತಾಳಿತು. ಉಡುಪಿ ಸಮೀಪದ (ಮೂರು ಕಿ.ಮಿ) ಮಣಿಪಾಲಕ್ಕೆ ೧೯೬೪ರಲ್ಲಿ ಕೇಂದ್ರ ಕಚೇರಿಯನ್ನು ಸ್ಥಳಾಂತರಿಸಿಕೊಂಡ ಈ ಬ್ಯಾಂಕು ೧೯೬೯ರಲ್ಲಿ ರಾಷ್ಟ್ರೀಕರಣವಾಯಿತು. ೧೯೮೦ರಲ್ಲಿ ರಾಷ್ಟ್ರೀಕರಣಗೊಂಡ 'ವಿಜಯಾ ಬ್ಯಾಂಕ್'ಮಂಗಳೂರಿನಲ್ಲಿ ೧೯೩೧ರ ಮೇ ೫ ರಂದು ಸ್ಥಾಪನೆಯಾಯಿತು. ಮೇಲಿನ ಐದು ಪ್ರಮುಖ ಬ್ಯಾಂಕುಗಳನ್ನೊಳಗೊಂಡಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿತಗೊಂಡ ಇತರ ಖಾಸಗೀ ಬ್ಯಾಂಕುಗಳ ವಿವರವನ್ನು ಕೋಷ್ಟಕ ೬.೩(ಅ)ರಲ್ಲಿ ನೀಡಲಾಗಿದೆ.

## ಬ್ಯಾಂಕುಗಳ ಶಾಖಾ ವಿಸ್ತರಣೆ ಹಾಗೂ ಬೆಳವಣಿಗೆ

ಬ್ಯಾಂಕು ಶಾಖೆಗಳ ಸ್ಥಾಪನೆಗೆ ೧೯೪೯ರ ಮೊದಲು ಯಾವುದೇ ನಿರ್ಬಂಧಗಳಿರಲಿಲ್ಲ. ಜಿಲ್ಲೆಯ ಬ್ಯಾಂಕುಗಳು ತಮ್ಮ ಹಣಕಾಸು ವ್ಯವಹಾರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ೧೯೨೦ರ ದಶಕದಲ್ಲಿ ಶಾಖಾ ವಿಸ್ತರಣೆಯೋಜನೆಯನ್ನು ಹಮ್ಮಿಕೊಂಡವು. ಶಾಖೆಗಳ ವ್ಯಾಪಕ ಜಾಲವನ್ನು ಹೊಂದುವುದೂ ಸಹ ಆ ದಿನಗಳಲ್ಲಿ ಅವುಗಳಿಗೆ ಘನತೆಯ ಸಂಕೇತವಾಗಿದ್ದಿತು. ಅದರಂತೆ ಜಿಲ್ಲೆಯ ಬ್ಯಾಂಕುಗಳು ಜಿಲ್ಲೆಯ ಮತ್ತು ಜಿಲ್ಲೆಯ ಹೊರಗಿನ ಪ್ರಮುಖ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ ತಮ್ಮ ಶಾಖೆಗಳನ್ನು ವಿಸ್ತರಿಸಿದವು. ಅಲ್ಲದೇ ಜಿಲ್ಲೆಯ ಹೊರಗಿನ ಕೆಲ ಬ್ಯಾಂಕುಗಳು ಸಹ ಮೊದಲು ಬಂದರು ಪಟ್ಟಣ ಮಂಗಳೂರಿನಲ್ಲಿ ತಮ್ಮ ಶಾಖೆಗಳನ್ನು ತೆರೆದವು. ಮಲಬಾರ್ ಜಿಲ್ಲೆಯ ಕಲ್ಲಿಕೋಟೆಯಲ್ಲಿ ೧೯೧೩ರಲ್ಲಿ ಜನ್ಮತಾಳಿದ ನೆಡುಂಗಾಡಿ ಬ್ಯಾಂಕ್ ಲಿ. ಮಂಗಳೂರಿನಲ್ಲಿ ೧೯೨೦ರಲ್ಲಿ ಶಾಖೆಯನ್ನು ತೆರೆದ ಜಿಲ್ಲೆಯ ಹೊರಗಿನ ಮೊದಲ ದೇಶೀಯ ಬ್ಯಾಂಕ್ ಆಗಿತ್ತು. ಈ ಶಾಖೆ ೧೯೫೦ರ ದಶಕದ ಕೆಲವು ವರ್ಷಗಳವರೆಗೆ ಕಾರ್ಯನಿರ್ವಹಿಸುತ್ತಿತ್ತು. ಆನಂತರ ಕಾರ್ಯಸ್ಥಗಿತಗೊಳಿಸಿದ ಶಾಖೆ, ಬಹಳ ವರ್ಷಗಳ ನಂತರ ೧೯೮೨ರಲ್ಲಿ ಪುನಃ ಶಾಖೆಯನ್ನು ಮುಂದುವರಿಸಿತು. ನಂತರ ೨೦೦೩ರಲ್ಲಿ ಈ ಬ್ಯಾಂಕು ಪಂಜಾಬ್ ನ್ಯಾಷನಲ್ ಬ್ಯಾಂಕಿನೊಂದಿಗೆ ವಿಲೀನಗೊಂಡಿತು. ಉಡುಪಿಯ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿ. ತನ್ನ ಮೊದಲ ಶಾಖೆಯನ್ನು ತಾಲೂಕು ಕೇಂದ್ರ ಕುಂದಾಪುರದಲ್ಲಿ ೧೯೨೩ರಲ್ಲಿ ತೆರೆಯಿತು. ನೇರ ರಸ್ತೆ ಸಂಪರ್ಕದ ಕೊರತೆಯಿಂದಾಗಿ ಆ ದಿನಗಳಲ್ಲಿ ಕುಂದಾಪುರ ಬಂದರಿನ ಜಲಮಾರ್ಗದ ಮೂಲಕ ಇತರೆಡೆಗಳಿಗೆ ವ್ಯಾಪಕ ಸರಕುಗಳು ರವಾನೆಯಾಗುತ್ತಿತ್ತು. ಈ ಬ್ಯಾಂಕಿನ ಎರಡನೆಯ ಶಾಖೆ ಮಂಗಳೂರಿನಲ್ಲಿ ೧೯೨೬ರ ಆಗಸ್ಟ್‌ನಲ್ಲಿ ಸ್ಥಾಪನೆಯಾಯಿತು. ಮಂಗಳೂರಿನ ಕೆನರಾ ಬ್ಯಾಂಕ್ ಶಾಖಾ ವಿಸ್ತರಣೆಯ ಯೋಜನೆಯನ್ನು ೧೯೨೬ರಲ್ಲಿ ಕೈಗೊಂಡಿತು. ಆ ವೇಳೆಗಾಗಲೇ ಮಂಗಳೂರು ಪಟ್ಟಣದಲ್ಲಿ ನಾಲ್ಕು ಸ್ಥಳೀಯ ಬ್ಯಾಂಕುಗಳಲ್ಲದೇ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದ ಮತ್ತು ನೆಡುಂಗಾಡಿ ಬ್ಯಾಂಕಿನ ಒಂದೊಂದು ಶಾಖೆ ಕಾರ್ಯನಿರ್ವಹಿಸುತ್ತಿತ್ತು. ಅದು ೧೯೨೬ರ ಏಪ್ರಿಲ್ ಒಂದರಂದು ತಾಲೂಕು ಕೇಂದ್ರವಾದ ಕಾರ್ಕಳದಲ್ಲಿ ತನ್ನ ಮೊದಲ ಶಾಖೆಯನ್ನು ಸ್ಥಾಪಿಸಿತು (ಆ ನಂತರ ಜಿಲ್ಲೆಯ ಹೊರಗಿನ ಕಾಸರಗೋಡು ಮತ್ತು ಕೊಚ್ಚಿಯಲ್ಲೂ ಶಾಖೆಗಳನ್ನು ತೆರೆಯಿತು). ಕಾರ್ಕಳ ಆಗಲೇ ಒಂದು ಪ್ರಮುಖ ವ್ಯಾಪಾರೀ ಕೇಂದ್ರವಾಗಿದ್ದತು. ಮಂಗಳೂರಿಗೆ ಅಲ್ಲಿಂದ ಅಕ್ಕಿ ಮತ್ತು ಇತರ ಆಹಾರ ಧಾನ್ಯಗಳು ರಫ್ತಾಗುತ್ತಿತ್ತು.

ಜಿಲ್ಲೆಯ ಬ್ಯಾಂಕುಗಳಲ್ಲಿ ೧೯೨೦ಕ್ಕೆ ಮೊದಲು ಉಳಿತಾಯ ಖಾತೆಯ (ಸೇವಿಂಗ್ ಬ್ಯಾಂಕ್) ಸೌಲಭ್ಯ ಇರಲಿಲ್ಲ. ಅವಧಿ ಠೇವಣಿ ಸೌಲಭ್ಯಗಳು ಮಾತ್ರ ಆಚರಣೆಯಲ್ಲಿದ್ದವು. ಜನರಿಗೆ ಸೇವಿಂಗ್ಸ್ ಬ್ಯಾಂಕ್ ಖಾತೆಯ ಸೌಲಭ್ಯ ಪರಿಚಯಿಸಿದ (೧೯೨೦ರಲ್ಲಿ) ಕೀರ್ತಿ ಮೊದಲು ಕೆನರಾ ಬ್ಯಾಂಕಿಂಗ್ ಕಾರ್ಪೋರೇಷನ್‌ಗೆ ಸಲ್ಲುತ್ತದೆ. ಪ್ರಾರಂಭದಲ್ಲಿ ಈ ಖಾತೆಗಳಲ್ಲಿ ತೊಡಗಿಸಬಹುದಾದ ಹಾಗೂ ಖಾತೆಯಿಂದ ಹಿಂತೆಗೆಯಬಹುದಾದ ಮೊತ್ತಗಳ ಮೇಲೆ ಹಲವು ರೀತಿಯ ನಿಯಂತ್ರಣಗಳಿದ್ದವು. ಬ್ಯಾಂಕುಗಳ ಸಾಲ ನೀಡಿಕೆಯ ಪದ್ಧತಿಯೂ ಸಾಕಷ್ಟು ಭದ್ರತೆಗಳನ್ನು ಪಡೆದೇ ಸಾಲ ಕೊಡುವುದಾಗಿತ್ತು. ವ್ಯಾಪಾರೀ ಸಾಲ ಹಾಗೂ ಹುಂಡಿಗಳು ಸರ್ವೇ ಸಾಮಾನ್ಯವಾದ ಸಾಲ

**ಕೋಷ್ಟಕ ೬.೩(ಅ) : ಅವಿಭಜಿಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿತಗೊಂಡ ಬ್ಯಾಂಕುಗಳ ವಿವರ**

| | ಬ್ಯಾಂಕಿನ ಹೆಸರು | ಜನ್ಮಸ್ಥಳ | ನೋಂದಣಿ ದಿನಾಂಕ | ವಿವರ |
|---|---|---|---|---|
| ೧ | ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ (ಉಡುಪಿ) ಲಿ | ಉಡುಪಿ | ೨೮–೦೫–೧೯೦೬ | ೧೯೭೨ರಲ್ಲಿ ಕಾರ್ಪೋರೇಶನ್ ಬ್ಯಾಂಕ್ ಎಂದು ನಾಮ ಬದಲಾವಣೆ, ಏಪ್ರಿಲ್ ೧೯೮೦ರಲ್ಲಿ ರಾಷ್ಟ್ರೀಕರಣ |
| ೨ | ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಲಿ | ಮಂಗಳೂರು | ೦೧–೦೭–೧೯೦೬ | ೧೯೧೧ರಲ್ಲಿ ಕೆನರಾ ಬ್ಯಾಂಕ್, ಜುಲೈ ೧೯೬೯ರಲ್ಲಿ ರಾಷ್ಟ್ರೀಕರಣ |
| ೩ | ಕೆನರಾ ಎಂಟರ್‌ಪ್ರೈಸಸ್ ಲಿ. | ಪುತ್ತೂರು | ೧೩–೦೩–೧೯೨೦ | ೧೯೪೫ರಲ್ಲಿ ಕೆನರಾ ಕಮರ್ಷಿಯಲ್ ಬ್ಯಾಂಕ್ ಲಿ ಎಂದು ಹೆಸರಿನ ಬದಲಾವಣೆ, ೧೯೫೦ರಲ್ಲಿ ವಿಸರ್ಜನೆ |
| ೪ | ಪಾಂಗಾಳ ನಾಯಕ್ ಬ್ಯಾಂಕ್ ಲಿ | ಉಡುಪಿ | ೧೫–೦೪–೧೯೨೦ | ೧೯೬೮ರಲ್ಲಿ ಕೆನರಾ ಬ್ಯಾಂಕಿನಲ್ಲಿ ವಿಲೀನ |
| ೫ | ಜಯಲಕ್ಷ್ಮೀ ಬ್ಯಾಂಕ್ ಲಿ | ಮಂಗಳೂರು | ೧೧–೧೦–೧೯೨೩ | ೧೯೬೭ರಲ್ಲಿ ವಿಜಯಾ ಬ್ಯಾಂಕಿನಲ್ಲಿ ವಿಲೀನ |
| ೬ | ಕರ್ನಾಟಕ ಬ್ಯಾಂಕ್ ಲಿ | ಮಂಗಳೂರು | ೨೮–೦೨–೧೯೨೪ | ಖಾಸಗೀ ಬ್ಯಾಂಕಾಗಿಯೇ ಮುಂದುವರಿದಿದೆ. |
| ೭ | ಉಡುಪಿ ಬ್ಯಾಂಕ್ ಲಿ | ಉಡುಪಿ | ೦೫–೦೫–೧೯೨೫ | ೧೯೫೬ರಲ್ಲಿ ವಿಸರ್ಜನೆ |
| ೮ | ಕೆಥೋಲಿಕ್ ಬ್ಯಾಂಕ್ ಲಿ | ಮಂಗಳೂರು | ೦೫–೦೬–೧೯೨೫ | ೧೯೬೧ರಲ್ಲಿ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ವಿಲೀನ |
| ೯ | ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ | ಉಡುಪಿ | ೨೦–೧೦–೧೯೨೫ | ೧೯೬೧ರಲ್ಲಿ ಸಿಂಡಿಕೇಟ್ ಬ್ಯಾಂಕ್ ಎಂದು ಹೆಸರು ಬದಲಾವಣೆ, ಜುಲೈ ೧೯೬೯ರಲ್ಲಿ ರಾಷ್ಟ್ರೀಕರಣ |
| ೧೦ | ಮುಲ್ಕಿ ಬ್ಯಾಂಕ್ ಲಿ | ಮುಲ್ಕಿ | ೧೫–೦೭–೧೯೨೯ | ೧೯೬೧ರಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಲೀನ |
| ೧೧ | ವಿಜಯಾ ಬ್ಯಾಂಕ್ ಲಿ | ಮಂಗಳೂರು | ೦೨–೦೫–೧೯೩೧ | ಏಪ್ರಿಲ್ ೧೯೮೦ರಲ್ಲಿ ರಾಷ್ಟ್ರೀಕರಣ |
| ೧೨ | ಬ್ಯಾಂಕ್ ಆಫ್ ಮಂಗಳೂರು ಲಿ | ಮಂಗಳೂರು | ೦೪–೦೫–೧೯೩೧ | ೧೯೫೯ರಲ್ಲಿ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ವಿಲೀನ |
| ೧೩ | ಕುಂದಾಪುರ ಬ್ಯಾಂಕ್ ಲಿ | ಕುಂದಾಪುರ | ೧೩–೦೮–೧೯೩೨ | ೧೯೪೦ರಲ್ಲಿ ವಿಸರ್ಜನೆ |
| ೧೪ | ತುಳುನಾಡು ಬ್ಯಾಂಕ್ ಆಫ್ ಸಪ್ಲೈ ಏಜೆನ್ಸಿ ಲಿ. | ಉಡುಪಿ | ೦೨–೧೦–೧೯೩೩ | ೧೯೪೦ರಲ್ಲಿ ವಿಸರ್ಜನೆ |
| ೧೫ | ಜಯಕರ್ನಾಟಕ ಬ್ಯಾಂಕಿಂಗ್ ಅಂಡ್ ಟ್ರೇಡಿಂಗ್ ಕಂ.ಲಿ. | ಕಲ್ಯಾಣಪುರ | ೨೬–೧೧–೧೯೩೩ | ೧೯೪೯ರಿಂದ ಕಾರ್ಯಸ್ಥಗಿತ, ೧೯೫೯ರಲ್ಲಿ ನೋಂದಣಿ ರದ್ದು. |
| ೧೬ | ನಗರಕಾರ್ಸ್ ಬ್ಯಾಂಕ್ ಲಿ | ಮಂಗಳೂರು | ೨೫–೦೯–೧೯೩೪ | ೧೯೫೯ರಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಲೀನ. |
| ೧೭ | ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿ | ಕುಂದಾಪುರ | ೦೭–೧೧–೧೯೩೪ | ೧೯೫೩ರಲ್ಲಿ ವಿಸರ್ಜನೆ. |
| ೧೮ | ಪೈ–ಮನ ಬ್ಯಾಂಕ್ (ಪ್ರೈವೇಟ್) ಲಿ | ಮಂಗಳೂರು | ೨೧–೧೨–೧೯೩೪ | ೧೯೬೧ರಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಲೀನ. |
| ೧೯ | ಅತ್ತೂರ್ ಅಂಡ್ ಜವಾಹರ ಬ್ಯಾಂಕ್ ಲಿ | ಮಂಗಳೂರು | ೨೯–೦೬–೧೯೩೯ | ೧೯೫೧ರಲ್ಲಿ ವಿಸರ್ಜನೆ |
| ೨೦ | ಸದರ್ನ್ ಇಂಡಿಯಾ ಅಪೆಕ್ಸ್ ಬ್ಯಾಂಕ್ ಲಿ | ಉಡುಪಿ | ೨೫–೦೬–೧೯೪೨ | ೧೯೫೩ರಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಲೀನ |
| ೨೧ | ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಲಿ | ಉಡುಪಿ | ೨೬–೦೪–೧೯೪೩ | ೧೯೫೩ರಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಲೀನ |
| ೨೨ | ಪ್ರಭಾಕರ ಬ್ಯಾಂಕ್ ಲಿ | ಮೂಡಬಿದರೆ | ೨೮–೦೩–೧೯೪೫ | ೧೯೫೩ರಲ್ಲಿ ವಿಸರ್ಜನೆ |
| | ಬ್ಯಾಂಕುಗಳ ಶಾಖಾ ವಿಸ್ತರಣೆ ಹಾಗೂ ಬೆಳವಣಿಗೆ | | | |

**ಆಧಾರ :** ೧. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ–೨, ೧೯೮೫

೨. ದ ಬ್ಯಾಂಕಿಂಗ್ ಸಾಗಾ, ಹಿಸ್ಟರಿ ಆಫ್ ಸೌತ್ ಕೆನರಾ ಬ್ಯಾಂಕ್ಸ್, ಡಾ. ಎನ್. ಕೆ. ತಿಂಗಾಳಾಯ, ೧೯೯೯.

ನೀಡಿಕೆಯ ಕ್ರಮಗಳಾಗಿದ್ದವು. ಹೆಚ್ಚಿನ ಬ್ಯಾಂಕುಗಳಲ್ಲಿ ವರ್ತಕರೇ ಪ್ರಮುಖ ಗ್ರಾಹಕರಾಗಿರುತ್ತಿದ್ದರು. ಚಿನ್ನಾಭರಣಗಳ ಸಾಲ ಕೊಡುವುದು ಹೆಚ್ಚಾಗಿ ಎಲ್ಲಾ ಬ್ಯಾಂಕುಗಳಲ್ಲಿದ್ದ ಸಾಮಾನ್ಯ ಪದ್ಧತಿ. ಈ ರೀತಿಯ ಲೇವಾದೇವಿಯು ಎಲ್ಲ ವರ್ಗದ ಜನರಿಗೂ ಅಗತ್ಯಬಿದ್ದಾಗ ಬ್ಯಾಂಕಿನೊಂದಿಗೆ ವ್ಯವಹರಿಸಲು ಅನುಕೂಲತೆಯನ್ನು ಕಲ್ಪಿಸಿತ್ತು.

ಜಿಲ್ಲೆಯ ಸ್ಥಳೀಯ ಬ್ಯಾಂಕುಗಳು ೧೯೧೫–೧೬ ಮತ್ತು ೧೯೨೬ರ ವೇಳೆಗೆ ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೪**

**(ಲಕ್ಷ ರೂ. ಗಳಲ್ಲಿ)**

| ಬ್ಯಾಂಕ್ | ಪಾವತಿಯಾದ ಷೇರು ಬಂಡವಾಳ | | ಠೇವುಗಳು | | ಮುಂಗಡಗಳು | | ನಿವ್ವಳ ಲಾಭ | |
|---|---|---|---|---|---|---|---|---|
| | ೩೧–೩–೧೯೧೬ | ೧೯೨೬ | ೩೧–೩–೧೯೧೬ | ೧೯೨೬ | ೩೧–೩–೧೯೧೬ | ೧೯೨೬ | ೩೧–೩–೧೯೧೬ | ೧೯೨೬ |
| ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಉಡುಪಿ) ಲಿ. | ೦.೨೬ | ೧.೯೮ | ೦.೦೪ | ೬.೪೪ | ೦.೩೫ | ೮.೧೫ | ೦.೦೨ | ೦.೨೫ |
| ಕೆನರಾ ಬ್ಯಾಂಕ್ ಲಿ | ೧.೯೪* | ೩.೫೦ | ೪.೩೩* | ೨೫.೦೯ | ೬.೧೭* | ೯.೯೬ | ೦.೩೧* | ೦.೭೪ |
| ಪಂಗಾಳನಾಯಕ ಬ್ಯಾಂಕ್ ಲಿ | – | ೧.೫೦ | – | ೬.೦೪ | – | ೯.೦೬ | – | ೦.೩೦ |

* ೩೧–೧೨–೧೯೧೫ಕ್ಕೆ (ಸೂಚನೆ: ಕೆನರಾ ಎಂಟರ್‌ಪ್ರೈಸಸ್ ಲಿ. ಮಾಹಿತಿ ಲಭ್ಯವಿಲ್ಲ)

**ಆಧಾರ** : ದ ಬ್ಯಾಂಕಿಂಗ್ ಸಾಗಾ, ಹಿಸ್ಟರಿ ಆಫ್ ಸೌತ್ ಕೆನರಾ ಬ್ಯಾಂಕ್ಸ್, ಡಾ.ಎನ್.ಕೆ.ತಿಂಗಾಳಾಯ, ೧೯೯೯.

ಮೇಲಿನ ಪಟ್ಟಿಯಲ್ಲಿನ ಮೊದಲ ಎರಡು ಬ್ಯಾಂಕುಗಳು ೧೯೨೬ರ ವೇಳೆಗೆ ಎರಡು ದಶಕಗಳ ಬ್ಯಾಂಕಿಂಗ್ ಸೇವೆಯನ್ನು ಪೂರೈಸಿದ್ದವು. ಇತರ ಏಳು ಸ್ಥಳೀಯ ಬ್ಯಾಂಕುಗಳು ಸಹ ಆಗ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೧೯೨೬ರ ವೇಳೆಗೆ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್‌ನ ಮೂರು ಶಾಖೆಗಳಿದ್ದು, ಎಲ್ಲವೂ ಜಿಲ್ಲೆಯ ವ್ಯಾಪ್ತಿಯಲ್ಲೇ ಇದ್ದವು. ಕೆನರಾ ಬ್ಯಾಂಕು ೧೯೨೬ರ ವೇಳೆಗೆ ಒಟ್ಟು ನಾಲ್ಕು ಶಾಖೆಗಳನ್ನು ಹೊಂದಿದ್ದು, ಆ ಪೈಕಿ ಎರಡು ಶಾಖೆಗಳು ಜಿಲ್ಲೆಯ ಹೊರಗೆ ಕಾರ್ಯನಿರ್ವಹಿಸುತ್ತಿದ್ದವು. ಈ ಸಮಯದಲ್ಲಿ ಪಂಗಾಳ ನಾಯಕ ಬ್ಯಾಂಕಿನ (ಪ್ರಧಾನ ಕಚೇರಿ ಹೊರತು ಪಡಿಸಿ) ಯಾವುದೇ ಶಾಖೆ ಸ್ಥಾಪಿತವಾಗಿರಲಿಲ್ಲ. ಪಂಗಾಳ ನಾಯಕ್ ಬ್ಯಾಂಕ್‌ನ ಮೊದಲ ಶಾಖೆ ಮಂಗಳೂರಿನಲ್ಲಿ ೧೯೨೮ರಲ್ಲಿ ಸ್ಥಾಪನೆಯಾಯಿತು.

ಮಂಗಳೂರಿನ ಜಯಲಕ್ಷ್ಮೀ ಬ್ಯಾಂಕು ಪುತ್ತೂರಿನಲ್ಲಿ ೧೯೨೭ರಲ್ಲಿ ತನ್ನ ಮೊದಲ ಶಾಖೆಯನ್ನು ತೆರೆಯಿತು. ಕೆನರಾ ಬ್ಯಾಂಕು ಬ್ಯಾಂಕಿಂಗ್ ವ್ಯವಹಾರವನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶದಿಂದ ೧೯೨೮ರಲ್ಲಿ ದೂರದ ಪ್ರಮುಖ ವಾಣಿಜ್ಯ ನಗರವಾದ ಮುಂಬೈಯಲ್ಲೂ ಶಾಖೆಯನ್ನು ತೆರೆಯುವ ಸಾಹಸವನ್ನು ಮಾಡಿತು. ಆ ವೇಳೆಗಾಗಲೇ ಜಿಲ್ಲಾ ಕೇಂದ್ರ ಮಂಗಳೂರು ಮುಂಬೈಯೊಂದಿಗೆ ವ್ಯಾಪಾರ ಸಂಬಂಧವನ್ನೂ ಬೆಳೆಸಿತ್ತು. ಮುಂಬೈಮತ್ತು ಮಂಗಳೂರು ನಡುವೆ ೧೮೬೭ರಿಂದಲೇ ಸರಕು ಸಾಗಣೆ ಹಾಗೂ ಪ್ರಯಾಣಿಕರಿಗಾಗಿ ಸ್ಟೀಮರ್ ಸೇವೆ ಸಹ ಲಭ್ಯವಾಗಿದ್ದಿತ್ತು. ಬಹಳಷ್ಟು ದಕ್ಷಿಣ ಕನ್ನಡದ ವ್ಯಾಪಾರಿಗಳು ಮುಂಬೈಯಲ್ಲಿ ತಮ್ಮ ಏಜೆನ್ಸಿ ಘಟಕಗಳನ್ನು ('ಪೇಡಿ' ಎಂದು ಕರೆಯಲಾಗುತ್ತಿದ್ದ) ತೆರೆದಿದ್ದರು. ಮುಖ್ಯವಾಗಿ ಈ ವ್ಯಾಪಾರಿ ವರ್ಗದವರಿಗೆ ಬ್ಯಾಂಕಿಂಗ್ ವಹಿವಾಟಿನ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಕೆನರಾ ಬ್ಯಾಂಕ್ ೧೯೨೮ರಲ್ಲಿ ಮುಂಬೈಯಲ್ಲಿ ಅಲ್ಲಿನ ತನ್ನ ಮೊದಲ ಶಾಖೆಯನ್ನು ಸ್ಥಾಪಿಸಿತು. ಮಂಗಳೂರು ಮದ್ರಾಸ್‌ನೊಂದಿಗೂ ವ್ಯಾಪಾರ–ಸಂಬಂಧ ಹೊಂದಿದ್ದಿತು. ಮದ್ರಾಸ್ ನಗರದಲ್ಲಿ (ಚೆನ್ನೈ) ೧೯೩೦ರಲ್ಲಿ ಶಾಖೆಯನ್ನು ಸ್ಥಾಪಿಸಿದ ಕರ್ನಾಟಕ ಬ್ಯಾಂಕು ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಬ್ಯಾಂಕಾಗಿತ್ತು. ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್‌ನ ಮದ್ರಾಸ್ ಶಾಖೆ ೧೯೩೨ರಲ್ಲಿ ಸ್ಥಾಪಿಸಲಾಯಿತು.

ಜನಸಾಮಾನ್ಯರಲ್ಲಿ ಉಳಿತಾಯ ಮತ್ತು ಮಿತವ್ಯಯವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ (ಉಡುಪಿ) ಲಿ. ೧೯೨೮ರಲ್ಲಿ'ಪಿಗ್ಮಿ' ಡೆಪಾಸಿಟ್ ಯೋಜನೆಯನ್ನು ಪ್ರಾರಂಭಿಸಿತು. ದಿನಂಪ್ರತಿ ಬ್ಯಾಂಕು ಗ್ರಾಹಕರ ಮನೆ

ಬಾಗಿಲಿಗೆ ಹೋಗಿ ಅವರಿಂದ ಎರಡಾಣೆಯನ್ನು (೧೨ ಪೈಸೆ) ಸಂಗ್ರಹಿಸಿ ಏಳು ವರ್ಷಗಳ ಬಳಿಕ ದೊಡ್ಡ ಮೊತ್ತವನ್ನು ಹಿಂದಿರುಗಿಸುವ ಯೋಜನೆ ಇದಾಗಿತ್ತು. ಈ ಯೋಜನೆ ಜನಪ್ರಿಯವಾದಂತೆ ಇತರ ಬ್ಯಾಂಕುಗಳು ಸಹ ಸ್ವಲ್ಪಮಟ್ಟಿಗೆ ಅದನ್ನು ಪರಿಷ್ಕೃತ ಗೊಳಿಸಿ ಬೇರೆ ಬೇರೆ ಹೆಸರಿನಲ್ಲಿ ಅನುಷ್ಠಾನಕ್ಕೆ ತಂದವು. ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ (ಉಡುಪಿ) ಲಿ. ತನ್ನ ಮೊದಲ ಶಾಖೆಯನ್ನು ಉಡುಪಿ ತಾಲೂಕಿನ ಒಂದು ಸಣ್ಣ ಹಳ್ಳಿ ಬ್ರಹ್ಮಾವರದಲ್ಲಿ ೧೯೨೮ರಲ್ಲಿ ಸ್ಥಾಪಿಸಿತು. ಎರಡನೆಯ ಶಾಖೆಯನ್ನು ನೆರೆಯ ಉತ್ತರ ಕನ್ನಡ ಜಿಲ್ಲೆಯ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾದ ಕುಮಟ ಪಟ್ಟಣದಲ್ಲಿ ೧೯೨೯ರಲ್ಲಿ ಸ್ಥಾಪಿಸಿತು. ಈ ಬ್ಯಾಂಕು ತಾಲೂಕು ಕೇಂದ್ರ ಕುಂದಾಪುರ (೧೯೩೪) ಮತ್ತು ಕಾರ್ಕಳ (೧೯೩೬) ಹಾಗೂ ಬೆಂಗಳೂರಿನ ಮೊದಲ ಶಾಖೆಯಾದ ಗಾಂಧೀನಗರ (೧೯೩೩) ಶಾಖೆಗಳನ್ನೊಳಗೊಂಡಂತೆ ೧೯೩೬ರ ಅಂತ್ಯಕ್ಕೆ ಒಟ್ಟು ೨೬ ಶಾಖೆಗಳನ್ನು ಸ್ಥಾಪಿಸಿತ್ತು. ಈ ಬ್ಯಾಂಕಿನ ಮುಂಬೈ ಫೋರ್ಟ್ ಶಾಖೆ ೧೯೩೭ರಲ್ಲಿ ಸ್ಥಾಪನೆಯಾಯಿತು. ಆ ಸಮಯಕ್ಕೆ ಕೆನರಾ ಬ್ಯಾಂಕಿನ ಐದು ಶಾಖೆಗಳು ಮುಂಬೈಯಲ್ಲಿದ್ದವು. ಕೆನರಾ ಬ್ಯಾಂಕಿನ ಬೆಂಗಳೂರು ಶಾಖೆ ೧೯೩೩ರಲ್ಲಿ ಸ್ಥಾಪನೆಯಾಯಿತು. ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಬ್ಯಾಂಕು ೧೯೩೫ರಲ್ಲಿ ತನ್ನ ಮೊದಲ ಶಾಖೆಯನ್ನು ಬೈಂದೂರಿನಲ್ಲಿ (ಸಣ್ಣ ಬಂದರು ಪಟ್ಟಣ), ನಂತರ ಕೋಟೇಶ್ವರದ ಶಾಖೆಯನ್ನು, ೧೯೩೭ರಲ್ಲಿ ಸ್ಥಾಪಿಸಿತು. ವಿಜಯಾ ಬ್ಯಾಂಕು ೧೯೩೬ರಲ್ಲಿ ಉಡುಪಿಯಲ್ಲಿ ಮೊದಲ ಶಾಖೆಯನ್ನು ಸಾಗರ ತೀರದ ಕಾಪುವಿನಲ್ಲಿ (ಉಡುಪಿ ತಾ.) ಮತ್ತು ತಾಲೂಕು ಕೇಂದ್ರ ಕುಂದಾಪುರದಲ್ಲಿ ೧೯೩೭ರಲ್ಲಿ, ಶಾಖೆಗಳನ್ನು ತೆರೆಯಿತು. ಕೆಥೊಲಿಕ್ ಬ್ಯಾಂಕು ಉಡುಪಿಯಲ್ಲಿ ೧೯೩೬ರಲ್ಲಿ ಕ್ರೈಸ್ತರ ಸಂಖ್ಯೆ ಹೆಚ್ಚಿದ್ದ ಸ್ಥಳಗಳಾದ ಉಡುಪಿ ತಾಲೂಕಿನ ಕಲ್ಯಾಣಪುರ ಮತ್ತು ಶಿರ್ವ ಹಾಗೂ ಮಂಗಳೂರು ತಾಲೂಕಿನ ಕಿನ್ನಿಗೋಳಿಗಳಲ್ಲಿ ೧೯೩೭ರಲ್ಲಿ ಶಾಖೆಗಳನ್ನು ತೆರೆದಿತ್ತು. ಜಿಲ್ಲೆಯ ಹೊರಗಿನ (ಕಲ್ಲಿಕೋಟೆ) ರಾಧಾಬ್ಯಾಂಕ್ ಲಿ. ಮಂಗಳೂರಿನಲ್ಲಿ ೧೯೩೪ರಲ್ಲಿ ಶಾಖೆಯನ್ನು ತೆರೆಯಿತು (೧೯೪೫ರಲ್ಲಿ ಮುಚ್ಚಲಾಯಿತು). ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೩೬ರ ವೇಳೆಗೆ ಕೆನರಾ ಬ್ಯಾಂಕಿನ ಹನ್ನೊಂದು, ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್‌ನ ಏಳು, ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್‌ನ ನಾಲ್ಕು, ವಿಜಯಾ ಬ್ಯಾಂಕಿನ ಎರಡು, ಕರ್ನಾಟಕ ಬ್ಯಾಂಕಿನ ಎರಡು ಅಲ್ಲದೇ ಜಿಲ್ಲೆಯ ಉಳಿದ ಬ್ಯಾಂಕುಗಳ ಹದಿನೇಳು ಶಾಖೆಗಳನ್ನೊಳಗೊಂಡಂತೆ ಒಟ್ಟು ೪೩ ಶಾಖೆಗಳು ಜಿಲ್ಲೆಯ ವ್ಯಾಪ್ತಿಯಲ್ಲೇ ಇದ್ದವು.

ಮಂಗಳೂರು ನಗರ ೧೯೩೦ರ ದಶಕದಿಂದಲೇ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಒಂದು ಪ್ರಮುಖ ಕೇಂದ್ರವಾಗಿ ಬೆಳೆಯತೊಡಗಿತ್ತು. ಇಲ್ಲಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ನೇತೃತ್ವದಲ್ಲಿ ೧೯೩೬ರಲ್ಲಿ ತೀರುವಳಿ ಕೇಂದ್ರ (ಕ್ಲಿಯರಿಂಗ್ ಹೌಸ್) ಸಹ ಸ್ಥಾಪನೆಯಾಯಿತು. ಆ ವೇಳೆಗೆ ಇಡೀ ಭಾರತದಲ್ಲಿ ಕೇವಲ ೧೩ ನಗರಗಳಲ್ಲಿ ಮಾತ್ರ ಇಂತಹ ಕೇಂದ್ರಗಳಿದ್ದವು. ಬ್ಯಾಂಕ್ ಆಫ್ ಮಂಗಳೂರಿನ ಮೊದಲ ಶಾಖೆ ಪಡುಬಿದ್ರೆಯಲ್ಲಿ ೧೯೩೭ರಲ್ಲಿ, ಅದೇ ವರ್ಷ ಪಾಣೆ ಮಂಗಳೂರು ಶಾಖೆ ನಂತರ ಮೂಡಬಿದ್ರೆ ಶಾಖೆ ೧೯೩೮ರಲ್ಲಿ ಸ್ಥಾಪನೆಯಾಯಿತು. ಕುಂದಾಪುರ ಬ್ಯಾಂಕು ೧೯೪೦ರ ಆಗಸ್ಟ್ ೪ ರಲ್ಲಿ ವಿಸರ್ಜನೆ ಹೊಂದುವ ಪೂರ್ವದಲ್ಲಿ ಬ್ರಹ್ಮಾವರದಲ್ಲಿ ೧೯೩೬ರಲ್ಲಿ ಮತ್ತು ಶಂಕರನಾರಾಯಣದಲ್ಲಿ ೧೯೩೭ರಲ್ಲಿ ಶಾಖೆಗಳನ್ನು ತೆರೆದಿತ್ತು. ಮಂಗಳೂರಿನ ನಗರ್‌ಕಾರ್ಸ್ ಬ್ಯಾಂಕು ೧೯೪೦ರಲ್ಲಿ ಬಂಟ್ವಾಳದಲ್ಲಿ ತನ್ನ ಮೊದಲ ಶಾಖೆ, ಮೂರು ವರ್ಷಗಳ ಬಳಿಕ ಮಂಗಳೂರು ಬಂದರು ಶಾಖೆಯನ್ನು ಸ್ಥಾಪಿಸಿತು. ಕಲ್ಯಾಣಪುರದ (ಉಡುಪಿ ತಾ.) ಜಯ ಕರ್ನಾಟಕ ಬ್ಯಾಂಕಿಂಗ್ ಅಂಡ್ ಟ್ರೇಡಿಂಗ್ ಕಂಪನಿ ೧೯೪೦ರಲ್ಲಿ ಮಂಗಳೂರು ನಗರದಲ್ಲಿ ಶಾಖೆಯನ್ನು ತೆರೆದಿದ್ದಲ್ಲದೇ ತನ್ನ ಪ್ರಧಾನ ಕಚೇರಿಯನ್ನು ಅಲ್ಲಿಗೇ ಸ್ಥಳಾಂತರಿಸಿ ೧೯೪೦ರ ಅಂತ್ಯದ ವೇಳೆಗೆ ಕಲ್ಯಾಣಪುರದ ಕಚೇರಿಯನ್ನು ಮುಚ್ಚಿತು. ಕಲ್ಲಿಕೋಟೆಯ ರಾಧಾ ಬ್ಯಾಂಕು ಮಂಗಳೂರಿನ ಜಯಲಕ್ಷ್ಮೀ ಬ್ಯಾಂಕಿನಲ್ಲಿ ೧೯೪೧ರಲ್ಲಿ ವಿಲೀನವಾಯಿತು. ಅದರಂತೆ ರಾಧಾಬ್ಯಾಂಕಿನ ಕೇರಳದ ಕುಂಡೋತಿ ಮತ್ತು ಮಲ್ಲಾಪುರಂ ಶಾಖೆಗಳು ಜಯಲಕ್ಷ್ಮೀ ಬ್ಯಾಂಕಿನ ತೆಕ್ಕೆಗೆ ಬಂದವು. ೧೯೪೬ರಲ್ಲಿ ಜಯಲಕ್ಷ್ಮೀ ಬ್ಯಾಂಕಿನ ಒಟ್ಟು ಹತ್ತು ಶಾಖೆಗಳಿದ್ದು, ಅದರಲ್ಲಿ ಎರಡು ಮಾತ್ರ (ಮಂಗಳೂರಿನ ಪ್ರಧಾನ ಕಚೇರಿ ಮತ್ತು ಪುತ್ತೂರು ಶಾಖೆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದವು. ಮಂಗಳೂರಿನ ವಿಜಯಾ ಬ್ಯಾಂಕು ಮುಂಬೈನ ತನ್ನ ಮೊದಲ ಶಾಖೆಯನ್ನು ೧೯೪೪ರಲ್ಲಿ ಸ್ಥಾಪಿಸಿತು. ಅದು ೧೯೪೬ರ ವೇಳೆಗೆ ಜಿಲ್ಲಾ ವ್ಯಾಪ್ತಿಯಲ್ಲಿನ ಎಂಟು ಶಾಖೆಗಳನ್ನು ಒಳಗೊಂಡಂತೆ ಒಟ್ಟು ೧೩ ಶಾಖೆಗಳನ್ನು ಸ್ಥಾಪಿಸಿತ್ತು. ಉಡುಪಿಯ ಉಡುಪಿ ಬ್ಯಾಂಕು ತನ್ನ ಮೊದಲ ಶಾಖೆಯನ್ನು ಕಲ್ಯಾಣಪುರದಲ್ಲಿ ೧೯೪೩ರಲ್ಲಿ ಸ್ಥಾಪಿಸಿತು. ಅದರ ಪಡುಬಿದ್ರೆ ಶಾಖೆ ೧೯೪೪ರಲ್ಲಿ, ೧೯೪೫ರಲ್ಲಿ ಕುಂದಾಪುರ ಶಾಖೆ ಮತ್ತು ಮುಂಡಕೂರು ಶಾಖೆಗಳಲ್ಲದೇ, ೧೯೪೬ರಲ್ಲಿ ಮಂಗಳೂರು ಶಾಖೆಯನ್ನೂ ತೆರೆದಿತ್ತು. ಪುತ್ತೂರಿನ ಕೆನರಾ ಎಂಟರ್‌ಪ್ರೈಸ್ ತನ್ನ ಮೊದಲ ಶಾಖೆಯನ್ನು ಬಂಟ್ವಾಳ ತಾಲೂಕಿನ ವಿಟ್ಲದಲ್ಲಿ ೧೯೪೫ರಲ್ಲಿ ತೆರೆದಿತ್ತು. ಅಟ್ಟೂರ್ ಅಂಡ್ ಜವಾಹರ್ ಬ್ಯಾಂಕು ತನ್ನ ಕಾರ್ಯಕ್ಷೇತ್ರವನ್ನು ಮಂಗಳೂರು ನಗರಕ್ಕೆ ಮಾತ್ರ ಸೀಮಿತಗೊಳಿಸಿ, ಅದು ತನ್ನ ಏಕೈಕ ಶಾಖೆಯನ್ನು ಮಂಗಳೂರಿನ ಕಂಕನಾಡಿ ಮಾರುಕಟ್ಟೆ ಪ್ರದೇಶದಲ್ಲಿ ೧೯೪೧ರಲ್ಲಿ ಸ್ಥಾಪಿಸಿತ್ತು. ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ೧೯೪೨ರಲ್ಲಿ ಒಂದು ಮತ್ತು ೧೯೪೩ರಲ್ಲಿ ಮತ್ತೊಂದು

ಹೀಗೆ ಎರಡು ಬ್ಯಾಂಕುಗಳನ್ನು ಉಡುಪಿಯಲ್ಲಿ ಪ್ರಾಯೋಜಿಸಿತು. ಕೇರಳ ಮತ್ತು ತಮಿಳುನಾಡಿನಲ್ಲಿ ಅದರ ಶಾಖೆಗಳು ಇಲ್ಲದಿರುವಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಲು ಸದರ್ನ್ ಇಂಡಿಯಾ ಅಪೆಕ್ಸ್ ಬ್ಯಾಂಕಿನ ಮತ್ತು ಬೊಂಬಾಯಿ ಅದಿಪತ್ಯದ ಆಗಿನ ಪ್ರದೇಶದಲ್ಲಿ ವ್ಯವಹಾರ ನಡೆಸಲು ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕಿನ ಸ್ಥಾಪನೆಯಾಯಿತು. ಸದರ್ನ್ ಇಂಡಿಯಾ ಬ್ಯಾಂಕಿನ ಉಡುಪಿಯ ಪ್ರಧಾನ ಕಚೇರಿ ಸೇರಿದಂತೆ ೧೯೪೬ರ ಅಂತ್ಯದ ವೇಳೆಗೆ ಕಲ್ಲಿಕೋಟೆ, ಕೊಯ್ಯಂಬತ್ತೂರು, ಮದ್ರಾಸ್, ಪಯ್ಯಾನೂರು, ತಾಲಿಪರಂಬ ಮತ್ತು ತಲ್ಲಿಚ್ಚೇರಿ ಶಾಖೆಗಳನ್ನೊಳಗೊಂಡಂತೆ ಒಟ್ಟು ಏಳು ಶಾಖೆಗಳು ಇದ್ದವು. ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕಿನ ಶಾಖೆಗಳು ಸಾಂಗ್ಲಿ, ಕೊಲ್ಲಾಪುರ, ಕರಡ್ ಮತ್ತು ರಬಕವಿಗಳಲ್ಲಿ ಸ್ಥಾಪನೆಯಾಗಿದ್ದವು. ಈ ಎರಡೂ ಬ್ಯಾಂಕುಗಳು ೧೯೫೩ರಲ್ಲಿ ತಮ್ಮ ಮಾತೃ ಸಂಸ್ಥೆಯಲ್ಲಿ ವಿಲೀನಗೊಂಡವು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬ್ಯಾಂಕುಗಳು ೧೯೩೯, ೧೯೪೬ ಮತ್ತು ೧೯೫೩ರ ವೇಳೆಗೆ ಕೈಗೊಂಡ ಶಾಖಾ ವಿಸ್ತರಣೆ ವಿವರವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೫**

| | ಬ್ಯಾಂಕುಗಳು | ೧೯೩೯ | | ೧೯೪೬ | | ೧೯೫೩ | |
|---|---|---|---|---|---|---|---|
| | | ಒಟ್ಟು ಶಾಖೆಗಳು | ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಶಾಖೆಗಳು | ಒಟ್ಟು ಶಾಖೆಗಳು | ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಶಾಖೆಗಳು | ಒಟ್ಟು ಶಾಖೆಗಳು | ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಶಾಖೆಗಳು |
| ಅ | ದೊಡ್ಡ ಬ್ಯಾಂಕುಗಳು: | | | | | | |
| ೧ | ಕೆನರಾ ಬ್ಯಾಂಕ್ ಲಿ | ೩೭ | ೧೧ | ೪೭ | ೯ | ೪೩ | ೯ |
| ೨ | ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ | ೩೫ | ೮ | ೮೩ | ೩೧ | ೯೨ | ೨೮ |
| ೩ | ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿ | ೧೮ | ೬ | ೩೧ | ೬ | ೩೮ | ೬ |
| ಆ | ಮಧ್ಯಮ ಗಾತ್ರದ ಬ್ಯಾಂಕುಗಳು : | | | | | | |
| ೧ | ಜಯಲಕ್ಷ್ಮೀ ಬ್ಯಾಂಕ್ ಲಿ | ೬ | ೨ | ೧೦ | ೨ | ೧೦ | ೨ |
| ೨ | ಕರ್ನಾಟಕ ಬ್ಯಾಂಕ್ ಲಿ | ೪ | ೩ | ೭ | ೫ | ೮ | ೫ |
| ಇ | ಚಿಕ್ಕ ಬ್ಯಾಂಕ್‌ಗಳು : | | | | | | |
| ೧ | ವಿಜಯಾ ಬ್ಯಾಂಕ್ ಲಿ | ೫ | ೫ | ೧೩ | ೯ | ೧೩ | ೯ |
| ೨ | ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿ | ೧೦ | ೩ | ೧೭ | ೨ | ೮ | ೧ |
| ೩ | ಕ್ಯಾಥೋಲಿಕ್ ಬ್ಯಾಂಕ್ ಲಿ | ೫ | ೫ | ೬ | ೬ | ೯ | ೯ |
| ೪ | ಬ್ಯಾಂಕ್ ಆಫ್ ಮ್ಯಾಂಗಳೂರು ಲಿ | ೪ | ೪ | ೭ | ೬ | ೬ | ೫ |
| ೫ | ನಗರ್‌ಕಾರ್ಸ್ ಬ್ಯಾಂಕು ಲಿ | ೧ | ೧ | ೩ | ೩ | ೩ | ೩ |
| ೬ | ಉಡುಪಿ ಬ್ಯಾಂಕ್ ಲಿ | ೧ | ೧ | ೬ | ೬ | ೩ | ೩ |
| ೭ | ಕೆನರಾ ಎಂಟರ್‌ಪ್ರೈಸಸ್ ಲಿ | ೧ | ೧ | ೨ | ೨ | – | – |
| ೮ | ಅಟ್ಟೂರ್ ಅಂಡ್ ಜವಾಹರ್ ಬ್ಯಾಂಕ್ ಲಿ | ೧ | ೧ | ೨ | ೨ | – | – |

**ಆಧಾರ** : ದ ಬ್ಯಾಂಕಿಂಗ್ ಸಾಗಾ, ಹಿಸ್ಟರಿ ಆಫ್ ಸೌತ್ ಕೆನರಾ ಬ್ಯಾಂಕ್ಸ್, ೧೯೯೯

೧೯೩೯ರಲ್ಲಿ ಮೂರು ಶಾಖೆಗಳನ್ನು ಹೊಂದಿದ್ದ ಕುಂದಾಪುರ ಬ್ಯಾಂಕು ೧೯೪೦ರ ಆಗಸ್ಟ್ ೪ ರಂದು ವಿಸರ್ಜನೆಗೊಂಡಿತು. ಉಡುಪಿಯಲ್ಲಿ ೧೯೩೯ರಲ್ಲಿ ಶಾಖೆಯನ್ನು ತೆರೆದಿದ್ದ ತುಳುನಾಡು ಬ್ಯಾಂಕ್ ಆಫ್ ಸಪ್ಲೈ ಏಜೆನ್ಸಿ ಲಿ. ೧೯೪೦ರ ನವೆಂಬರ್‌ನಲ್ಲಿ ವಿಸರ್ಜನೆಗೊಂಡಿತು. ಜಯಕರ್ನಾಟಕ ಬ್ಯಾಂಕಿಂಗ್ ಅಂಡ್ ಟ್ರೇಡಿಂಗ್ ಕಂಪನಿ ಲಿ. ಜುಲೈ ೩, ೧೯೪೦ರಲ್ಲಿ ಮಂಗಳೂರಿನಲ್ಲಿ ಶಾಖೆ ತೆರೆದು, ೧೯೪೦ರ ಅಂತ್ಯಕ್ಕೆ ಕಲ್ಯಾಣಪುರದ ಮುಖ್ಯ ಶಾಖೆಯನ್ನು ರದ್ದುಮಾಡಿ, ಮಂಗಳೂರಿನ ಶಾಖೆಯನ್ನೇ ಪ್ರಧಾನ ಕಚೇರಿಯನ್ನಾಗಿ ಪರಿವರ್ತಿಸಿತು. ಪಾಂಗಾಳನಾಯಕ ಬ್ಯಾಂಕ್ ಲಿ.ನ ೧೯೫೩ರ ವೇಳೆಗೆ ಇದ್ದ ಒಟ್ಟು ೮ ಶಾಖೆಗಳ ಪೈಕಿ ೬ ಶಾಖೆಗಳು ಜಿಲ್ಲೆಯ ಪರಿಧಿಯಲ್ಲಿದ್ದವು. ಮೂಡಬಿದ್ರೆಯ ಪ್ರಭಾಕರ ಬ್ಯಾಂಕ್ ಲಿ. ಜಿಲ್ಲೆಯಲ್ಲಿನ ಎಲ್ಲ ಮೂರು ಶಾಖೆಗಳನ್ನು ೧೯೫೨ರಲ್ಲಿ ಮುಚ್ಚಿ ಆಗಲೇ ತನ್ನ ಪ್ರಧಾನ ಕಚೇರಿಯನ್ನು ಮುಂಬೈಗೆ ಸ್ಥಳಾಂತರಿಸಿತು. ಬ್ಯಾಂಕು ೧೯೫೩ರಲ್ಲಿ ವಿಸರ್ಜನೆಯಾಗುವ ಪೂರ್ವದಲ್ಲಿ ಮುಂಬೈಯಲ್ಲಿ ಅದರ ಎರಡು ಶಾಖೆಗಳಿದ್ದವು. ಮುಲ್ಕಿ ಬ್ಯಾಂಕು ಮತ್ತು ಮಂಗಳೂರಿನ ಪೈ ಮನಿ ಬ್ಯಾಂಕು ಯಾವುದೇ ಶಾಖೆಗಳನ್ನು ತೆರೆಯುವ ಸಾಹಸಕ್ಕೆ ಮುಂದಾಗಲಿಲ್ಲ.

ಜಿಲ್ಲೆಯಲ್ಲಿ ೧೯೪೬ರ ಅಂತ್ಯಕ್ಕೆ ಜಿಲ್ಲೆಯ ೧೯ ಬ್ಯಾಂಕುಗಳ ಒಟ್ಟು ೨೭೦ ಶಾಖೆಗಳ ಪೈಕಿ ೧೧೧ ಶಾಖೆಗಳು ಜಿಲ್ಲೆಯ ವ್ಯಾಪ್ತಿಯಲ್ಲೇ ಸ್ಥಾಪಿತವಾಗಿದ್ದವು. ಜಿಲ್ಲೆಯಲ್ಲಿ ಬ್ಯಾಂಕು ಸೌಲಭ್ಯ ಹೊಂದಿದ್ದ ೨೩ ಕೇಂದ್ರಗಳಿದ್ದವು. ಜಿಲ್ಲಾ ಕೇಂದ್ರ ಮಂಗಳೂರು ಅತಿ ಹೆಚ್ಚು ಬ್ಯಾಂಕು ಶಾಖೆಗಳಿದ್ದ ಕೇಂದ್ರವಾಗಿದ್ದಿತು. ನಂತರದ ಸ್ಥಾನದಲ್ಲಿ ತಾಲೂಕು ಕೇಂದ್ರ (ಆಗಿನ) ಉಡುಪಿ ಇತ್ತು.

**ಕೋಷ್ಟಕ ೬.೬ : ದಕ್ಷಿಣ ಕನ್ನಡ ಜಿಲ್ಲೆಯ ಬ್ಯಾಂಕುಗಳು ೧೯೩೯ ಮತ್ತು ೧೯೫೩ರ ವೇಳೆಗೆ ಸಾಧಿಸಿದ ಪ್ರಗತಿ**

(ಲಕ್ಷ ರೂ.ಗಳಲ್ಲಿ)

| | ೧೯೩೯ | | ೧೯೫೩ | |
|---|---|---|---|---|
| | ಠೇವಣಿಗಳು | ಮುಂಗಡಗಳು | ಠೇವಣಿಗಳು | ಮುಂಗಡಗಳು |
| **ಪ್ರಮುಖ ಬ್ಯಾಂಕುಗಳು :** | | | | |
| ಕೆನರಾ ಬ್ಯಾಂಕ್ ಲಿ. | ೮೧.೨೨ | ೫೧.೨೮ | ೭೯೧.೬೪ | ೪೧೪.೫೩ |
| ಸಿಂಡಿಕೇಟ್ ಬ್ಯಾಂಕ್ ಲಿ | ೨೪.೪೯ | ೨೪.೧೪ | ೪೭೧.೫೧ | ೩೦೮.೧೭ |
| ಕಾರ್ಪೋರೇಷನ್ ಬಯಾಂಕ್ ಲಿ | ೨೧.೨೨ | ೧೯.೧೮ | ೨೯೭.೨೮ | ೧೫೧.೫೩ |
| ವಿಜಯಾ ಬ್ಯಾಂಕ್ ಲಿ | ೨.೫೦ | ೨.೪೭ | ೪೭.೪೩ | ೩೪.೦೨ |
| ಕರ್ನಾಟಕ ಬ್ಯಾಂಕ್ ಲಿ | ೧೫.೩೪ | ೧೪.೯೮ | ೬೬.೬೯ | ೩೮.೮೪ |
| **ಇತರ ಬ್ಯಾಂಕುಗಳು :** | | | | |
| ಕೆಥೋಲಿಕ್ ಬ್ಯಾಂಕ್ ಲಿ | ೧೨.೦೧ | ೧೦.೩೭ | ೬೪.೪೪ | ೩೯.೨೦ |
| ಜಯಲಕ್ಷ್ಮೀ ಬ್ಯಾಂಕ್ ಲಿ | ೧೦.೫೧ | ೧೧.೨೦ | ೪೦.೨೪ | ೩೪.೯೪ |
| ಪಾಂಗಾಳ ನಾಯಕ ಬ್ಯಾಂಕ್ ಲಿ | ೩.೫೦ | ೬.೦೯ | ೧೭.೭೬ | ೧೨.೩೫ |
| ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿ | ೪.೩೮* | ೨.೯೮* | ೧೨.೩೫ | ೧೮.೩೮ |
| ನಗರಕಾರ್ಸ್ ಬ್ಯಾಂಕ್ ಲಿ | ೪.೭೦* | ೩.೯೨* | ೧೩.೬೨ | ೧೦.೬೭ |
| ಬ್ಯಾಂಕ್ ಆಫ್ ಮಂಗಳೂರು ಲಿ | ೧.೬೪ | ೧.೯೪ | ೯.೯೬ | ೬.೮೩ |
| ಉಡುಪಿ ಬ್ಯಾಂಕ್ ಲಿ | ೦.೨೧ | ೦.೫೨ | ೦.೧೮ | ೧.೧೩ |
| ಮುಲ್ಕಿ ಬ್ಯಾಂಕ್ ಲಿ | ೦.೨೯ | ೦.೩೬ | ೧.೫೦ | ೧.೧೧ |
| ಅತ್ತೂರ್ ಅಂಡ್ ಜವಾಹರ್ ಬ್ಯಾಂಕ್ ಲಿ | ೦.೨೬ | ೦.೫೮ | – | |
| ಜಯಕರ್ನಾಟಕ ಬ್ಯಾಂಕಿಂಗ್ ಅಂಡ್ ಟ್ರೇಡಿಂಗ್ ಕಂಪನಿ ಲಿ | ೦.೧೨ | ೦.೨೨ | – | – |
| ಪೈ ಮನಿ ಬ್ಯಾಂಕ್ ಲಿ | | ೦.೬೨ | ೩.೨೦ | ೨.೭೨ |
| ತುಳುನಾಡು ಬ್ಯಾಂಕ್ ಆಫ್ ಸಪ್ಲೈ ಏಜೆನ್ಸಿ ಲಿ | ೦.೧೩ | – | – | – |

**ಆಧಾರ** : ದ ಬ್ಯಾಂಕಿಂಗ್ ಸಾಗಾ, ಹಿಸ್ಟರಿ ಆಫ್ ಸೌತ್ ಕೆನರಾ ಬ್ಯಾಂಕ್ಸ್, ೧೯೯೯

**ಕೋಷ್ಟಕ ೬.೭ : ಜಿಲ್ಲೆಯ ಕಡಿಮೆ ಜೀವಿತ ಅವಧಿಯ ಬ್ಯಾಂಕುಗಳ ಪ್ರಗತಿ**

(ಲಕ್ಷ ರೂ.ಗಳಲ್ಲಿ)

| | ಪ್ರಾರಂಭಿಕ ವರ್ಷ | | ಅಂತಿಮ ವರ್ಷ | |
|---|---|---|---|---|
| | ಠೇವಣಿಗಳು | ಮುಂಗಡಗಳು | ಠೇವಣಿಗಳು | ಮುಂಗಡಗಳು |
| ಸದರ್ನ್ ಇಂಡಿಯ ಅಪೆಕ್ಸ್ ಬ್ಯಾಂಕ್ ಲಿ | ೪.೮೪ | ೨.೯೧ | ೧೪.೫೯ | ೧.೩೩ |
| ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಲಿ | ೨೪.೪೮ | ೩.೪೦ | ೧೮.೮೭ | ೫.೮೨ |
| ಪ್ರಭಾಕರ್ ಬ್ಯಾಂಕ್ ಲಿ | ೭.೪೯ | ೪.೬೪ | ೬.೫೮ | ೭.೨೨ |

**ಆಧಾರ** : ದ ಬ್ಯಾಂಕಿಂಗ್ ಸಾಗಾ, ಹಿಸ್ಟರಿ ಆಫ್ ಸೌತ್ ಕೆನರಾ ಬ್ಯಾಂಕ್ಸ್, ೧೯೯೯

ಜಿಲ್ಲೆಯ ಹೊರಗಿನ ಕೆಲವು ಬ್ಯಾಂಕುಗಳು ೧೯೨೦ರ ದಶಕದಿಂದಲೇ ಜಿಲ್ಲಾ ಕೇಂದ್ರ ಮಂಗಳೂರಿನಲ್ಲಿ ಶಾಖೆಗಳನ್ನು ತೆರೆಯಲು ಪ್ರಾರಂಭಿಸಿದವು. ಕಲ್ಲಿಕೋಟೆಯ ನೆಡುಂಗಾಡಿ ಬ್ಯಾಂಕ್ ಲಿ ಮತ್ತು ರಾಧಾ ಬ್ಯಾಂಕ್ ಲಿ ಕ್ರಮವಾಗಿ ೧೯೨೦ ಮತ್ತು ೧೯೩೪ರಲ್ಲಿ, ಪಳಾಯಿ ಸೆಂಟ್ರಲ್ ಬ್ಯಾಂಕ್ ಲಿ, (೧೯೬೦ರ ದಶಕದಲ್ಲಿ ದಿವಾಳಿ) ೧೯೩೬ರಲ್ಲಿ, ಟ್ರಾವಂಕೂರ್ ನ್ಯಾಷನಲ್ ಬ್ಯಾಂಕ್ ಲಿ (೧೯೩೭ರಲ್ಲಿ ಟ್ರಾವಂಕೂರ್ ನ್ಯಾಷನಲ್ ಅಂಡ್ ಕ್ವಿಲಾನ್ ಬ್ಯಾಂಕ್ ಲಿ ಎಂದು ಮರುನಾಮಕರಣ– ೧೯೩೮ರಲ್ಲಿ ವಿಸರ್ಜನೆ) ೧೯೩೪ರಲ್ಲಿ, ಮದ್ರಾಸ್‌ನ ಇಂಡೋ–ಕರ್ನಾಟಿಕ್ ಬ್ಯಾಂಕ್ ಲಿ. (೧೯೩೯ರಲ್ಲಿ ಕೋರ್ಟ್ ಆದೇಶದ ಮೇರೆಗೆ ಸಮಾಪ್ತಿ) ೧೯೩೬ರಲ್ಲಿ, ಮದ್ರಾಸ್ ಮೂಲದ್ದೇ ಆದ ಬ್ಯಾಂಕ್ ಆಫ್ ಹಿಂದೂಸ್ಥಾನ್ ಲಿ., ಇಂಡಿಯನ್ ಬ್ಯಾಂಕ್ ಲಿ, ಮತ್ತು ಇಂಡಿಯನ್ ಓವರ್ಸಿಸ್ ಬ್ಯಾಂಕ್ ಲಿ., ಕ್ರಮವಾಗಿ ೧೯೩೯ರಲ್ಲಿ, ೧೯೪೫ರಲ್ಲಿ ಮತ್ತು ೧೯೪೮ರಲ್ಲಿ ಮಂಗಳೂರಿನಲ್ಲಿ ಶಾಖೆಗಳನ್ನು ತರೆದಿದ್ದವು. ಮುಂಬೈ ಮೂಲದ ಸೆಂಟ್ರಲ್ ಬ್ಯಾಂಕ್ ಇಂಡಿಯಾ ಮಂಗಳೂರಿನಲ್ಲಿ ೧೯೩೫ರಲ್ಲಿ ತೆರೆದಿದ್ದ ಏಜೆನ್ಸಿ ಘಟಕವನ್ನು ೧೯೪೬ರಲ್ಲಿ ಪರಿಪೂರ್ಣ ಶಾಖೆಯಾಗಿ ಪರಿವರ್ತಿಸಿತು. ಬ್ಯಾಂಕ್ ಆಫ್ ಮೈಸೂರು ಲಿ (ಸ್ಟೇಟ್ ಬ್ಯಾಂಕ್ ಮೈಸೂರು) ೧೯೫೭ರಲ್ಲಿ, ದೇವಕರಣ ನಾನ್‌ಜೀ ಬ್ಯಾಂಕಿಂಗ್ ಕಂಪನಿ ಲಿ (ನಂತರ ದೇನ ಬ್ಯಾಂಕ್ ಲಿ. ಎಂದು ಮರುನಾಮಕರಣ) ೧೯೪೯ರಲ್ಲಿ, ಬ್ಯಾಂಕ್ ಆಫ್ ಬರೋಡ ೧೯೬೨ರಲ್ಲಿ, ಟ್ರಿಚೂರ್‌ನ ಸೌತ್ ಇಂಡಿಯನ್ ಬ್ಯಾಂಕ್ ಲಿ ೧೯೬೬ರಲ್ಲಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ೧೯೬೭ರಲ್ಲಿ ಮಂಗಳೂರಿನಲ್ಲಿ ತಮ್ಮ ಶಾಖೆಗಳನ್ನು ತೆರೆದವು. ಮುಂಬೈನ ಶಾಮರಾವ್ ವಿಠ್ಠಲ್ ಕೋ–ಆಪರೇಟೀವ್ ಬ್ಯಾಂಕ್ ೧೯೪೦ರ ದಶಕದಲ್ಲಿ ಮಂಗಳೂರಿನಲ್ಲಿ ಶಾಖೆಯನ್ನು ತೆರೆದಿತ್ತು (೧೯೫೦ರ ದಶಕದಲ್ಲಿ ಮುಚ್ಚಿತು). ಅದು ಶೆಡ್ಯುಲ್ಡ್ ಬ್ಯಾಂಕಾಗಿ ಪರಿವರ್ತನೆಗೊಂಡ ನಂತರ ಮತ್ತೆ ಮಂಗಳೂರಿನಲ್ಲಿ ೧೯೯೦ರಲ್ಲಿ ಶಾಖೆಯನ್ನು ಸ್ಥಾಪಿಸಿತು. ಉಳಿದ ಪ್ರಮುಖ ಬ್ಯಾಂಕುಗಳು ೧೯೬೯ರ ನಂತರ ಜಿಲ್ಲೆಯನ್ನು ಪ್ರವೇಶಿಸಿದವು.

## ಸ್ವಾತಂತ್ರ್ಯೋತ್ತರ ಬೆಳವಣಿಗೆಗಳು

ದೇಶ ಸ್ವತಂತ್ರವಾದ ಮೇಲೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಮನೀಯ ಬದಲಾವಣೆಗಳಾದವು. ಹೆಚ್ಚಿನ ಬದಲಾವಣೆಗಳು ಮೂಲಭೂತ ಸ್ವರೂಪದವುಗಳು. ಬ್ಯಾಂಕಿಂಗ್ ಕಂಪನಿಗಳ ನಿಯಂತ್ರಣ ಕಾಯ್ದೆ ೧೯೪೯ರ ಮೂಲಕ ಬ್ಯಾಂಕಿಂಗ್ ಉದ್ದಿಮೆಯ ಮೇಲೆ ಹೇರಲಾದ ನಿಯಂತ್ರಣಗಳಿಂದ ಅದರ ಮೇಲೆ ಪ್ರಭಾವಶಾಲಿ ಪರಿಣಾಮಗಳಾಗಿ ಬ್ಯಾಂಕಿಂಗ್ ಚೌಕಟ್ಟನ್ನು ಭದ್ರಗೊಳಿಸುವ ಪ್ರಯತ್ನಕ್ಕೆ ಅನುಕೂಲವಾಯಿತು. ಬ್ಯಾಂಕಿಂಗ್ ಕಂಪನಿಗಳ ಕಾರ್ಯಕಲಾಪಗಳನ್ನು ತನಿಖೆ ಮಾಡುವ ಹಾಗೂ ನಿಯಂತ್ರಿಸುವ ಅಧಿಕಾರವನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ನೀಡಲಾಯಿತು. ಬ್ಯಾಂಕುಗಳ ಶಾಖಾ ವಿಸ್ತರಣೆಯ ಕಾರ್ಯಕ್ಕೆ ರಿಸರ್ವ್ ಬ್ಯಾಂಕಿನ ಅನುಮತಿ ಅಗತ್ಯವಾಯಿತು. ಕನಿಷ್ಠ ಮೂಲಧನಕ್ಕೆ ಸಂಬಂಧಪಟ್ಟ ಬ್ಯಾಂಕಿಂಗ್ ಕಾಯ್ದೆಯ ನಿಯಮವು ೧೯೫೨ರ ಮಾರ್ಚ್‌ನಲ್ಲಿ ಜಾರಿಗೆ ತರಲಾಗಿ, ಅತೀ ಅಲ್ಪ ಮೂಲಧನ ಹಾಗೂ ಕ್ಷೇಮನಿಧಿ ಪಡೆದ ಬ್ಯಾಂಕುಗಳು ಬ್ಯಾಂಕೇತರ ಕಂಪನಿಗಳಾಗಿ ಪರಿವರ್ತಿಸಿಕೊಳ್ಳುವುದು ಅನಿವಾರ್ಯವಾಯಿತು.

ಅನಿಶ್ಚಿತ ಆರ್ಥಿಕ ಭದ್ರತೆಯಿದ್ದ ಸಣ್ಣ ಬ್ಯಾಂಕುಗಳ ಉಚ್ಚಾಟನೆಗೆ ಭಾರತೀಯ ರಿಸರ್ವ್ ಬ್ಯಾಂಕ್ ೧೯೬೦ರ ದಶಕದಲ್ಲಿ ಕೈಗೊಂಡ ಇನ್ನೊಂದು ಕಾರ್ಯಕ್ರಮವೆಂದರೆ ಆ ಬ್ಯಾಂಕುಗಳ ಕಡ್ಡಾಯ ಸಂಯೋಜನೆ. ಕೆಲವು ಬ್ಯಾಂಕುಗಳ ಮೇಲೆ 'ಮೊರಟೋರಿಯಮ್' (ಸಾಲತೀರಿಕೆಯನ್ನು ಮುಂದೂಡುವುದು) ಅನುಮತಿಯನ್ನು ಪಡೆದು ಆ ಬ್ಯಾಂಕುಗಳನ್ನು ಇತರ ದೊಡ್ಡ ಬ್ಯಾಂಕುಗಳೊಂದಿಗೆ

ವಿಲೀನಗೊಳಿಸುವ ಕಾರ್ಯಕ್ರಮವನ್ನು ರಿಸರ್ವ್ ಬ್ಯಾಂಕ್ ಬಹಳ ಪರಿಣಾಮಕಾರಿಯಾಗಿ ನಡೆಸಿತು. ಈ ಕ್ರಮವು ಬ್ಯಾಂಕಿಂಗ್ ಉದ್ದಿಮೆಯನ್ನು ಭದ್ರ ಬುನಾದಿಯ ಮೇಲೆ ನಿಲ್ಲುವಂತೆ ಮಾಡಲು ಶಕ್ತವಾಯಿತು. ಈ ಯೋಜನೆಯ ಪ್ರಯೋಜನವನ್ನು ಪಡೆದು ಜಿಲ್ಲೆಯ ಐದು ಪ್ರಮುಖ ಬ್ಯಾಂಕುಗಳು ಜಿಲ್ಲೆಯ ಒಳಗಿನ ಮತ್ತು ಹೊರಗಿನ ಇತರ ಬ್ಯಾಂಕುಗಳನ್ನು ತಮ್ಮೊಂದಿಗೆ ವಿಲೀನಗೊಳಿಸಿ, ತಮ್ಮ ವ್ಯವಹಾರವನ್ನೂ, ಶಾಖೆಗಳ ಸಂಖ್ಯೆಯನ್ನು ವಿಸ್ತರಿಸಿಕೊಳ್ಳುವಲ್ಲಿ ಸಫಲವಾದವು.

ಬ್ಯಾಂಕುಗಳ ಕಡ್ಡಾಯ ಸಂಯೋಜನೆ ಜಾರಿಗೆ ಬರುವ ಪೂರ್ವದಲ್ಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಯಲಕ್ಷ್ಮೀ ಬ್ಯಾಂಕ್ ಲಿ ನಲ್ಲಿ ೧೯೪೧ರಲ್ಲಿ ಕಲ್ಲಿಕೋಟೆಯ ರಾಧಾ ಬ್ಯಾಂಕ್ ಲಿ., ಅಲ್ಲದೇ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ೧೯೫೩ರಲ್ಲಿ ಸದರ್ನ್ ಇಂಡಿಯಾ ಅಪೆಕ್ಸ್ ಬ್ಯಾಂಕ್ ಲಿ ಮತ್ತು ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಲಿ. ಈ ಎರಡು ಬ್ಯಾಂಕುಗಳು ವಿಲೀನವಾದವು. ಮಂಗಳೂರಿನ ನಗರಕಾರ್ಸ್ ಬ್ಯಾಂಕ್ ಲಿ. ಮತ್ತು ಬ್ಯಾಂಕ್ ಆಫ್ ಮಂಗಳೂರು ಲಿ. ೧೯೫೯ರಲ್ಲಿ; ಮುಲ್ಕಿಯ ಮುಲ್ಕಿ ಬ್ಯಾಂಕ್ ಲಿ, ಮಂಗಳೂರಿನ ಪೈ ಮನಿ ಬ್ಯಾಂಕ್ ಲಿ ಮತ್ತು ಕೆಥೊಲಿಕ್ ಬ್ಯಾಂಕ್ ಲಿ ೧೯೬೧ರಲ್ಲಿ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ವಿಲೀನಗೊಂಡವು. ಮಂಗಳೂರಿನ ಜಯಲಕ್ಷ್ಮೀ ಬ್ಯಾಂಕ್ ಲಿ ೧೯೬೭ರಲ್ಲಿ ವಿಜಯಾ ಬ್ಯಾಂಕಿನಲ್ಲಿ ಹಾಗೂ ಉಡುಪಿಯ ಪಾಂಗಾಳ ನಾಯಕ್ ಬ್ಯಾಂಕ್ ಲಿ ೧೯೬೮ರಲ್ಲಿ ಕೆನರಾ ಬ್ಯಾಂಕಿನಲ್ಲಿ ವಿಲೀನಗೊಂಡವು. ಜಿಲ್ಲೆಯ ಹೊರಗಿನ ಬ್ಯಾಂಕುಗಳಾದ ಟ್ರಿವೇಂಡ್ರಮ್ ಪರ್ಮನೆಂಟ್ ಫಂಡ್ ಲಿ (೧೮೯೯) ಮತ್ತು ಬ್ಯಾಂಕ್ ಆಫ್ ಕೇರಳ ಲಿ. (೧೯೪೪), ಪೊಲ್ಲಾಚಿಯ ಪೊಲ್ಲಾಚಿ ಯೂನಿಯನ್ ಬ್ಯಾಂಕ್ ಲಿ. (೧೯೨೧), ತ್ರಿಪುನಿತುರಾದ ಶ್ರೀ ಪೂರ್ಣಾತ್ರಯಾಸ ವಿಲಾಸಂ ಬ್ಯಾಂಕ್ ಲಿ. (೧೯೨೩), ಅಲೆಪ್ಪಿಯ ಸೇಸಿಯಾ ಮಿಡ್‌ಲ್ಯಾಂಡ್ ಬ್ಯಾಂಕ್ ಲಿ. (೧೯೩೦), ಕೊಚ್ಚಿಯ ಕೊಚ್ಚಿನ್ ಕಮರ್ಷಿಯಲ್ ಬ್ಯಾಂಕ್ ಲಿ. (೧೯೩೬), ತಿರುಚನಾಪಲ್ಲಿಯ ಅರ್ನಾಡ್ ಬ್ಯಾಂಕ್ ಲಿ. (೧೯೪೨), ಮದುರೈನ ಪಾಂಡ್ಯನ್ ಬ್ಯಾಂಕ್ ಲಿ. (೧೯೪೬), ಮತ್ತು ಹೈದರಾಬಾದ್‌ನ ಜಿ. ರಘುನಾಥಮುಲ್ ಬ್ಯಾಂಕ್ ಲಿ. (೧೯೪೦), ಈ ೯ ಬ್ಯಾಂಕುಗಳು ಕೆನರಾ ಬ್ಯಾಂಕಿನಲ್ಲಿ ವಿಲೀನವಾದವು. ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಲೀನವಾದ ಜಿಲ್ಲೆಯ ಹೊರಗಿನ ಬ್ಯಾಂಕುಗಳೆಂದರೆ ಮೆಟ್ಟುಪಾಳ್ಯಂನ ಶ್ರೀರಂಗರಾಜಾ ಬ್ಯಾಂಕ್ ಲಿ. (೧೯೨೧), ತೀರ್ಥಹಳ್ಳಿಯ ಪೀಪಲ್ಸ್ ಬ್ಯಾಂಕ್ ಲಿ. (೧೯೨೫), ಕರೂರನ ಹಿಂದೂ ಬ್ಯಾಂಕ್ ಲಿ. (೧೯೨೫), ಕೊಯಮತ್ತೂರಿನ ಕೊಯಂಬತ್ತೂರ್ ಶ್ರೀ ಕನ್ನಿಕಾ ಪರಮೇಶ್ವರಿ ಬ್ಯಾಂಕ್ ಲಿ. (೧೯೨೭), ರಾಬರ್ಟ್‌ಸನ್ ಪೇಟೆಯ ಸಿಟಿಜ಼ನ್ಸ್ ಬ್ಯಾಂಕ್ ಲಿ. (೧೯೨೮), ಕಡುತುರುತಿಯ ಓರಿಯಂಟಲ್ ಯೂನಿಯನ್ ಬ್ಯಾಂಕ್ ಲಿ. (೧೯೨೯), ಕೋಟಗೀರಿಯ ಕೊಟಗಿರಿ ಬ್ಯಾಂಕ್ ಲಿ. (೧೯೨೯), ಕ್ವಿಲ್ಯಾಂಡ್‌ನ ಕೊತ್ತಮಂಗಳಂ ನಂಬೂದರಿ ಬ್ಯಾಂಕ್ ಲಿ. (೧೯೨೯), ನೆಯ್ಯೂರ್‌ನ ಸೌತ್ ಟ್ರಾವಂಕೂರ್ ಬ್ಯಾಂಕ್ ಲಿ. (೧೯೨೯), ಸೇಲಂನ ಸೇಲಂ ಅಮ್ಮಾಪೇಟ್ ಸೆಂಗಂಡರ್ ಬ್ಯಾಂಕ್ ಲಿ. (೧೯೩೨), ಟ್ರಿವೆಂಡ್ರಮ್‌ನ ಕೇರಳ ಸರ್ವಿಸ್ ಬ್ಯಾಂಕ್ ಲಿ. (೧೯೩೩), ಪೊಲ್ಲಾಚಿಯ ಪೊಲ್ಲಾಚಿ ಟೌನ್ ಬ್ಯಾಂಕ್ ಲಿ. (೧೯೩೭) ಮತ್ತು ಕೊಚ್ಚಿಯ ಏಶಿಯಾಟಿಕ್ ಮರ್ಕಂಟೈಲ್ ಬ್ಯಾಂಕ್ ಲಿ. (೧೯೪೬) ಆಗಿದ್ದವು. ವಿಜಯಾ ಬ್ಯಾಂಕಿನಲ್ಲಿ ವಿಲೀನವಾದ ಜಿಲ್ಲೆಯ ಹೊರಗಿನ ಬ್ಯಾಂಕುಗಳೆಂದರೆ ಕಲ್ಲಿಕೋಟೆಯ ಜಾಲಪುರಂ ಬ್ಯಾಂಕ್ ಲಿ. (೧೯೦೬), ಕೂನೂರ್‌ನ ಕೂನೂರ್ ಸುಬ್ರಮನಿಯ ವಿಲಾಸ ಉಪಕಾರ ಬ್ಯಾಂಕ್ ಲಿ. (೧೯೧೧), ತೆಲ್ಲಿಚೇರಿಯ ತೆಲ್ಲೀಚೇರಿ ಬ್ಯಾಂಕ್ ಲಿ. (೧೯೧೪), ತಾಲಿಪರಂಬದ ತಾಲಿಪರಂಬಾ ಬ್ಯಾಂಕ್ ಲಿ. (೧೯೨೩), ಬೆಂಗಳೂರಿನ ದೇವಾಂಗ ಬ್ಯಾಂಕ್ ಲಿ. (೧೯೨೬), ಹುಬ್ಬಳ್ಳಿಯ ಹುಬ್ಳಿ ಸಿಟಿ ಬ್ಯಾಂಕ್ ಲಿ. (೧೯೩೦), ರಾಮನಗರಂನ ವೈಶ್ಯ ಮರ್ಕಂಟೈಲ್ ಬ್ಯಾಂಕ್ ಲಿ. (೧೯೩೦) ಮತ್ತು ಎರ್ನಾಕುಲಂನ ದಕ್ಷಿಣ ಭಾರತ್ ಬ್ಯಾಂಕ್ ಲಿ. (೧೯೪೬), ಆಗಿದ್ದವು. ಬೆಳಗಾವಿಯ ಬ್ಯಾಂಕ್ ಆಫ್ ಸಿಟಿಜ಼ನ್ ಲಿ. (೧೯೩೭), ಕಾರ್ಪೊರೇಷನ್ ಬ್ಯಾಂಕ್‌ನಲ್ಲೂ, ಚಿತ್ರದುರ್ಗದ ಚಿತಲ್‌ದುರ್ಗ್ ಸೇವಿಂಗ್ಸ್ ಬ್ಯಾಂಕ್ ಲಿ. (೧೮೭೦), ಶೃಂಗೇರಿಯ ಶೃಂಗೇರಿ ಶ್ರೀ ಶಾರದಾ ಬ್ಯಾಂಕ್ ಲಿ. (೧೯೧೪), ಮತ್ತು ಹುಬ್ಬಳ್ಳಿಯ ಬ್ಯಾಂಕ್ ಆಫ್ ಕರ್ನಾಟಕ ಲಿ. (೧೯೪೬), ಇವು ಕರ್ನಾಟಕ ಬ್ಯಾಂಕಿನಲ್ಲಿ ವಿಲೀನವಾದವು.

ಸ್ವಾತಂತ್ರ್ಯಾನಂತರ ೧೯೫೧ರಿಂದ ಪ್ರಾರಂಭಗೊಂಡು ಈಗಲೂ ಮುಂದುವರಿಯುತ್ತಿರುವ ಆರ್ಥಿಕ ಅಭಿವೃದ್ಧಿ ಯೋಜನೆಗಳು, ರಾಷ್ಟ್ರೀಯ ವಿಸ್ತರಣಾ ಯೋಜನೆಗಳು, ಬದಲಾದ ಕೈಗಾರಿಕಾ ನೀತಿ, ವಾಣಿಜ್ಯ ಚಟುವಟಿಕೆಗಳಿಗೆ ವ್ಯಾಪಕ ಪ್ರೋತ್ಸಾಹ, ಬೆಳೆಯುತ್ತಿರುವ ನಗರೀಕರಣ, ವ್ಯವಸಾಯದಲ್ಲಿ ಹೆಚ್ಚುತ್ತಿರುವ ವಾಣಿಜ್ಯಕರಣ, ಮಾರುಕಟ್ಟೆಗಳ ಅಭಿವೃದ್ಧಿ ಮುಂತಾದವುಗಳು ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆಗಳ ಬೇಡಿಕೆಯನ್ನು ಹೆಚ್ಚಿಸಿದವು. ಇದರಿಂದ ಕ್ರಮೇಣವಾಗಿ ಬ್ಯಾಂಕುಗಳ ಶಾಖೆಗಳಲ್ಲಿ ಹೆಚ್ಚಳ ಉಂಟಾಯಿತು.

**ಕೋಷ್ಟಕ ೬.೮ : ಕರ್ನಾಟಕ ರಾಜ್ಯೋದಯವಾದ ನಂತರದ ಕೆಲವು ವರ್ಷಗಳಲ್ಲಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಬ್ಯಾಂಕು ಶಾಖೆಗಳ ವಿವರ**

| ಪ್ರಮುಖ ಬ್ಯಾಂಕುಗಳು | ವರ್ಷ | | | |
|---|---|---|---|---|
| | ೧೯೫೬ | ೧೯೬೧ | ೧೯೬೬ | ೧೯೬೯ |
| ಕೆನರಾ ಬ್ಯಾಂಕ್ ಲಿ | ೧೦ | ೧೦ | ೧೦ | ೨೬ |
| ಸಿಂಡಿಕೇಟ್ ಬ್ಯಾಂಕ್ ಲಿ | ೨೮ | ೪೫ | ೪೭ | ೭೨ |
| ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿ | ೬ | ೬ | ೬ | ೮ |
| ವಿಜಯಾ ಬ್ಯಾಂಕ್ ಲಿ | ೮ | ೯ | ೯ | ೩೧ |
| ಕರ್ನಾಟಕ ಬ್ಯಾಂಕ್ ಲಿ | ೫ | ೬ | ೮ | ೧೨ |
| ಇತರ ಬ್ಯಾಂಕುಗಳು | ೩೫ | ೨೨ | ೨೭ | ೧೬ |
| ಒಟ್ಟು ಶಾಖೆಗಳು | ೯೨ | ೯೮ | ೧೦೭ | ೧೬೫ |

**ಆಧಾರ** : ದ ಬ್ಯಾಂಕಿಂಗ್ ಸಾಗಾ, ಹಿಸ್ಟರಿ ಆಫ್ ಸೌತ್ ಕೆನರಾ ಬ್ಯಾಂಕ್ಸ್, ೧೯೯೯.

ಪ್ರಗತಿ ಪಥದಲ್ಲಿ ಮುಂದೆ ಸಾಗಿದ ಜಿಲ್ಲೆಯ ಬ್ಯಾಂಕುಗಳು ತಮ್ಮ ಕಾರ್ಯನಿರ್ವಹಣಾ ವಿಧಾನದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಂಡವು. ಕರ್ನಾಟಕ ರಾಜ್ಯೋದಯವಾದಾಗ, ರಾಜಧಾನಿಯಾದ ಬೆಂಗಳೂರು ನಗರದ ಭವಿಷ್ಯಕಾಲದ ಉತ್ತಮ ಅವಕಾಶಗಳ ಮಹತ್ವವನ್ನು ಮನಗಂಡು ಕೆನರಾ ಬ್ಯಾಂಕು ತನ್ನ ಪ್ರಧಾನ ಕಚೇರಿಯನ್ನು ೧೯೫೬ರಲ್ಲಿ ಮಂಗಳೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಿತು. ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿ. (೧೯೭೨ರಲ್ಲಿ ಕಾರ್ಪೊರೇಶನ್ ಬ್ಯಾಂಕ್ ಲಿ) ೧೯೬೧ರಲ್ಲಿ ಉಡುಪಿಯಿಂದ ಮಂಗಳೂರಿಗೆ ತನ್ನ ಪ್ರಧಾನ ಕಚೇರಿಯನ್ನು ವರ್ಗಾಯಿಸಿತು. ಉಡುಪಿಯ ಸಿಂಡಿಕೇಟ್ ಬ್ಯಾಂಕು ೧೯೬೪ರಲ್ಲಿ ಹತ್ತಿರದ ಮಣಿಪಾಲಕ್ಕೂ, ವಿಜಯಾಬ್ಯಾಂಕ್ ಲಿ ೧೯೬೯ರಲ್ಲಿ ಮಂಗಳೂರಿನಿಂದ ಬೆಂಗಳೂರಿಗೂ ತಮ್ಮ ಆಡಳಿತ ಕಚೇರಿಗಳನ್ನು ಸ್ಥಳಾಂತರಿಸಿದವು. ಕರ್ನಾಟಕ ಬ್ಯಾಂಕು ಮಾತ್ರ ಮಂಗಳೂರಿನಲ್ಲೇ ನೆಲೆಯಾಗಿ ನಿಂತಿತು.

**ಕೋಷ್ಟಕ ೬.೯ : ಜಿಲ್ಲೆಯ ಬ್ಯಾಂಕಿಂಗ್ ಉದ್ಯಮವು ೧೯೬೦ರ ದಶಕದಲ್ಲಿ ಸಾಧಿಸಿದ ಪ್ರಗತಿಯನ್ನು ಈ ಮುಂದೆ ತೋರಿಸಲಾಗಿದೆ.**

| ವಿವರ | ೧೯೬೨ | ೧೯೬೪ | ೧೯೬೬ | ೧೯೬೮ | ೧೯೭೦ |
|---|---|---|---|---|---|
| ಶಾಖೆಗಳು (ಸಂಖ್ಯೆ) | ೧೦೦ | ೧೦೧ | ೧೦೭ | ೧೨೩ | ೧೮೯ |
| ಠೇವಣಿಗಳು (ಲಕ್ಷ ರೂ.) | ೧೪೩೫ | ೧೯೮೦ | ೨೯೯೫ | ೩೬೮೦ | ೪೬೮೫ |
| ಮುಂಗಡಗಳು (ಲಕ್ಷ ರೂ.) | ೭೬೦ | ೧೦೫೫ | ೧೫೮೯ | ೧೮೦೪ | ೨೭೦೩ |

**ಆಧಾರ** : ದ ಬ್ಯಾಂಕಿಂಗ್ ಸಾಗಾ, ಹಿಸ್ಟರಿ ಆಫ್ ಸೌತ್ ಕೆನರಾ ಬ್ಯಾಂಕ್ಸ್, ೧೯೯೯

## ಬ್ಯಾಂಕುಗಳ ರಾಷ್ಟ್ರೀಕರಣ

ದೇಶದ ಆರ್ಥಿಕ ರಂಗದ ವಿಭಿನ್ನ ಕ್ಷೇತ್ರಗಳಿಗೆ ಬ್ಯಾಂಕುಗಳಿಂದ ಸಲ್ಲುತ್ತಿದ್ದ ಸೇವೆಯು ನಿರೀಕ್ಷೆಗಿಂತ ಕಡಿಮೆಯಾದುದರಿಂದ ಭಾರತ ಸರಕಾರ ಬ್ಯಾಂಕುಗಳ ಮೇಲೆ ೧೯೬೮ರಲ್ಲಿ ಸಾಮಾಜಿಕ ನಿಯಂತ್ರಣವನ್ನು ಹೇರಿತು. ಆಗತಾನೇ ಸ್ಥಾಪಿಸಲ್ಪಟ್ಟ ರಾಷ್ಟ್ರಮಟ್ಟದ ಮುಂಗಡಗಳ ಧೋರಣೆಯನ್ನು ನಿರೂಪಿಸುವ ಸಮಿತಿಯು ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ನೆರವನ್ನು ಪಡೆಯಬೇಕಾದ ಆದ್ಯತಾ ರಂಗಗಳನ್ನು ಗುರುತಿಸುವ ಅವಶ್ಯಕತೆಯನ್ನು ಸ್ಪಷ್ಟಪಡಿಸಿತು. ಹೀಗೆ ಗುರುತಿಸಲ್ಪಟ್ಟ ಆದ್ಯತಾ ರಂಗಗಳಿಗೆ ಅಧಿಕ ಪ್ರಮಾಣದಲ್ಲಿ ಬ್ಯಾಂಕುಗಳು ಸಾಲವನ್ನು ದೊರಕಿಸುವಂತೆ ಶಿಫಾರಸು ಮಾಡಲಾಯಿತು. ಬಳಿಕ ೧೯೬೯ರ ಜುಲೈ ೧೯ರಂದು ದೇಶದ ೧೪ ದೊಡ್ಡ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರಾಧ್ಯಕ್ಷರ ಸುಗ್ರೀವಾಜ್ಞೆಯಿಂದ ರಾಷ್ಟ್ರೀಕರಣ ಮಾಡಲಾಯಿತು. ಮುಂದೆ ಈ ಆಜ್ಞೆಯು ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಅಧಿಗ್ರಹಣ ಮತ್ತು ವರ್ಗಾವಣೆ) ೧೯೭೦ ಕಾಯ್ದೆಯಾಗಿ ಜಾರಿಗೆ ಬಂದಿತು. ಬ್ಯಾಂಕುಗಳ ಮೇಲಿನ ಸಾಮಾಜಿಕ ನಿಯಂತ್ರಣಗಳು

ಅನುಷ್ಠಾನಕ್ಕೆ ಬಂದ ಬಳಿಕ ಬ್ಯಾಂಕಿಂಗ್ ಚಟುವಟಿಕೆಗಳು ಹೆಚ್ಚುಹೆಚ್ಚಾಗಿ ಭಾರತ ಸರ್ಕಾರದ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸಿದ ಶಿಸ್ತುಕ್ರಮಗಳಿಗೆ ಒಳಪಟ್ಟವು. ಖಾಸಗೀ ಕ್ಷೇತ್ರದ ಬ್ಯಾಂಕುಗಳು ಕೂಡ ತಮ್ಮ ರೀತಿರಿವಾಜುಗಳನ್ನು ಇದಕ್ಕೆ ಅನುಗುಣವಾಗಿ ಪರಿವರ್ತಿಸಿಕೊಳ್ಳಬೇಕಾಯಿತು. ಭಾರತೀಯ ರಿಸರ್ವ್ ಬ್ಯಾಂಕಿನ ಕಟ್ಟುನಿಟ್ಟಿನ ನಿಬಂಧನೆಗಳಿಂದಾಗಿ ವಿವಿಧ ಬ್ಯಾಂಕುಗಳ ಕ್ರಮನಿಬಂಧನೆಗಳಲ್ಲಿ ಹಾಗೂ ಅವುಗಳು ವಿಧಿಸುವ ಬಡ್ಡಿಯ ದರಗಳಲ್ಲಿ ಸಮಾನತೆಯನ್ನು ರೂಪಿಸಲಾಯಿತು.

ಪ್ರಥಮ ಬಾರಿಗೆ ದೇಶದ ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವುದರೊಂದಿಗೆ ಬ್ಯಾಂಕಿಂಗ್ ಇತಿಹಾಸದಲ್ಲಿ ಹೊಸ ಅಧ್ಯಾಯವೇ ಪ್ರಾರಂಭಿಸಲಾಯಿತು. ಖಾಸಗೀ ವಲಯದ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನು ಸರ್ಕಾರದ ಒಡೆತನಕ್ಕೆ ತರುವಲ್ಲಿ ಅದೊಂದು ಪ್ರಥಮ ದಿಟ್ಟ ಕ್ರಮವಾಗಿತ್ತು. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಪೂರಕವಾಗುವಂತೆ ಮತ್ತು ಅದುವರೆಗೆ ಅಲಕ್ಷ್ಯಕ್ಕೆ ಒಳಗಾಗಿದ್ದ ಸಮಾಜದ ದುರ್ಬಲ ವರ್ಗಗಳಿಗೆ ಆರ್ಥಿಕ, ಸಾಮಾಜಿಕ ನ್ಯಾಯವನ್ನು ಒದಗಿಸುವಲ್ಲಿ ಸಹಕಾರಿಯಾಗುವಂತೆ ಈ ಹಣಕಾಸು ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಸರ್ಕಾರ ಸಮರ್ಥವಾಯಿತು. ಅದುವರೆಗೆ ಬ್ಯಾಂಕಿಂಗ್ ಸೇವೆಗಳಿಂದ ವಂಚಿತವಾಗಿದ್ದ ಜನಸಮುದಾಯದ ಆರ್ಥಿಕ ಚಟುವಟಿಕೆಗಳನ್ನು ಗುರುತಿಸಿ ಅವುಗಳಿಗೆ ಆದ್ಯತೆಯ ಮೇರೆಗೆ ಸುಲಭ ಸಾಲ ಸೌಲಭ್ಯಗಳನ್ನು ಒದಗಿಸುವಂತೆ ಎಲ್ಲಾ ಬ್ಯಾಂಕುಗಳಿಗೆ ನಿರ್ದೇಶಿಸಲಾಯಿತು. ಅದರಂತೆ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಅಸಂಘಟಿತ ವಲಯವೂ ಸೇರಿದಂತಾಯಿತು. ಅದುವರೆಗೆ ಕೆಲವು ನಿರ್ದಿಷ್ಟ ವರ್ಗಕ್ಕೆ (ಕ್ಲಾಸ್) ಸೀಮಿತವಾಗಿದ್ದ ಬ್ಯಾಂಕಿಂಗ್ ಸೇವೆಗಳು ವ್ಯಾಪಕ (ಮಾಸ್) ವರ್ಗಕ್ಕೆ ಲಭ್ಯವಾಗುವಂತೆ ಸರ್ಕಾರವು ತನ್ನ ಧೋರಣೆಗಳನ್ನು, ನೀತಿ ನಿರೂಪಣೆಗಳನ್ನು ರೂಪಿಸಿಕೊಂಡಿತು. ಗ್ರಾಮೀಣ ಪ್ರದೇಶಗಳಲ್ಲಿ ಕೆಳಹಂತಗಳಲ್ಲಿ ಆರ್ಥಿಕ, ಸಾಮಾಜಿಕ ಬದಲಾವಣೆಗಳನ್ನು ತರಲು ಸಹಾಯಕವಾಗುವಂತೆ ಸುಲಭ ಸಾಲದ ಹಲವಾರು ಯೋಜನೆಗಳನ್ನು ಸರ್ಕಾರ ಜಾರಿಯಲ್ಲಿ ತಂದಿತಲ್ಲದೇ ರಾಷ್ಟ್ರೀಕೃತ ಬ್ಯಾಂಕುಗಳು ಈ ಗುರಿಯನ್ನು ಸಾಧಿಸಲು ನಿರ್ದಿಷ್ಟ ಪ್ರಮಾಣದ ಸಾಲಸೌಲಭ್ಯಗಳನ್ನು ಒದಗಿಸುವುದನ್ನು ಕಡ್ಡಾಯ ಮಾಡಲಾಯಿತು. ಕೆಲವು ಸಂದರ್ಭಗಳಲ್ಲಿ ಇಂತಹ ಅತೀ ಉದಾರ ಸಾಲ ನೀತಿಯ ದುರುಪಯೋಗ ಆದ ಉದಾಹರಣೆಗಳೂ ಉಂಟು.

ರಾಷ್ಟ್ರೀಕರಣಗೊಂಡ ೧೪ ಬ್ಯಾಂಕುಗಳ ಪೈಕಿ ಕರ್ನಾಟಕದ ಎರಡೂ ಬ್ಯಾಂಕುಗಳೂ ದಕ್ಷಿಣ ಕನ್ನಡ ಜಿಲ್ಲೆಯದೇ ಆಗಿದ್ದವು. ಅವುಗಳು ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್. ರಾಷ್ಟ್ರೀಕರಣದ ವರ್ಷದಲ್ಲಿ (೧೯೬೯) ದೇಶದಲ್ಲಿ ಈ ಬ್ಯಾಂಕುಗಳು ಕ್ರಮವಾಗಿ ೩೬೮ ಮತ್ತು ೩೫೫ ಶಾಖೆಗಳನ್ನೂ, ಠೇವಣಿಗಳು ೧೮೫ ಕೋಟಿ ರೂ. ಮತ್ತು ೧೪೫ ಕೋಟಿ ರೂ., ಮುಂಗಡಗಳು ೧೨೫ ಕೋಟಿ ರೂ ಮತ್ತು ೧೦೫ ಕೋಟಿ ರೂ.ಗಳನ್ನು ಹೊಂದಿದ್ದವು. ದಕ್ಷಿಣ ಕನ್ನಡದ ಉಳಿದ ಮೂರು ಬ್ಯಾಂಕುಗಳು ಖಾಸಗಿ ಕ್ಷೇತ್ರದಲ್ಲೇ ಮುಂದುವರಿದವು. ದೇಶದಲ್ಲಿನ ೧೯೬೯ರಲ್ಲಿನ ಕೆನರಾ ಬ್ಯಾಂಕಿನ ಒಟ್ಟು ೩೬೮ ಶಾಖೆಗಳ ಪೈಕಿ, ೧೦೭ ಶಾಖೆಗಳು ಕರ್ನಾಟಕದಲ್ಲೂ ಮತ್ತು ೨೬ ಶಾಖೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇದ್ದವು. ಸಿಂಡಿಕೇಟ್ ಬ್ಯಾಂಕಿನ ದೇಶದಲ್ಲಿನ ಆಗಿನ ೩೫೫ ಶಾಖೆಗಳ ಪೈಕಿ ೨೧೯ ಕರ್ನಾಟಕದಲ್ಲೂ ಮತ್ತು ೭೨ ಶಾಖೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸ್ಥಾಪಿತವಾಗಿದ್ದವು. ಜಿಲ್ಲೆಯಲ್ಲಿನ ಮಧ್ಯಮ ಗಾತ್ರದ ಬ್ಯಾಂಕುಗಳಾದ ವಿಜಯಾ ಬ್ಯಾಂಕ್ ಲಿ., ಕಾರ್ಪೊರೇಶನ್ ಬ್ಯಾಂಕ್ ಲಿ. ಮತ್ತು ಕರ್ನಾಟಕ ಬ್ಯಾಂಕ್ ಲಿ. ಆಗ ದೇಶದಲ್ಲಿ ಕ್ರಮವಾಗಿ ೧೧೪, ೭೮ ಮತ್ತು ೭೫ ಶಾಖೆಗಳನ್ನು ಹೊಂದಿದ್ದು, ಕರ್ನಾಟಕದಲ್ಲಿನ ಅವುಗಳ ಶಾಖೆಗಳ ಸಂಖ್ಯೆ ೭೯, ೪೯, ಮತ್ತು ೭೪ ಆಗಿದ್ದಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವು ೩೧, ೮, ಮತ್ತು ೧೨ ಶಾಖೆಗಳನ್ನು ಹೊಂದಿದ್ದವು. ಈ ಮೂರು ಬ್ಯಾಂಕುಗಳು ೧೯೬೯ರಲ್ಲಿ ಹೊಂದಿದ್ದ ಠೇವಣಿ ಮೊತ್ತ ಕ್ರಮವಾಗಿ ೧೮.೭೧ ಕೋಟಿ ರೂ., ೨೧.೩೪ ಕೋಟಿ ರೂ. ಮತ್ತು ೧೨.೫೪ ಕೋಟಿ.ರೂ.ಗಳಾಗಿದ್ದಿತು. ವಿಜಯಾ ಬ್ಯಾಂಕ್ ಲಿ., ಕಾರ್ಪೊರೇಶನ್ ಬ್ಯಾಂಕ್ ಲಿ ಮತ್ತು ಕರ್ನಾಟಕ ಬ್ಯಾಂಕ್ ಲಿ ೧೯೬೯ರಲ್ಲಿ ಹೊಂದಿದ್ದ ಮುಂಗಡಗಳ ಮೊತ್ತ ಕ್ರಮವಾಗಿ ೧೩.೦೧ ಕೋಟಿ ರೂ., ೧೪.೪೧ ಕೋಟಿ ರೂ. ಮತ್ತು ೮.೯೦ ಕೋಟಿ ರೂ.ಗಳಾಗಿದ್ದಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಬ್ಯಾಂಕುಗಳು (೧೫ ಬ್ಯಾಂಕುಗಳ ೧೬೫ ಶಾಖೆಗಳು) ೧೯೬೯ರಲ್ಲಿ ಜಿಲ್ಲೆಯಲ್ಲಿ ಹೊಂದಿದ್ದ ಒಟ್ಟು ಠೇವಣಿ ಮತ್ತು ಮುಂಗಡಗಳ ಮೊತ್ತ ಕ್ರಮವಾಗಿ ೪೦.೧೧ ಕೋಟಿ. ರೂ. ಮತ್ತು ೨೩.೫೦ ಕೋಟಿ ರೂ.ಗಳಾಗಿದ್ದವು.

ಬ್ಯಾಂಕುಗಳ ರಾಷ್ಟ್ರೀಕರಣ ನಂತರದಲ್ಲಿ ಬ್ಯಾಂಕುಗಳ ಧ್ಯೇಯ ಧೋರಣೆಗಳಲ್ಲಿ ಹಲವಾರು ಬದಲಾವಣೆಗಳಾದವು. ಬ್ಯಾಂಕು ಶಾಖೆಗಳನ್ನು ಗ್ರಾಮೀಣ ಪ್ರದೇಶಗಳಿಗೆ ಪಸರಿಸುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು. ಮಾರ್ಗದರ್ಶಿ ಬ್ಯಾಂಕ್ ಯೋಜನೆ ಅನುಷ್ಠಾನಕ್ಕೆ ಬಂತು. ಅದರಂತೆ ಸಿಂಡಿಕೇಟ್ ಬ್ಯಾಂಕು ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕ್ ಆಗಿ ನಿಯುಕ್ತಗೊಂಡಿತು. ಹೊರಗಿನ ಅನೇಕ ಬ್ಯಾಂಕುಗಳೂ ಜಿಲ್ಲೆಯಲ್ಲಿ ತಮ್ಮ ಶಾಖೆಗಳನ್ನು ತೆರೆದವು. ೧೯೮೦ರಲ್ಲಿ ಮತ್ತೊಂದು ಹಂತದ ಬ್ಯಾಂಕ್ ರಾಷ್ಟ್ರೀಕರಣ ನಡೆಯಿತು.

## ಕೋಷ್ಟಕ ೬.೧೦

**ಬ್ಯಾಂಕ್ ರಾಷ್ಟ್ರೀಕರಣ ನಂತರದ ಮೂರು ದಶಕಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ವಾಣಿಜ್ಯ ಬ್ಯಾಂಕುಗಳು ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.**

| | ಡಿಸೆಂಬರ್ ಅಂತ್ಯಕ್ಕೆ | | | | | | | | | | | ಮಾರ್ಚ್ ಅಂತ್ಯಕ್ಕೆ | | | | |
|---|---|---|---|---|---|---|---|---|---|---|---|---|---|---|---|---|
| ಪ್ರಮುಖ ವಿವರಗಳು | ೧೯೬೯ | ೧೯೭೧ | ೧೯೭೩ | ೧೯೭೫ | ೧೯೭೭ | ೧೯೭೯ | ೧೯೮೧ | ೧೯೮೩ | ೧೯೮೫ | ೧೯೮೭ | ೧೯೮೯ | ೧೯೯೧ | ೧೯೯೩ | ೧೯೯೫ | ೧೯೯೭ | ೧೯೯೮ |
| ಬ್ಯಾಂಕುಗಳ ಸಂಖ್ಯೆ | ೧೫ | ೧೫ | ೧೬ | ೧೮ | ೨೧ | ೨೫ | ೨೫ | ೨೬ | ೨೯ | ೨೯ | ೩೦ | ೩೦ | ೩೨ | ೩೨ | ೩೪ | ೩೫ |
| ಅವುಗಳ ಶಾಖೆಗಳ ಸಂಖ್ಯೆ | ೧೬೫ | ೨೦೪ | ೨೪೧ | ೨೮೫ | ೩೫೦ | ೩೬೭ | ೩೭೯ | ೪೦೯ | ೪೩೫ | ೪೪೯ | ೪೫೪ | ೪೫೭ | ೪೬೮ | ೪೭೨ | ೪೮೬ | ೪೯೦ |
| ಅ.ಗ್ರಾಮೀಣ | ೧೦೦ | ೧೨೬ | ೧೫೫ | ೧೭೭ | ೨೨೭ | ೨೩೧ | ೨೪೦ | ೨೬೭ | ೨೭೯ | ೨೬೭ | ೨೬೮ | ೨೬೦ | ೨೬೯ | ೨೬೨ | ೨೬೩ | ೨೬೩ |
| ಬಿ. ಅರೆ–ನಗರ | ೩೫ | ೩೬ | ೩೬ | ೫೧ | ೫೫ | ೫೬ | ೫೬ | ೬೦ | ೬೪ | ೮೦ | ೮೦ | ೯೦ | ೯೧ | ೯೨ | ೯೮ | ೯೯ |
| ಕ. ಬಂದರು ಪಟ್ಟಣ | ೩೦ | ೪೨ | ೫೦ | ೫೭ | ೬೮ | ೮೦ | ೮೩ | ೮೨ | ೯೨ | ೧೦೨ | ೧೦೬ | ೧೦೭ | ೧೦೮ | ೧೧೮ | ೧೨೫ | ೧೨೮ |
| ಠೇವಣಿಗಳು (ಲಕ್ಷ ರೂ.ಗಳಲ್ಲಿ) | ೪೦೧೧ | ೫೪೬೦ | ೭೦೬೫ | ೯೭೪೮ | ೧೩೮೮೮ | ೨೦೬೨೫ | ೩೦೫೯೨ | ೪೨೦೯೪ | ೫೮೧೬೦ | ೭೭೧೪೩ | ೯೦೬೯೦ | ೧೧೭೬೬೬ | ೧೬೭೧೦೬ | ೨೩೪೦೯೩ | ೩೨೨೭೭೯ | ೩೮೪೦೯೪ |
| ಮುಂಗಡಗಳು (ಲಕ್ಷ ರೂ.ಗಳಲ್ಲಿ) | ೨೩೪೦ | ೨೮೨೨ | ೪೩೦೬ | ೬೨೩೯ | ೮೯೩೪ | ೧೨೨೨೬ | ೧೮೦೦೨ | ೨೩೪೫೬ | ೩೬೩೬೨ | ೫೧೮೯೯ | ೬೧೯೪೦ | ೭೧೧೯೬ | ೭೯೭೭೮ | ೯೫೮೯೨ | ೧೨೦೫೭೫ | ೧೩೫೯೭೬ |
| ಸಾಲ–ಠೇವಣಿ ನಷ್ಪತ್ತಿ (ಶೇ) | ೫೮ | ೫೨ | ೬೧ | ೬೪ | ೬೪ | ೫೯ | ೫೯ | ೫೬ | ೬೨ | ೬೭ | ೬೮ | ೬೧ | ೪೭ | ೪೧ | ೩೭ | ೩೫ |
| ಆದ್ಯತಾ ವಲಯ ಸಾಲಗಳು (ಲಕ್ಷರೂ.ಗಳಲ್ಲಿ) | – | – | – | ೩೪೨೩ | ೫೪೪೪ | ೭೧೬೮ | ೯೯೦೬ | ೧೩೮೮೯ | ೨೧೩೪೧ | ೩೦೪೮೯ | ೩೩೩೬೩ | ೩೪೫೦೨ | ೩೬೫೪೨ | ೪೦೯೮೩ | ೬೭೧೮೧ | ೭೦೦೦೨ |
| ಒಟ್ಟು ಸಾಲಗಳಲ್ಲಿ ಆದ್ಯತಾ ವಲಯ ಸಾಲಗಳ ಪ್ರಮಾಣ (ಶೇ) | – | – | – | ೫೫ | ೬೧ | ೫೯ | ೫೫ | ೬೦ | ೫೯ | ೫೯ | ೫೪ | ೪೮ | ೪೬ | ೪೩ | ೫೬ | ೫೬ |
| ಪ್ರತೀ ಶಾಖೆಯ ಸರಾಸರಿ ಠೇವಣಿಗಳು (ಲಕ್ಷ ರೂ.) | ೨೪ | ೨೭ | ೨೯ | ೩೪ | ೪೮ | ೫೬ | ೮೧ | ೧೦೪ | ೧೩೪ | ೧೭೨ | ೨೦೦ | ೨೫೭ | ೩೫೭ | ೪೯೬ | ೬೬೪ | ೭೮೪ |
| ಪ್ರತೀ ಶಾಖೆಯ ಸರಾಸರಿ ಮುಂಗಡಗಳು (ಲಕ್ಷ ರೂ.) | ೧೪ | ೧೪ | ೧೮ | ೨೨ | ೨೬ | ೩೩ | ೪೮ | ೫೮ | ೮೩ | ೧೧೬ | ೧೩೬ | ೧೫೬ | ೧೬೯ | ೨೦೩ | ೨೪೮ | ೨೭೮ |
| ಪ್ರತೀ ಶಾಖೆಗೆ ಸರಾಸರಿ ಜನಸಂಖ್ಯೆ (ಸಾವಿರಗಳಲ್ಲಿ) | ೧೧ | ೧೦ | ೮ | ೮ | ೬ | ೬ | ೬ | ೬ | ೫ | ೫ | ೫ | ೫ | ೫ | ೫ | ೫ | ೫ |
| ತಲಾವಾರು ಠೇವಣಿಗಳು (ರೂಗಳಲ್ಲಿ) | ೨೧೨ | ೨೮೨ | ೩೪೯ | ೪೪೮ | ೬೩೬ | ೯೦೮ | ೧೨೭೯ | ೧೭೭೪ | ೨೪೫೦ | ೩೧೪೨ | ೩೮೧೨ | ೪೯೫೧ | ೫೮೯೩ | ೯೦೦೨ | ೧೧೫೮೦ | ೧೩೫೬೦ |
| ತಲಾವಾರು ಮುಂಗಡಗಳು (ರೂಗಳಲ್ಲಿ) | ೧೨೨ | ೧೪೬ | ೨೧೩ | ೨೯೬ | ೪೦೯ | ೫೩೮ | ೭೪೯ | ೯೮೮ | ೧೫೩೮ | ೨೧೮೪ | ೨೫೯೨ | ೨೯೯೬ | ೨೩೪೮ | ೩೬೮೮ | ೪೩೬೦ | ೫೦೪೨ |
| ವ್ಯತ್ಯಸ್ಥ ಬಡ್ಡಿ (ಡಿ.ಐ.ಆರ್) ಸಾಲಗಳು (ಲಕ್ಷ ರೂ.ಗಳಲ್ಲಿ) | – | – | – | – | – | ೧೬೦ | ೨೧೪ | ೪೦೬ | ೧೩೪೩ | ೨೧೮೦ | ೧೮೯೮ | ೧೫೩೪ | ೧೨೯ | ೫೩೪ | ೩೪೯ | ೩೧೩ |

**ಆಧಾರ** : ಸಿಂಡಿಕೇಟ್ ಬ್ಯಾಂಕ್, ಲೀಡ್ ಡಿಸ್ಟ್ರಿಕ್ಟ್ ಆಫೀಸ್, ಮಂಗಳೂರು

ಆಗ ರಾಷ್ಟ್ರೀಕರಣಗೊಂಡ ಆರು ಬ್ಯಾಂಕುಗಳಲ್ಲಿ ವಿಜಯಾ ಬ್ಯಾಂಕ್ ಮತ್ತು ಕಾರ್ಪೊರೇಶನ್ ಬ್ಯಾಂಕುಗಳೂ ಸೇರಿದವು. ಗಾತ್ರದಲ್ಲಿ ಸಣ್ಣದಾಗಿದ್ದ ಕರ್ನಾಟಕ ಬ್ಯಾಂಕ್ ಮಾತ್ರ ಖಾಸಗೀ ಬ್ಯಾಂಕಾಗಿಯೇ ಮುಂದುವರಿಯಿತು. ಆದರೆ ಅದು ಕಳೆದ ಮೂವತ್ತೈದು ವರ್ಷಗಳಲ್ಲಿ (೧೯೬೯–೨೦೦೫) ತನ್ನ ವ್ಯವಹಾರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಕರ್ನಾಟಕ ರಾಜ್ಯದ ಪ್ರಮುಖ ಖಾಸಗೀ ಬ್ಯಾಂಕಾಗಿ ಮುನ್ನಡೆದಿದೆ. ಸಿಂಡಿಕೇಟ್ ಬ್ಯಾಂಕಿನ ನೇತೃತ್ವದಲ್ಲಿ ೧೯೮೪ರಲ್ಲಿ ನೇತ್ರಾವತಿ ಗ್ರಾಮೀಣ ಬ್ಯಾಂಕನ್ನು ಸ್ಥಾಪಿಸಲಾಯಿತು. ಇದರ ಕಾರ್ಯಕ್ಷೇತ್ರವು ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ. ಜಿಲ್ಲೆಯಲ್ಲಿ ಎಲ್ಲಾ ಬ್ಯಾಂಕ್‌ಗಳ ಶಾಖೆಗಳು ತ್ವರಿತ ಗತಿಯಲ್ಲಿ ಬೆಳೆದವು. ಅದೇ ರೀತಿ ಠೇವಣಿಗಳು ಮತ್ತು ಮುಂಗಡಗಳು ಹೆಚ್ಚಿದವು.

೧೯೯೦ರ ದಶಕದಲ್ಲಿ ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದಲ್ಲಿ ಹೊಸತಿರುವು ಕಂಡುಬಂದಿತು. ಸಂಖ್ಯಾತ್ಮಕ ಬೆಳವಣಿಗೆಗಿಂತ ಗುಣಾತ್ಮಕ ಬೆಳವಣಿಗೆಗೆ ಹೆಚ್ಚು ಒತ್ತು ನೀಡಲಾಯಿತು. ಕೆಲವೇ ಹೊಸ ಶಾಖೆಗಳು ಜಿಲ್ಲೆಯಲ್ಲಿ ತೆರೆಯಲ್ಪಟ್ಟವು. ಇತ್ತೀಚೆಗೆ ಖಾಸಗಿ ಕ್ಷೇತ್ರದಲ್ಲಿನ ಹೊಸ ಪೀಳಿಗೆ ಬ್ಯಾಂಕುಗಳು ತಮ್ಮ ಶಾಖೆಗಳನ್ನು ಮಂಗಳೂರು ನಗರದಲ್ಲಿ ತೆರೆದಿವೆ. ಐ.ಸಿ.ಐ.ಸಿ.ಐ., ಸೆಂಚೂರಿಯನ್, ಯು.ಟಿ.ಐ., ಗ್ಲೋಬಲ್ ಟ್ರಸ್ಟ್ (ನಂತರ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನೊಂದಿಗೆ ವಿಲೀನಗೊಂಡಿದೆ), ಎಚ್.ಡಿ.ಎಫ್.ಸಿ., ಐ.ಡಿ.ಬಿ.ಐ. ಮತ್ತು ಜಮ್ಮೂ ಅಂಡ್ ಕಾಶ್ಮೀರ್ ಬ್ಯಾಂಕುಗಳು ತಲಾ ಒಂದೊಂದು ಶಾಖೆಯನ್ನು ಮಂಗಳೂರಲ್ಲಿ ತೆರೆದಿವೆ. ದೇಶದಲ್ಲಿರುವ ೧೦೦ ಪ್ರಮುಖ ಬ್ಯಾಂಕಿಂಗ್ ಕೇಂದ್ರಗಳಲ್ಲಿ ಮಂಗಳೂರಿನ ಸ್ಥಾನ ೩೧. ಈಗ (೨೦೦೫) ಇಲ್ಲಿ ೧೫೨ ಬ್ಯಾಂಕು ಶಾಖೆಗಳಿವೆ. ವಿದೇಶೀ ಬ್ಯಾಂಕಾದ ಎಬಿನ್ ಆಮ್ರೊ ಬ್ಯಾಂಕು ಇತ್ತೀಚೆಗೆ ಇಲ್ಲಿ ತನ್ನ ಶಾಖೆಯನ್ನು ತೆರೆದಿದೆ. ೧೯೯೭ರಲ್ಲಿ ಜಿಲ್ಲೆಯನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಎಂದು ಎರಡು ಜಿಲ್ಲೆಗಳನ್ನಾಗಿ ವಿಭಜಿಸಲಾಯಿತು. ಅದರಂತೆ ಮುಂದಿನ ಕೋಷ್ಟಕದಲ್ಲಿ ನೂತನ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾದಂತೆ ಇತ್ತೀಚಿನ ಕೆಲವು ವರ್ಷಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಸಾಧಿಸಿದ ಪ್ರಗತಿಯನ್ನು ನೀಡಲಾಗಿದೆ.

**ಕೋಷ್ಟಕ ೬.೧೧**

| ಕ್ರಸಂ | ಪ್ರಮುಖ ವಿವರಗಳು | ಮಾರ್ಚ್ | | | | | | |
|---|---|---|---|---|---|---|---|---|
| | | ೧೯೯೯ | ೨೦೦೦ | ೨೦೦೧ | ೨೦೦೨ | ೨೦೦೩ | ೨೦೦೪ | ೨೦೦೫ |
| ೧ | ಬ್ಯಾಂಕುಗಳ ಸಂಖ್ಯೆ | ೩೫ | ೩೫ | ೩೫ | ೩೫ | ೩೫ | ೩೮ | ೪೫ |
| ೨ | ಶಾಖೆಗಳ ಸಂಖ್ಯೆ | ೩೨೨ | ೩೩೩ | ೩೩೮ | ೩೩೨ | ೩೩೨ | ೩೩೯ | ೩೫೦ |
| | ಅ.ಗ್ರಾಮೀಣ | ೧೩೨ | ೧೩೭ | ೧೩೪ | ೧೩೭ | ೧೩೭ | ೧೩೨ | ೧೩೨ |
| | ಬಿ. ಅರೆ–ನಗರ | ೪೫ | ೪೯ | ೫೦ | ೪೯ | ೪೯ | ೬೩ | ೬೭ |
| | ಕ. ಬಂದರು ಪಟ್ಟಣ | ೧೪೫ | ೧೪೭ | ೧೪೯ | ೧೪೬ | ೧೪೬ | ೧೪೪ | ೧೫೧ |
| ೩ | ಠೇವಣಿಗಳು (ಲಕ್ಷ. ರೂ.ಗಳಲ್ಲಿ) | ೨೯೧೬೭೫ | ೩೫೯೬೩೭ | ೪೦೨೬೨೧ | ೪೬೫೦೩೯ | ೫೨೩೫೩೪ | ೫೮೪೩೯೪ | ೬೮೧೫೭೩ |
| ೪ | ಮುಂಗಡಗಳು (ಲಕ್ಷ ರೂ.ಗಳಲ್ಲಿ) | ೧೩೦೪೫೬ | ೧೬೨೬೮೩ | ೧೮೬೮೧೪ | ೨೧೨೮೪೫ | ೨೪೪೦೬೬ | ೨೮೦೨೮೫ | ೩೬೦೭೦೧ |
| ೫ | ಸಾಲ–ಠೇವಣಿ ನಿಷ್ಪತ್ತಿ (ಶೇ) | ೪೫ | ೪೫ | ೪೬ | ೪೬ | ೪೭ | ೪೮ | ೫೩ |
| ೬ | ಆದ್ಯತಾ ವಲಯ ಸಾಲಗಳು (ಲಕ್ಷರೂ.ಗಳಲ್ಲಿ) | ೫೬೫೩೦ | ೭೫೫೪೮ | ೯೨೭೨೭ | ೯೩೨೨೬ | ೧೨೪೭೮೪ | ೧೫೪೭೧೪ | ೧೮೭೫೮೭ |
| ೭ | ಒಟ್ಟು ಸಾಲಗಳಲ್ಲಿ ಆದ್ಯತಾ ವಲಯ ಸಾಲಗಳ ಪ್ರಮಾಣ (ಶೇ) | ೪೩ | ೪೬ | ೫೦ | ೪೪ | ೫೧ | ೫೫ | ೫೨ |
| ೮ | ಪ್ರತೀ ಶಾಖೆಯ ಸರಾಸರಿ ಠೇವಣಿಗಳು (ಲಕ್ಷ ರೂ.) | ೯೦೬ | ೧೦೮೦ | ೧೧೯೮ | ೧೪೦೧ | ೧೫೭೭ | ೧೭೨೪ | ೧೯೪೭ |
| ೯ | ಪ್ರತೀ ಶಾಖೆಯ ಸರಾಸರಿ ಮುಂಗಡಗಳು (ಲಕ್ಷ ರೂ.) | ೪೦೫ | ೪೮೯ | ೫೫೬ | ೬೪೧ | ೭೩೫ | ೮೨೧ | ೧೦೩೦ |
| ೧೦ | ಪ್ರತೀ ಶಾಖೆಯ ಸರಾಸರಿ ಜನಸಂಖ್ಯೆ (ಸಾವಿರಗಳಲ್ಲಿ) | ೫ | ೫ | ೫ | ೫ | ೫ | ೫ | ೫ |
| ೧೧ | ತಲಾವಾರು ಠೇವಣಿ (ರೂ.ಗಳಲ್ಲಿ) | ೧೮೦೦೦ | ೨೨೦೦೦ | ೨೩೯೬೬ | ೨೮೦೨೦ | ೩೧೬೧೧ | ೩೫೨೮೫ | ೩೯೯೧೫ |
| ೧೨ | ತಲಾವಾರು ಮುಂಗಡ (ರೂ.ಗಳಲ್ಲಿ) | ೮೧೨೦ | ೧೦೦೦೦ | ೧೧೧೨೦ | ೧೨೮೨೦ | ೧೪೩೮೧ | ೧೬೯೨೩ | ೧೯೦೦೬ |
| ೧೩ | ವ್ಯತ್ಯಸ್ಥ ಬಡ್ಡಿ (ಡಿ.ಐ.ಆರ್) ಸಾಲಗಳು (ಲಕ್ಷ ರೂ.ಗಳಲ್ಲಿ) | ೫೫ | ೪೬ | ೨೯ | ೪೨ | ೫೦ | ೧೨ | ೩೮ |

**ಆಧಾರ**: ಸಿಂಡಿಕೇಟ್ ಬ್ಯಾಂಕ್, ಲೀಡ್ ಡಿಸ್ಟ್ರಿಕ್ಟ್ ಆಫೀಸ್, ಮಂಗಳೂರು

## ನೇತ್ರಾವತಿ ಗ್ರಾಮೀಣ ಬ್ಯಾಂಕು, ಮಂಗಳೂರು

೧೯೭೬ರ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಶಾಸನದ ಅನ್ವಯ ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಪ್ರವರ್ತಕ ಬ್ಯಾಂಕು (೫೦:೨೫:೧೫) ಇವುಗಳ ಸಹಭಾಗಿತ್ವದಲ್ಲಿ ಪ್ರತೀ ಒಂದು ಅಥವಾ ಎರಡು ಜಿಲ್ಲಾ ವ್ಯಾಪ್ತಿಯನ್ನು ಹೊಂದಿದಂತೆ ಗ್ರಾಮೀಣ ಬ್ಯಾಂಕುಗಳನ್ನು ದೇಶದಾದ್ಯಂತ ಸ್ಥಾಪಿಸಲಾಯಿತು. ಗ್ರಾಮೀಣ ಜನರ ಆರ್ಥಿಕ ಸ್ಥಿತಿಗತಿಗಳನ್ನು, ಉದ್ಯೋಗ, ಕಸುಬು ಮುಂತಾದವುಗಳನ್ನು ಉತ್ತಮಪಡಿಸುವುದಕ್ಕೆ ವಾಣಿಜ್ಯ ಬ್ಯಾಂಕುಗಳು ಪೂರ್ಣವಾಗಿ ಹೊರೆಯನ್ನು ಹೊರಲಾರವೆಂದು ಸರ್ಕಾರ ತೀರ್ಮಾನಿಸಿ, ಗ್ರಾಮೀಣ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಪ್ರತ್ಯೇಕವಾದ ಬ್ಯಾಂಕುಗಳನ್ನು ಸ್ಥಾಪಿಸಲು ಮುಂದಾಯಿತು. ಗ್ರಾಮಸ್ಥರ ಹಣದ ಬೇಡಿಕೆಗಳನ್ನು ಪೂರೈಸುವುದಕ್ಕೆ ಈ ಬ್ಯಾಂಕುಗಳು ಮೀಸಲಾಗಿವೆ. ಗ್ರಾಮದ ಆರ್ಥಿಕ ಚಟುವಟಿಕೆಗಳಿಗೆ ಈ ಬ್ಯಾಂಕುಗಳು ಪೂರ್ಣವಾಗಿ ಹಣದ ಸೌಲಭ್ಯವನ್ನು ಒದಗಿಸುತ್ತವೆ. ಹಣವು ಗ್ರಾಮಸ್ಥರಿಗೆ ದೊರೆಯುವುದಕ್ಕೆ ಯಾವ ವಿಳಂಬವೂ ಆಗುವುದಿಲ್ಲ. ಗ್ರಾಮಸ್ಥರು ತಮ್ಮ ಆರ್ಥಿಕ ವ್ಯವಹಾರಗಳಿಗೆ ವಾಣಿಜ್ಯ ಬ್ಯಾಂಕುಗಳನ್ನು ಅವಲಂಬಿಸುವುದು ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಯಿಂದ ತಪ್ಪುತ್ತದೆ. ಗ್ರಾಮಸ್ಥರ ಕುಂದುಕೊರತೆಗಳನ್ನು ಅರ್ಥಮಾಡಿಕೊಂಡು ಅವರ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡುವುದೇ ಗ್ರಾಮೀಣ ಬ್ಯಾಂಕುಗಳ ಮುಖ್ಯ ಉದ್ದೇಶವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಾದ ಸಿಂಡಿಕೇಟ್ ಬ್ಯಾಂಕಿನಿಂದ ಪ್ರಾಯೋಜಿತಗೊಂಡ ನೇತ್ರಾವತಿ ಗ್ರಾಮೀಣ ಬ್ಯಾಂಕನ್ನು ೧೯೮೪ರ ಅಕ್ಟೋಬರ್ ೧೧ರಂದು ಮಂಗಳೂರಿನಲ್ಲಿ ಸ್ಥಾಪಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ (ಈಗಿನ ಉಡುಪಿ ಜಿಲ್ಲೆ ಸೇರಿದಂತೆ) ಗ್ರಾಮೀಣ ಜನರ ಅಭ್ಯುದಯಕ್ಕಾಗಿ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಈ ಬ್ಯಾಂಕು ಉತ್ತಮ ಸೇವೆ ಸಲ್ಲಿಸುತ್ತಾ ಬಂದಿದೆ. ಗ್ರಾಮೀಣ ಜನರ ಸಮಗ್ರ ಅಭಿವೃದ್ಧಿ, ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಹಳ್ಳಿಗಳಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡುವುದು ಮೊದಲಾದವು ಬ್ಯಾಂಕಿನ ಮೂಲಭೂತ ಗುರಿಗಳಾಗಿದ್ದು, ಅವುಗಳನ್ನು ಸಾಧಿಸುವಲ್ಲಿ ಗ್ರಾಮೀಣ ಬ್ಯಾಂಕು ಯಶಸ್ವಿಯಾಗಿದೆ. ಪ್ರಸ್ತುತ ಎರಡು ಜಿಲ್ಲೆಗಳಿಗೆ ತನ್ನ ಕಾರ್ಯಕ್ಷೇತ್ರವನ್ನು ಹೊಂದಿರುವ ಈ ಬ್ಯಾಂಕು ೨೨ ಶಾಖೆಗಳನ್ನು ನಡೆಸುತ್ತಿದೆ. ಅಕ್ಟೋಬರ್ ೨೦೦೫ರಲ್ಲಿ ಈ ಬ್ಯಾಂಕ್ 'ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು' ಎಂದು ನಾಮಾಂತರಗೊಂಡಿದೆ. ಉಳಿದಂತೆ ಗ್ರಾಮೀಣ ಬ್ಯಾಂಕಿನ ಪ್ರಗತಿಯ ಪಥವನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೨**

| ವಿವರಗಳು | ಮಾರ್ಚ್ | | | | | |
|---|---|---|---|---|---|---|
| | ೧೯೯೫ | ೧೯೯೭ | ೧೯೯೯ | ೨೦೦೧ | ೨೦೦೩ | ೨೦೦೪ |
| ಗ್ರಾಮೀಣ ಬ್ಯಾಂಕಿನ ಶಾಖೆಗಳು | ೨೨ | ೨೨ | ೨೨ | ೨೨ | ೨೨ | ೨೨ |
| ಠೇವಣಿಗಳು (ಲಕ್ಷ ರೂ.) | ೮೧೦.೧೧ | ೧೪೮೯.೧೪ | ೨೫೪೪.೫೬ | ೪೧೮೧.೧೭ | ೫೫೨೯.೧೧ | ೬೩೮೬.೮೦ |
| ಮುಂಗಡಗಳು (ಲಕ್ಷ ರೂ.) | ೫೮೧.೧೯ | ೧೧೨೪.೬೭ | ೧೯೮.೯೨ | ೩೭೦೫.೯೪ | ೪೬೫೪.೭೯ | ೫೪೪೭.೭೨ |
| ಲಾಭ (+) ಅಥವಾ ನಷ್ಟ (−) (ಲಕ್ಷ ರೂ.) | (−)೫೬.೪೫ | (−)೨೩.೯೪ | (+)೨೩.೨೪ | (+)೮೩.೨೭ | (+)೧೧೩.೫೪ | (+)೧೫೮.೬೭ |
| ಸಿಬ್ಬಂದಿ ಸಂಖ್ಯೆ | ೯೪ | ೯೪ | ೯೪ | ೯೪ | ೯೩ | ೯೭ |

**ಆಧಾರ:** ನೇತ್ರಾವತಿ ಗ್ರಾಮೀಣ ಬ್ಯಾಂಕ್, ಮಂಗಳೂರು

## ಸಹಕಾರಿ ಆಂದೋಲನ

ಜನಜೀವನದಲ್ಲಿ ಸಹಕಾರೀ ಮನೋಭಾವವು ನಾಗರಿಕತೆಯ ಆರಂಭದಿಂದಲೇ ಒಂದು ಮೂಲಭೂತ ಸೂತ್ರವಾಗಿ ಮೂಡಿಬಂದಿದೆ. ಆದರೆ ಸಹಕಾರವು ಒಂದು ಆರ್ಥಿಕ ಮೂಲವಾದ ಚಟುವಟಿಕೆ ಎಂಬ ವಿಶಿಷ್ಟಾರ್ಥ ಅದಕ್ಕೆ ಬಂದುದು ಇತ್ತೀಚೆಗೆ. ಆರ್ಥಿಕ ಏರುಪೇರುಗಳಿಂದುಟಾದ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯನ್ನು ನೀಗಲು ಇರುವ ಒಂದು ಮಾರ್ಗವೇ ಸಹಕಾರ. ಈ ಆಂದೋಲನದ ಉದ್ದೇಶ ಯಾವುದೇ ಸವಲತ್ತಿನ ಅಗತ್ಯವಿರುವ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಸುಧಾರಿಸಲು ಅವರೆಲ್ಲರನ್ನೂ

ಸಾಮಾನ್ಯ ಗುರಿಯುಳ್ಳ ಸಹಕಾರೀ ವ್ಯವಹಾರಗಳಲ್ಲಿ ತೊಡಗಿಸುವುದೇ ಆಗಿದೆ. ಪರಸ್ಪರ ಸಹಕಾರದ ಮೂಲಕ ಸ್ವಯಂ ಸಹಾಯ ಎಂಬುದು ಸಹಕಾರದ ಮೂಲಧ್ಯೇಯವಾಗಿದೆ. "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" ಎಂಬುದು ಸಹಕಾರಿಗಳ ಘೋಷಣೆಯಾಗಿದೆ.

೧೯೦೪ರ ಸಹಕಾರಿ ಸಂಘಗಳ ನೋಂದಣಿ ಕಾಯಿದೆಯ ಮೂಲಕ ೧೯೦೯ರಲ್ಲಿ ದಕ್ಷಿಣ ಕನ್ನಡದಲ್ಲಿ ಆರಂಭವಾದ ಸಹಕಾರೀ ಆಂದೋಲನವು ಜಿಲ್ಲೆಯಲ್ಲಿ ಸಹಕಾರೀ ಸಂಘಸಂಸ್ಥೆಗಳ ಸುವ್ಯವಸ್ಥಿತ ಕಾರ್ಯಚಟುವಟಿಕೆಗಳಿಗೆ ಪೋಷಕವಾದ ಒಳ್ಳೆಯ ಸಂಪ್ರದಾಯವನ್ನು ಹೊಂದಿದೆ. ಈ ಆಂದೋಲನವು ಪ್ರಾರಂಭದಲ್ಲಿ ಕೇವಲ ವ್ಯವಸಾಯ ಸಾಲ ಸಹಕಾರ ಸಂಘಗಳ ರಚನೆಗೆ ಸೀಮಿತವಾಗಿದ್ದರೂ ೧೯೧೨ರ ಸಹಕಾರೀ ಕಾಯಿದೆಯು ವ್ಯವಸಾಯೇತರ ಮತ್ತು ಲೇವಾದೇವಿಯಲ್ಲದ ಸಹಕಾರಿ ಸಂಘಗಳ ಬೆಳವಣಿಗೆಗೆ ಉತ್ತೇಜನ ನೀಡಲು ಕಾರಣವಾಯಿತು. ತತ್ಫಲವಾಗಿ ಈ ಆಂದೋಲನದ ಕಕ್ಷೆ ಮತ್ತು ಕಾರ್ಯವ್ಯಾಪ್ತಿ ಸವಿಸ್ತಾರವಾಯಿತು. ಜಿಲ್ಲಾ ಮಟ್ಟದಲ್ಲಿ ಕಾಲಕಾಲಕ್ಕೆ ಸ್ಥಾಪಿಸಲಾದ ಶೃಂಗ ಅಥವಾ ಕೇಂದ್ರ ಹಣಕಾಸು ನೆರವು ಸಂಸ್ಥೆಗಳು ಈ ಸಹಕಾರೀ ಆಂದೋಲನ ಉತ್ತೇಜಿತವಾಗಿ ಮುಂದುವರಿಯಲು ಸಹಕಾರಿಯಾದವು. ಜಿಲ್ಲೆಯ ಆರ್ಥಿಕ ವ್ಯವಸ್ಥೆಯಲ್ಲಿ ಈ ಸಹಕಾರೀ ರಂಗವೂ ಮಹತ್ತರವಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಇದು ವ್ಯವಸಾಯ ಸಾಲ ಹಾಗೂ ಅದಕ್ಕೆ ಪೂರಕವಾದ ಇತರೆ ಕ್ಷೇತ್ರಗಳ ಚಟುವಟಿಕೆಗಳಿಗೆ ಒಳ್ಳೆಯ ಚಾಲನೆ ನೀಡಿದೆ

ಸಹಕಾರೀ ಕ್ಷೇತ್ರವು ತೀವ್ರಗತಿಯಲ್ಲಿ ಮುಂದುವರಿಯುತ್ತಿರುವ ರಾಜ್ಯದ ಕೆಲವೇ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯೂ ಒಂದು. ಈ ಕ್ಷೇತ್ರ ಜಿಲ್ಲೆಯ ಆರ್ಥಿಕತೆಯ ಮೇಲೂ ತನ್ನ ಆಳವಾದ ಪ್ರಭಾವವನ್ನು ಬೀರಿದೆ. ಭಾರತ ಸರ್ಕಾರದ ೧೯೦೪ರ ಸಹಕಾರಿ ಸಂಘಗಳ ಕಾಯಿದೆಯನ್ವಯ ಜಿಲ್ಲೆಯ ಮೊಟ್ಟಮೊದಲ ಸಹಕಾರಿ ಪತ್ತಿನ ಸಂಘ ೧೯೦೯ರಲ್ಲಿ ಪುತ್ತೂರಿನಲ್ಲಿ ಸ್ಥಾಪಿತವಾಯಿತು. ಜಿಲ್ಲೆಯ ಸಹಕಾರಿ ಚಳವಳಿಯ ಪಿತಾಮಹರೆಂದೇ ಖ್ಯಾತಿಗಳಿಸಿದ ದಿ.ಮೊಳಹಳ್ಳಿ ಶಿವರಾಯರ ನೇತೃತ್ವದಲ್ಲಿ ಈ ಸಂಘದ ಬೀಜಾಂಕುರವಾಯಿತು. ದಿ. ಮೊಳಹಳ್ಳಿ ಶಿವರಾಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಆಂದೋಲನಕ್ಕೆ ಚಾಲನೆ ನೀಡಿದ್ದಲ್ಲದೇ ಅದನ್ನು ಹಲವಾರು ದಶಕಗಳ ಕಾಲ ಮುನ್ನೆಡೆಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಬಹುಬಗೆಯ ಸಹಕಾರ ಸಂಘಗಳ ಸ್ಥಾಪನೆಗೂ ಅವಕಾಶ ಕಲ್ಪಿಸುವ ೧೯೧೨ರ ಸಹಕಾರಿ ಕಾಯಿದೆ ರಚನೆಯಾಗುವವರೆಗೂ, ಜಿಲ್ಲೆಯಲ್ಲಿ ಸಹಕಾರ ಸಂಘಗಳ ಸಂಘಟನಾ ಕ್ರಿಯೆಯು ಮಂದಗತಿಯಿಂದ ಸಾಗಿದ್ದು, ೧೯೧೨–೧೩ರ ಸಾಲಿನ ಅಂತ್ಯಕ್ಕೆ ಕೇವಲ ೧೫ ಕೃಷಿ ಪತ್ತಿನ ಸಾಲ ಸಹಕಾರ ಸಂಘಗಳು, ಒಂದು ಪಟ್ಟಣ ಸಾಲ ಸಹಕಾರ ಸಂಘ ಹಾಗೂ ಒಂದು ಕೃಷಿ ಧಾನ್ಯ ಬ್ಯಾಂಕು ಜಿಲ್ಲೆಯಲ್ಲಿ ಸ್ಥಾಪಿತವಾಗಿದ್ದವು. ೧೯೧೨ರ ಸಹಕಾರಿ ಕಾಯಿದೆ ಜಿಲ್ಲೆಯಲ್ಲಿ ಹಲವಾರು ಹೊಸ ಸಹಕಾರಿ ಸಂಘಗಳ ಸ್ಥಾಪನೆಗೆ ದಾರಿಮಾಡಿಕೊಟ್ಟಿದ್ದರಿಂದ, ಜಿಲ್ಲೆಯಾದ್ಯಂತ ಹಲವಾರು ಹೊಸ ಸಂಘಗಳನ್ನು ಸಂಘಟಿಸಲಾಯಿತು. ಜಿಲ್ಲೆಯ ಎಲ್ಲ ಸಹಕಾರಿ ಸಂಘಗಳಿಗೆ ಆರ್ಥಿಕ ಸಹಾಯವನ್ನು ಒದಗಿಸುವ ಉದ್ದೇಶದಿಂದ ಆ ಹೊಣೆಗಾರಿಕೆಯನ್ನು ಮೊದಲು ಪುತ್ತೂರಿನ ಗ್ರಾಮೀಣ ಸಾಲ ಸಹಕಾರ ಸಂಘಕ್ಕೆ ಒಪ್ಪಿಸಲಾಯಿತು. ನಂತರ ೧೯೧೩ರ ನವಂಬರ್ ೩೦ ರಂದು ಪ್ರತ್ಯೇಕ ಕೇಂದ್ರ ಬ್ಯಾಂಕನ್ನು ಪುತ್ತೂರಿನಲ್ಲಿ ಸಂಘಟಿಸಿ ಜಿಲ್ಲೆಯ ಸಹಕಾರ ಸಂಘಗಳಿಗೆ ಈ ಬ್ಯಾಂಕಿನ ಮೂಲಕ ಹಣಕಾಸಿನ ನೆರವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಅದರಂತೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ. ನ ಪ್ರಧಾನ ಕಚೇರಿಯನ್ನು ಮೊದಲು ಪುತ್ತೂರಿನಲ್ಲಿ ಸ್ಥಾಪಿಸಲಾಯಿತು. ಅದು ೧೯೧೪ರ ಜನವರಿ ೨೪ರಂದು ಕಾರ್ಯಾರಂಭ ಮಾಡಿತು (೧೯೨೭ರಲ್ಲಿ ಪ್ರಧಾನ ಕಚೇರಿಯನ್ನು ಮಂಗಳೂರಿಗೆ ಸ್ಥಳಾಂತರಿಸಲಾಯಿತು). ಪ್ರಾರಂಭದಿಂದಲೇ ಅದು ಉತ್ತಮ ಪ್ರಗತಿಯನ್ನು ಸಾಧಿಸಿ ಮುನ್ನಡೆಯುವಂತಾಯಿತು. ಜಿಲ್ಲೆಯ ಹಲವೆಡೆಗಳಲ್ಲಿ ಸ್ಥಳೀಯ ಸಹಕಾರಿ ಯೂನಿಯನ್‌ಗಳನ್ನು ೧೯೧೯ರಲ್ಲಿ ಪ್ರಾರಂಭಿಸಲಾಯಿತಲ್ಲದೇ ನಂತರ ೧೯೨೩ರಲ್ಲಿ ಈ ಯೂನಿಯನ್‌ಗಳ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಂಸ್ಥೆಯೊಂದನ್ನು ಸಂಘಟಿಸಲಾಯಿತು. ಸಹಕಾರಿ ಯೂನಿಯನ್‌ಗಳನ್ನು ನಿಯಂತ್ರಿಸುವ ಹಾಗೂ ಅವುಗಳ ಕಾರ್ಯಚಟುವಟಿಕೆಗಳಲ್ಲಿ ಸಮನ್ವಯ ತರುವುದು ಅಲ್ಲದೇ ಸಹಕಾರ ಚಳವಳಿಯಲ್ಲಿ ತೊಡಗಿಸಿಕೊಂಡ ಖಾಸಗಿ ಜನರಿಗೆ 'ಸಹಕಾರ' ವಿಷಯದ ಬಗ್ಗೆ ತರಬೇತಿ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಈ ಜಿಲ್ಲಾ ಮೇಲ್ವಿಚಾರಣಾ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಸರಿಯಾಗಿ ಕಾರ್ಯನಿರ್ವಹಿಸದ ಕಾರಣ, ಅದನ್ನು ೧೯೩೧ರಲ್ಲಿ ರದ್ದುಗೊಳಿಸಿ, ಅದರ ಕೆಲಸಕಾರ್ಯಗಳ ಜವಾಬ್ದಾರಿಯನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಆಡಳಿತ ಸಮಿತಿಗೆ ಒಪ್ಪಿಸಲಾಯಿತು. ಜಿಲ್ಲೆಯ ಎಲ್ಲಾ ಸಹಕಾರಿ ಸಂಸ್ಥೆಗಳಿಂದ ಪಡೆಯಲಾಗುತ್ತಿದ್ದ ಮೇಲ್ವಿಚಾರಣ ನಿಧಿಯನ್ನು (ಸೂಪರ್‌ವಿಷನ್ ಫಂಡ್) ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ವರ್ಗಾಯಿಸಿ, ಸ್ಥಳೀಯ ಯುನಿಯನ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೇಲ್ವಿಚಾರಕರಿಗೆ ಅದರಿಂದ ಸಂಭಾವನೆಯನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಯಿತು.

ಮದ್ರಾಸ್ ಸರ್ಕಾರದ ಕಾರ್ಮಿಕ ಇಲಾಖೆಯು ೧೯೨೩ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಂಡಿತಲ್ಲದೇ, ಆ ಕೂಡಲೇ ದುರ್ಬಲ ಹಾಗೂ ಹಿಂದುಳಿದ ವರ್ಗಗಳ ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಸಹಕಾರ ಸಂಘಗಳನ್ನು ಸಂಘಟಿಸುವ ಕಾರ್ಯವನ್ನು ಮಾಡಿತು. ಜಿಲ್ಲೆಯಲ್ಲಿ ೧೯೨೬–೨೭ರ ಸಾಲಿನ ಅಂತ್ಯಕ್ಕೆ ಅಂತಹ ೮೦ ಸಹಕಾರ ಸಂಘಗಳಿದ್ದು, ಅವುಗಳಲ್ಲಿನ ಒಟ್ಟು ಸದಸ್ಯತ್ವವು ೧೮೦೬ ಇದ್ದು, ಸಂದಾಯಿತ ಷೇರು ಬಂಡವಾಳವು ೭೬೦೫ರೂ. ಗಳಾಗಿದ್ದಿತು. ೧೯೩೪–೩೫ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ೯೩ ಕಾರ್ಮಿಕ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ಮೀನುಗಾರರಿಗೆ ಮೀಸಲಾದಂತೆ ೧೪ ಸಹಕಾರ ಸಂಘಗಳಿದ್ದು, ಅವು ಮೀನುಗಾರಿಕೆ ಇಲಾಖೆಯ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಕಾರ್ಮಿಕ ಇಲಾಖೆಯ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಳಿದ ೭೯ ಆದಿ ದ್ರಾವಿಡ ಸಹಕಾರಿ ಸಂಘಗಳನ್ನು ಸಹಕಾರ ಇಲಾಖೆಯ ನಿಯಂತ್ರಣದ ವ್ಯಾಪ್ತಿಗೆ ವರ್ಗಾಯಿಸಲಾಯಿತು. ೧೯೨೩–೨೪ರಲ್ಲಿನ ಪ್ರವಾಹದ ಪರಿಣಾಮದಿಂದಾಗಿ ಮನೆಮಾರು ಕಳೆದುಕೊಂಡ ಸಂತ್ರಸ್ತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಅದೇ ವೇಳೆಗೆ ಮನೆ ನಿರ್ಮಾಣ ಸಹಕಾರ ಸಂಘಗಳು ಅಲ್ಲಲ್ಲಿ ಸ್ಥಾಪಿತಗೊಂಡವು. "ಕೋಟೇಚ್ಚೇರಿ ಸಾಲ ಮತ್ತು ವ್ಯಾಪಾರ" ಸಹಕಾರಿ ಸಂಘವು (ಈಗ ಕಾಸರಗೋಡು ಜಿಲ್ಲೆ) ೧೯೩೨–೩೩ರಲ್ಲಿ ಕಾರ್ಯಾರಂಭ ಮಾಡಿತು. ಅದು ಸದಸ್ಯರಿಗೆ "ಉತ್ಪನ್ನ ಅಡಮಾನ ಸಾಲ" ವನ್ನು ನೀಡುವ ವ್ಯವಸ್ಥೆಯನ್ನು ಕೈಗೊಂಡಿತ್ತು. ಜಿಲ್ಲೆಯ ಕೇಂದ್ರ ಸಹಕರ ಬ್ಯಾಂಕೇ ಪ್ರಮುಖವಾಗಿ ಈ ಎಲ್ಲ ಸಹಕಾರ ಸಂಘಗಳಿಗೆ ಆರ್ಥಿಕ ನೆರವನ್ನು ನೀಡುತ್ತಿತ್ತು.

ಜಿಲ್ಲೆಯಲ್ಲಿ ೧೯೦೯ರಲ್ಲಿ ಆರಂಭಗೊಂಡ ಸಹಕಾರ ಚಳವಳಿಯು ನಂತರದ ದಶಕಗಳಲ್ಲಿ ತೀವ್ರಗತಿಯಲ್ಲಿ ಮುನ್ನಡೆದು ಜಿಲ್ಲೆಯಾದ್ಯಂತ ಹಲವಾರು ಸಹಕಾರ ಸಂಘಗಳ ಸ್ಥಾಪನೆಗೆ ಕಾರಣವಾಯಿತು. ಜಿಲ್ಲೆಯಲ್ಲಿನ ವ್ಯವಸಾಯ ಸಾಲ ಸಹಕಾರ ಸಂಘಗಳು ವ್ಯವಸಾಯಗಾರರಿಗೆ ತಮ್ಮ ಹೆಚ್ಚಿನ ಬಡ್ಡಿಯ ಸಾಲವನ್ನು ತೀರಿಸುವ ಹಾಗೂ ಕೃಷಿ ಚಟುವಟಿಕೆಯ ವಾರ್ಷಿಕ ವೆಚ್ಚವನ್ನು ಭರಿಸುವ ಉದ್ದೇಶಕ್ಕಾಗಿ ನೀಡಲಾಗುತ್ತಿದ್ದ ಸಾಲದ ಪ್ರಮಾಣವನ್ನು ಹಂತಹಂತವಾಗಿ ಹೆಚ್ಚಿಸಿದವು. ಇತರ ಪತ್ತಿನ ಸಹಕಾರ ಸಂಘಗಳ ಸ್ಥಾಪನೆಯಿಂದಾಗಿ ಅವುಗಳ ಸದಸ್ಯರಿಗೂ ಹಲವಾರು ರೀತಿಯ ಪ್ರಯೋಜನಗಳು ದೊರೆಯುವಂತಾಯಿತಲ್ಲದೇ, ಅರ್ಹ ವ್ಯಕ್ತಿಗಳಿಗೂ ತಮ್ಮ ವ್ಯಾಪಾರೋದ್ಯಮದ ಅಭಿವೃದ್ಧಿಗೆ ಹಾಗೂ ಇನ್ನಿತರ ಉದ್ದೇಶಗಳಿಗಾಗಿ ಕಡಿಮೆ ಬಡ್ಡಿ ದರದ ಸಾಲಗಳು ಅವುಗಳಿಂದ ದೊರೆಯುವಂತಾಯಿತು. ಕೆಲವು ವರ್ಷಗಳ ಹಿಂದೆ ಶೇ.೧೫ರಿಂದ ಶೇ.೨೦ರ ಬಡ್ಡಿ ದರದಲ್ಲಿ ಸಾಲವನ್ನು ಪಡೆಯುತ್ತಿದ್ದ ಜನ, ಈ ಸಹಕಾರಿ ಸಂಘಗಳಿಂದ ಶೇ. ೬.೨೫ ರಿಂದ ಶೇ.೯ ರ ಬಡ್ಡಿದರದಲ್ಲಿ ಅಗತ್ಯದ ಸಾಲವನ್ನು ಪಡೆಯುವಂತಾದರು. ಸಹಕಾರ ಚಳವಳಿಯ ಪ್ರಭಾವದಿಂದಾಗಿ ಜಿಲ್ಲೆಯಾದ್ಯಂತ ಪ್ರಚಲಿತವಿದ್ದ ಹೆಚ್ಚಿನ ಬಡ್ಡಿದರದ ಖಾಸಗೀ ಸಾಲದ ವ್ಯವಹಾರಗಳು ಸಹ ಗಣನೀಯ ಪ್ರಮಾಣದಲ್ಲಿ ಕಡಿಮೆಯಾದುದಲ್ಲದೇ, ಹಲವಾರು ಸಾಲಗಾರರಿಗೆ ವೃತ್ತಿನಿರತ ಲೇವಾದೇವಿಗಾರರ ಕಪಿಮುಷ್ಟಿಯಿಂದ ಮುಕ್ತಿ ದೊರೆಯುವಂತಾಯಿತು. ಹಿಂದಿನ ಮದ್ರಾಸ್ ಸರ್ಕಾರ ೧೯೨೭ರಲ್ಲಿ ರಚಿಸಿದ 'ಟೌನ್‌ಸೆಂಡ್' ಸಮಿತಿಯು ಮದ್ರಾಸ್ ಪ್ರಾಂತ್ಯದಲ್ಲಿ ಸಹಕಾರ ಚಳವಳಿಯು ಆವರೆಗೆ ಸಾಧಿಸಿದ ಒಟ್ಟಾರೆ ಪ್ರಗತಿಯನ್ನು ವಿಮರ್ಷಿಸಿ, ಅದರ ಮುಂದಿನ ಪ್ರಗತಿಗಾಗಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿತು. ಸರ್ಕಾರ ಸಮಿತಿಯ ಶಿಫಾರಸ್ಸುಗಳನ್ನು ಪರಾಮರ್ಶಿಸಿ, ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಶಾಸನ ರಚಿತ ಪ್ರತ್ಯೇಕ ಕಾನೂನನ್ನು ಜಾರಿಗೊಳಿಸಲು ಮುಂದಾಯಿತು. ಅದರಂತೆ ೧೯೩೨ರಲ್ಲಿ ಮದ್ರಾಸ್ ಸಹಕಾರಿ ಸಂಘಗಳ ಕಾಯ್ದೆಯನ್ನು ಮತ್ತು ೧೯೩೪ರಲ್ಲಿ ಮದ್ರಾಸ್ ಭೂ ಅಡಮಾನ ಬ್ಯಾಂಕುಗಳ ಕಾಯ್ದೆಯನ್ನು ಜಾರಿಗೊಳಿಸಿತು. ಸಹಕಾರಿ ಸಂಘಗಳ ಕಾರ್ಯಾಚರಣೆಯಲ್ಲಿ ಸುಧಾರಣೆ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ೧೯೩೯ರಲ್ಲಿ ವಿಜಯರಾಘವಾಚಾರಿ ಸಮಿತಿಯು ಮಹತ್ವದ ವರದಿಯೊಂದನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿತು.

ಜಿಲ್ಲೆಯಲ್ಲಿ ೧೯೦೯ರಲ್ಲಿ ಪ್ರಾರಂಭವಾದ ಸಹಕಾರಿ ಆಂದೋಲನವು ವ್ಯವಸ್ಥಿತ ರೀತಿಯಲ್ಲಿ ಪ್ರಗತಿಯನ್ನು ಸಾಧಿಸುವ ಮೂಲಕ ಜಿಲ್ಲೆಯ ಜನ ಸಮುದಾಯದ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾಯಿತು. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ೧೯೧೩ರಲ್ಲಿ ಸ್ಥಾಪನೆಯಾದ ನಂತರದ ಮೊದಲ ದಶಕದಲ್ಲೇ ಜಿಲ್ಲೆಯ ಸಹಕಾರಿ ಆಂದೋಲನವು ತೀವ್ರಗತಿಯ ಪ್ರಗತಿಯನ್ನು ಸಾಧಿಸುವಂತಾಯಿತು. ಸಹಕಾರಿ ಕಾರ್ಯಕರ್ತರು ತಂಡೋಪತಂಡಗಳಲ್ಲಿ ಜಿಲ್ಲೆಯಾದ್ಯಂತ ಸಂಚರಿಸಿ, ಸಹಕಾರಿ ತತ್ವಗಳ ಬಗ್ಗೆ ಬಿರುಸಿನ ಪ್ರಚಾರವನ್ನು ಕೈಗೊಂಡರಲ್ಲದೇ, ಜಿಲ್ಲೆಯ ಕೆಲ ಪತ್ರಿಕೆಗಳು ಸಹ ಸಹಕಾರದ ಬಗ್ಗೆ ಆಗಾಗ ಲೇಖನಗಳನ್ನು ಪ್ರಕಟಿಸಿ ಸೂಕ್ತ ಪ್ರಚಾರವನ್ನು ಒದಗಿಸಿದವು. ಸಹಕಾರಿಗಳ ಸತತ ಪ್ರಯತ್ನದಿಂದಾಗಿ ೧೯೨೦ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ೨೨೭ ಸಹಕಾರಿ ಸಂಘಗಳನ್ನು ಸಂಘಟಿಸಲಾಗಿತ್ತು. ಅವುಗಳ ಸಂಖ್ಯೆಯು ೧೯೨೭ರ ವೇಳೆಗೆ ೪೧೮ಕ್ಕೆ ಏರಿತ್ತು. ಜಿಲ್ಲೆಯಲ್ಲಿ ಕ್ರಮೇಣ ಸಾಲೇತರ ಸಹಕಾರ ಸಂಘಗಳ ಸ್ಥಾಪನೆಗೂ ಉತ್ತೇಜನ ದೊರೆಯುವಂತಾಯಿತು. ಮಂಗಳೂರಿನಲ್ಲಿ ಭಾರತದಲ್ಲೇ ಆ ಬಗೆಯ ಮೊಟ್ಟ ಮೊದಲನೆಯದೆಂದು ಹೇಳಲಾಗುವ

ಮುದ್ರಣ ಸಹಕಾರ ಸಂಘದ ಸ್ಥಾಪನೆಯಾಯಿತು. ಆದರೆ ಅದು ಕೆಲವೇ ವರ್ಷಗಳಲ್ಲಿ ಮುಚ್ಚಲ್ಪಟ್ಟಿತು. ಸಹಕಾರಿ ಆಂದೋಲನದ ಆರಂಭದಿಂದಲೂ ಸ್ಥಳೀಯ ಸಹಕಾರಿಗಳು ಸಲ್ಲಿಸಿದ ಸೇವೆಯ ಬಗ್ಗೆ ಸರ್ಕಾರವು ಸಹ ಮೆಚ್ಚುಗೆಯಿಂದ ಹೊಗಳಿತು. ವ್ಯವಸಾಯದ ಬಗೆಗಿನ ರಾಯಲ್ ಆಯೋಗವು ಸಹಕಾರದ ಮಹತ್ವವನ್ನು ಎತ್ತಿ ತೋರಿಸುವಾಗ ಜಿಲ್ಲೆಯ ಸಹಕಾರಿ ಕ್ಷೇತ್ರದ ಪ್ರಗತಿಯ ಬಗ್ಗೆ ಈ ರೀತಿ ಹೇಳಿತು. "ಮುಂಬೈ ಪ್ರಾಂತದ ಧಾರವಾಡ ಜಿಲ್ಲೆಯ ಮತ್ತು ಪಂಜಾಬಿನ ಜಲಂಧರ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ.೨೫ರಷ್ಟು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ.೨೦ರಷ್ಟು ಜನರು ಸಹಕಾರಿ ಕ್ಷೇತ್ರದಲ್ಲಿರುವರು".

ಜಾಗತಿಕ ಆರ್ಥಿಕ ಮುಗ್ಗಟ್ಟಿನಿಂದಾಗಿ ಜಿಲ್ಲೆಯ ಸಹಕಾರಿ ಚಳವಳಿಗೂ ೧೯೨೭–೩೪ರ ಅವಧಿಯಲ್ಲಿ ತಾತ್ಕಾಲಿಕ ಹಿನ್ನಡೆಯುಂಟಾಯಿತು. ಆನಂತರ ಸಹಕಾರ ಚಳವಳಿಗೆ ಮತ್ತೆ ಚಾಲನೆ ದೊರೆತು ಪ್ರಗತಿಯ ಹಾದಿಯಲ್ಲಿ ಮುನ್ನಡೆಯುವಂತಾಯಿತು. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಸದಸ್ಯ ಸಹಕಾರಿ ಸಂಘಗಳ ಸಂಖ್ಯೆಯು ಸಹ ಕ್ರಮೇಣವಾಗಿ ಹೆಚ್ಚುತ್ತಾ ಹೋಯಿತು. ೧೯೩೯ರಲ್ಲಿದ್ದ ೩೧೩ ಸದಸ್ಯ ಸಹಕಾರ ಸಂಘಗಳ ಸಂಖ್ಯೆಯು ೧೯೪೪ರಲ್ಲಿ ೪೩೭ಕ್ಕೆ ಮತ್ತು ೧೯೪೯ರಲ್ಲಿ ೪೮೦ಕ್ಕೂ ಏರುವಂತಾಯಿತು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಮದ್ರಾಸ್ ಸರ್ಕಾರ ಆಹಾರ ಧಾನ್ಯಗಳ ನಿಯಂತ್ರಣವನ್ನು ಜಾರಿಗೊಳಿಸಿತು. ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರಿಂದ ಕಡ್ಡಾಯವಾಗಿ ಪಡೆದುಕೊಳ್ಳಬೇಕಾದ ಅಕ್ಕಿ, ಭತ್ತ ಖರೀದಿ ಮತ್ತು ಗ್ರಾಹಕರಿಗೆ ರೇಶನ್ ಮೂಲಕ ಆಹಾರ ಧಾನ್ಯ ವಿತರಿಸುವ ಕಾರ್ಯವನ್ನು ಜಿಲ್ಲೆಯ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಹಾಗೂ ಸೆಂಟ್ರಲ್ ಸ್ಟೋರ್ಸ್‌ನ ಮೂಲಕ ಕೈಗೊಳ್ಳಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯ ಪ್ರಾರಂಭದ ವರ್ಷದಲ್ಲಿ (೧೯೫೦–೫೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಕಾಸರಗೋಡು ತಾಲೂಕು ಸೇರಿದಂತೆ) ೩೪೯ ವ್ಯವಸಾಯ ಪತ್ತಿನ ಸಹಕಾರ ಸಂಘಗಳು (೫೧ ಆದಿ ದ್ರಾವಿಡ ಸಂಘಗಳೂ ಸೇರಿದಂತೆ) ಇದ್ದುವು ಹಾಗೂ ಜಿಲ್ಲೆಯ ೫೨೦ ಗ್ರಾಮಗಳನ್ನು 'ಸಹಕಾರ'ದ ವ್ಯಾಪ್ತಿಯಲ್ಲಿ ತರಲಾಗಿತ್ತು. ಮೊದಲ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ವ್ಯವಸಾಯ ಪತ್ತಿನ ಸಹಕಾರ ಸಂಘಗಳ ಸಂಖ್ಯೆ ೪೪೮ಕ್ಕೆ ತಲುಪಿತ್ತಲ್ಲದೇ ಸಹಕಾರದ ಧ್ವಜದಡಿ ತರಲಾದ ಗ್ರಾಮಗಳ ಸಂಖ್ಯೆ ೫೬೧ಕ್ಕೆ ತಲುಪಿತ್ತು. ಈ ಅವಧಿಯಲ್ಲಿ ಸಹಕಾರಿ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆಯು ೨೯೩೦೫ ರಿಂದ ೪೫,೭೩೮ಕ್ಕೂ, ಒಟ್ಟು ಷೇರು ಬಂಡವಾಳವು ರೂ. ೩೫೦೭೧೮ ರಿಂದ ರೂ. ೭೫೫೦೦೦ಕ್ಕೂ ತಲುಪಿತ್ತು. ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಜಿಲ್ಲೆಯ ಎಲ್ಲಾ ಗ್ರಾಮಗಳನ್ನು (ಕೇವಲ ಐದು ಗ್ರಾಮಗಳನ್ನು ಹೊರತುಪಡಿಸಿ) ಮತ್ತು ಅವುಗಳಲ್ಲಿನ ೫೮೬೨೦ ರೈತ ಕುಟುಂಬಗಳನ್ನು ಸಹಕಾರಿ ವಲಯದ ವ್ಯಾಪ್ತಿಯಲ್ಲಿ ತರಲಾಗಿತ್ತು. ಕೃಷಿಕರಲ್ಲದ ಸದಸ್ಯರನ್ನು ಇದರೊಂದಿಗೆ ಸೇರಿಸಿದ್ದಲ್ಲಿ, ಆಗ ಸಹಕಾರಿ ವಲಯದ ವ್ಯಾಪ್ತಿಗೆ ತರಲಾದ ಒಟ್ಟು ಕುಟುಂಬಗಳ ಸಂಖ್ಯೆಯು ೬೫೧೩೦ ಆಗಿದ್ದಿತು. ಈ ಸಹಕಾರ ಸಂಘಗಳ ಷೇರು ಬಂಡವಾಳವು ರೂ.೨,೦೯,೯೯,೧೯೮ ಇದ್ದು, ಸಾಲ ಮುಂಗಡಗಳ ಮೊತ್ತವು ರೂ.೧,೦೮,೭೧,೪೮೭ ಆಗಿದ್ದಿತು.

ಜಿಲ್ಲೆಯಲ್ಲಿ ೧೯೫೯ರ ಏಪ್ರಿಲ್ ೧ ರಿಂದ ದೊಡ್ಡ ಪ್ರಮಾಣದ ಸಹಕಾರ ಸಂಘಗಳನ್ನು ಸಂಘಟಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಆ ವೇಳೆಗಾಗಲೇ ಜಿಲ್ಲೆಯಲ್ಲಿ ೨೯ ದೊಡ್ಡ ಪ್ರಮಾಣದ ಸಹಕಾರ ಸಂಘಗಳಿದ್ದು, ಅವುಗಳನ್ನು ಅಂತೆಯೇ ಮುಂದುವರಿಸಲಾಯಿತು. ಜಿಲ್ಲೆಯಲ್ಲಿನ ಕೆಲ ದುರ್ಬಲ ಸಹಕಾರಿ ಸಂಘಗಳನ್ನು ಪುನರ್ರಚಿಸಲಾಯಿತು ಮತ್ತು ಸುಮಾರು ೧೭೫ ಸೇವಾ ಸಹಕಾರಿ ಸಂಘಗಳನ್ನು ರಚಿಸಲಾಯಿತು. ಇದೆ ಅವಧಿಯಲ್ಲಿ ಆರು ತಾಲೂಕು ವ್ಯವಸಾಯ ಹುಟ್ಟುವಳಿ ಮಾರಾಟ ಸಹಕಾರ ಸಂಘಗಳನ್ನು ಪ್ರಾರಂಭಿಸಲಾಯಿತು. ಇವು ಸದಸ್ಯ ರೈತರಿಗೆ ಬೇಸಾಯ ಉಪಕರಣಗಳು, ಬಿತ್ತನೆ ಬೀಜ, ಗೊಬ್ಬರ, ಕ್ರಿಮಿನಾಶಕ ಔಷಧ, ಮುಂತಾದವನ್ನು ನ್ಯಾಯ ಬೆಲೆಯಲ್ಲಿ ವಿತರಿಸುವುದರೊಂದಿಗೆ ಫಸಲು ಸಾಲವನ್ನು ನೀಡುತ್ತಿದ್ದವು. ಸದಸ್ಯರಿಂದ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿ ಅದರ ಮಾರಾಟದ ವ್ಯವಸ್ಥೆಯನ್ನೂ ಮಾಡುತ್ತಿದ್ದುವು. ಸರ್ಕಾರ ಈ ಮಾರಾಟ ಸಂಘಗಳಿಗೆ ಮತ್ತು ಕೆಲ ದುರ್ಬಲ ದೊಡ್ಡ ಪ್ರಮಾಣದ ಸಹಕಾರ ಸಂಘಗಳ ಪುನಶ್ಚೇತನ ಕೈಗೊಳ್ಳುವ ಉದ್ದೇಶಕ್ಕಾಗಿ ಸಾಲ ಮತ್ತು ಸಹಾಯ ಧನದ ಸೌಲಭ್ಯವನ್ನು ಒದಗಿಸಿತ್ತು. ಗೋದಾಮುಗಳ ನಿರ್ಮಾಣಕ್ಕೂ ಹಣವನ್ನು ನೀಡುತ್ತಿದ್ದು, ಅದರಂತೆ ಮಧ್ಯಮ ಗಾತ್ರದ ಐದು ಗೋದಾಮುಗಳನ್ನು ಮತ್ತು ಎರಡು ಗ್ರಾಮೀಣ ಗೋದಾಮುಗಳನ್ನು ಜಿಲ್ಲೆಯಲ್ಲಿ ನಿರ್ಮಿಸಲಾಯಿತು.

ಜಿಲ್ಲೆಯಲ್ಲಿ ೧೯೦೯ರಲ್ಲಿ ಆರಂಭಗೊಂಡ ಸಹಕಾರ ಚಳವಳಿ ಸ್ವಾತಂತ್ರ್ಯ ಪೂರ್ವದಲ್ಲಿ ವ್ಯವಸ್ಥಿತವಾಗಿ ಬೆಳೆದುಬಂದಿತಲ್ಲದೇ, ಅದು ಜನರಲ್ಲಿ 'ಸಹಕಾರ' ದ ಬಗ್ಗೆ ವಿಶ್ವಾಸ ಮತ್ತು ಆಸಕ್ತಿ ಮೂಡಿಸುವಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸುವಂತಾಗಿತ್ತು. ಸ್ವಾತಂತ್ರ್ಯಾನಂತರವೂ ೧೯೫೯ರವರೆಗೆ ಅದೇ ಪರಿಸ್ಥಿತಿಯಲ್ಲಿ ಮುಂದುವರಿಯುವಂತಾಯಿತು. ರಾಜ್ಯ ಪುನರ್‌ಸಂಘಟನೆಯ ನಂತರ ಇಡೀ ರಾಜ್ಯಕ್ಕೆ

ಅನ್ವಯವಾಗುವಂತೆ ಸಮಗ್ರ ಏಕೀಕೃತ ಕರ್ನಾಟಕ ಸಹಕಾರಿ ಕಾಯ್ದೆ ೧೯೫೯ನ್ನು ರೂಪಿಸಿ, ರಾಜ್ಯಾದ್ಯಂತ ೧೯೬೦ರಿಂದ ಜಾರಿಗೆ ತಂದನಂತರ 'ಸಹಕಾರಿ' ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರಲಾಯಿತು. ಸಹಕಾರಿ ಕ್ಷೇತ್ರ ಆವರೆಗೆ ಸರ್ಕಾರದ ಯಾವುದೇ ಆರ್ಥಿಕ ಸಹಾಯವನ್ನು ಕಂಡಿರಲಿಲ್ಲ. ಹಾಗೂ ಸರ್ಕಾರದ ಪ್ರೋತ್ಸಾಹ ಮತ್ತು ಸಹಕಾರ ಸಹ ಸೀಮಿತವಾಗಿತ್ತು. ಇಡೀ ಜಿಲ್ಲೆಗೆ ಒಬ್ಬ ಉಪ ನಿಬಂಧಕರು ಮಾತ್ರ ಇದ್ದು, ಕಾರ್ಯನಿರ್ವಹಿಸುತ್ತ ಇದ್ದರು. ಕರ್ನಾಟಕ ರಾಜ್ಯ ಉದಯವಾದ ಮೇಲೆ ಸಹಕಾರ ಚಳವಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಯಿತು. ದೇಶದಲ್ಲೇ ಸಹಕಾರ ಚಳವಳಿಗೆ ಪ್ರೋತ್ಸಾಹ ನೀಡುವ ಧೋರಣೆ ಇದ್ದ ಕಾರಣ ಇಲ್ಲಿಯೂ ಅದನ್ನು ಅಳವಡಿಸಿಲ್ಪಟ್ಟಿತು. ಆನಂತರ ಜಿಲ್ಲೆಯಲ್ಲಿ ಅನೇಕ ಸಹಕಾರ ಸಂಸ್ಥೆಗಳು ಸ್ಥಾಪನೆಗೊಂಡವು. ರೈತರ ಅನುಕೂಲಕ್ಕಾಗಿ ಸಹಕಾರಿ ಸಕ್ಕರೆ ಕಾರ್ಖಾನೆ, ತೋಟಗಾರಿಕೆ ಬೆಳೆಯಾದ ಅಡಿಕೆ, ಕೊಕೊ ಮಾರಾಟಕ್ಕೆ ಕೇಂದ್ರ ಅಡಿಕೆ ಮತ್ತು ಕೊಕೊ ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘ (ಕ್ಯಾಂಪ್ಕೋ) ಬಹಳ ದೊಡ್ಡ ಸಂಸ್ಥೆಯಾಗಿ ಕಾರ್ಯಮಾಡುತ್ತಾ ಚಾಕ್ಲೇಟ್ ಫ್ಯಾಕ್ಟರಿ ಸ್ಥಾಪನೆ ಮಾಡಿ ದೇಶದಲ್ಲಿ ಸಹಕಾರ ಚಳವಳಿಯ ಅಗ್ರ ಸ್ಥಾನದಲ್ಲಿರುವ ಸಂಸ್ಥೆಯಾಗಿದೆ.

೧೯೬೬ರ ಜೂನ್ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿನ ಪತ್ತಿನ ಸಹಕಾರ ಸಂಘಗಳಲ್ಲಿನ ಸದಸ್ಯರ ಸಂಖ್ಯೆ ೭೦೩೪೦ ಆಗಿದ್ದಿತು. ಅವುಗಳು ಹೊಂದಿದ್ದ ಷೇರು ಬಂಡವಾಳವು ರೂ. ೩೮೪೧೫೮೪ ಮತ್ತು ನೀಡಿದ ಸಾಲ–ಮುಂಗಡಗಳು ರೂ. ೧,೪೮,೫೨,೯೦೩ ಆಗಿದ್ದಿತು. ಕೃಷಿ ಉತ್ಪನ್ನಗಳ ದಾಸ್ತಾನು ಸೌಲಭ್ಯಕ್ಕಾಗಿ ಸುಮಾರು ೬೩ ಗೋದಾಮುಗಳನ್ನು ನಿರ್ಮಿಸಲಾಗಿತ್ತು. ಪ್ರತಿ ತಾಲೂಕಿನಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದವು. ಅಲ್ಲದೇ ಪುತ್ತೂರು, ಬಂಟ್ವಾಳ, ಸುಳ್ಯ ಮತ್ತು ಕಾರ್ಕಳ ತಾಲೂಕುಗಳಲ್ಲಿನ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಅಲ್ಲಿನ ಅಡಿಕೆ ತೋಟಗಾರಿಕೆಯ ಅಭಿವೃದ್ಧಿಗಾಗಿ ತ್ವರಿತ ಕಾರ್ಯಕ್ರಮದಡಿಯಲ್ಲಿ ಅಗತ್ಯ ಸಾಲವನ್ನು ವಿತರಿಸುವಂತೆ ಸೂಚಿಸಲಾಯಿತು. ಕೇಂದ್ರ ಪ್ರೇರಿತ ಯೋಜನೆಯನ್ವಯ ಸಹಕಾರಿ ಸ್ಟೋರ್‌ಗಳ ಸಂಘಟನಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು. ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಸಗಟು ಮಾರಾಟ ಮಳಿಗೆಯು ಸಹಕಾರ ಸಂಘಗಳಿಗೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಸಗಟು ವ್ಯಾಪಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಾರಂಭಿಸಿತು. ತಾಲೂಕು ಕೃಷಿ ಉತ್ಪನ್ನ ಸಹಕಾರಿ ಮಾರಾಟ ಸಂಘಗಳು ಆಯಾ ತಾಲೂಕುಗಳಲ್ಲಿನ ಪ್ರಾಥಮಿಕ ಪತ್ತಿನ ಸಂಘಗಳಿಗೆ ಬೇಕಾದ ವಸ್ತುಗಳನ್ನು ಸಗಟು ದರದಲ್ಲಿ ಒದಗಿಸುವ ವ್ಯವಸ್ಥೆಯನ್ನು ಕೈಗೊಂಡವು. ಜಿಲ್ಲೆಯಲ್ಲಿನ ಸೇವಾ ಸಹಕಾರ ಸಂಘಗಳು ಗ್ರಾಹಕ ವಸ್ತುಗಳ ಚಿಲ್ಲರೆ ವ್ಯಾಪಾರಕ್ಕೆ ತಮ್ಮನ್ನು ತೊಡಗಿಸಿಕೊಂಡವು. ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕು ಮತ್ತು ಗ್ರಾಮೀಣ ಸಹಕಾರಿ ಸಂಘಗಳು ನೀರಾವರಿ ಪಂಪ್‌ಸೆಟ್‌ಗಳಿಗಾಗಿ ರೈತರ ಮಧ್ಯಮಾವಧಿ ಸಾಲಗಳಿಗೆ ಮಂಜೂರಾತಿ ನೀಡುವ ಏಜನ್ಸಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವಂತಾದವು. ಅದರಂತೆ ೧೯೬೮ರ ಜೂನ್ ಅಂತ್ಯದ ವೇಳೆಗೆ ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮದಡಿ, ೧೪೧೮ ಪಂಪ್‌ಸೆಟ್‌ಗಳಿಗಾಗಿ ೧೯೩ ಸಹಕಾರಿ ಸಂಘಗಳಿಗೆ ೨೪೫೦೩೬೬ ರೂ.ಗಳ ಸಾಲವನ್ನು ಮಂಜೂರು ಮಾಡಲಾಯಿತು. ರಾಜ್ಯ ವಿದ್ಯುತ್ ನಿಗಮವು ಸಹ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಯೋಜನೆಯೊಂದನ್ನು ರೂಪಿಸಿತು. ವ್ಯವಸಾಯ ಮರುಹಣಕಾಸಿನ ಸಂಸ್ಥೆ (ಅಗ್ರಿಕಲ್ಚರಲ್ ರಿಫೈನಾನ್ಸ್ ಕಾರ್ಪೊರೇಷನ್) ಕೈಗೆತ್ತಿಕೊಂಡ 'ನೀರಾವರಿ ಬಾವಿ' ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿಗೆ ದೀರ್ಘಾವಧಿ ಸಾಲವನ್ನು ಮಂಜೂರು ಮಾಡಲಾಯಿತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರೈತರಿಗೆ ಮತ್ತಷ್ಟು ನೆರವು ಒದಗಿಸಲು ಹಲವಾರು ಯೋಜನೆಗಳನ್ನು ಆರಂಭಿಸಲಾಯಿತು. ಇದರ ಅನ್ವಯ ವಿವಿಧ ಹಂತದ ಸಹಕಾರ ಸಂಘಗಳಿಗೆ ಸಹಾಯ ಧನ, ಅನುದಾನ, ಪಾಲು ಬಂಡವಾಳ. ಸಾಲ ಮಂಜೂರಾತಿ, ಮುಂತಾದ ಉದ್ದೇಶಕ್ಕಾಗಿ ಹಣಕಾಸನ್ನು ಒದಗಿಸಲಾಯಿತು. ಮಂಗಳೂರು ಮತ್ತು ಪುತ್ತೂರುಗಳಲ್ಲಿ ಸಹಕಾರ ಇಲಾಖೆಯ ಸಹಾಯಕ ನಿಬಂಧಕರ ಕಚೇರಿಗಳನ್ನು ಸ್ಥಾಪಿಸಲಾಯಿತು.

ಜಿಲ್ಲೆಯಲ್ಲಿ ೧೯೭೨ರಲ್ಲಿ ಒಟ್ಟು ೯೨೩ ಸಹಕಾರ ಸಂಘಗಳಿದ್ದು (ಸಮಾಪನೆಗೊಂಡ ೫೮ ಸಂಘಗಳೂ ಸೇರಿದಂತೆ) ಆ ಪೈಕಿ ೬೩೧ ಸಹಕಾರ ಸಂಘಗಳು ಮಂಗಳೂರು ವಲಯದಲ್ಲೂ ಹಾಗೂ ೨೯೨ ಸಹಕಾರ ಸಂಘಗಳು ಪುತ್ತೂರು ವಲಯದಲ್ಲೂ ಇದ್ದವು. ಸಹಕಾರ ಮೀನು ಮಾರಾಟ ಫೆಡರೇಶನ್ ಸೇರಿದಂತೆ ಸುಮಾರು ೩೫ ಮೀನುಗಾರಿಕೆ ಸಹಕಾರಿ ಸಂಘಗಳು ಜಿಲ್ಲೆಯಲ್ಲಿದ್ದವು. ಇವು ಜಿಲ್ಲಾ ಮೀನುಗಾರಿಕೆ ಇಲಾಖೆಯ (ಉಪನಿರ್ದೇಶಕರ ಕಚೇರಿ) ಆಡಳಿತ ನಿಯಂತ್ರಕ್ಕೆ ಒಳಪಟ್ಟಿದ್ದವು. ಜಿಲ್ಲೆಯಲ್ಲಿ ೧೯೭೦–೭೧ರ ಅಂತ್ಯಕ್ಕೆ ಒಟ್ಟು ೧೧೬೭೮೦ ರೈತ ಕುಟುಂಬಗಳನ್ನು ಸಹಕಾರದ ಧ್ವಜದಡಿಯಲ್ಲಿ ತರಲಾಯಿತು. ಸಹಕಾರ ಸಂಘಗಳಲ್ಲಿ ಸಂಗ್ರಹಗೊಂಡ ನಿವ್ವಳ ಷೇರು ಬಂಡವಾಳದ ಮೊತ್ತವು ರೂ. ೭೫೬೦೦೦ ಇದ್ದು, ಅದರಲ್ಲಿ ಸರಕಾರದ ಪಾಲಿನ ಮೊತ್ತವು ರೂ.೧೧,೮೯,೨೦೦

ರೂ.ಗಳಾಗಿತ್ತು. ಸರಕಾರ ೧೯೭೧ರಲ್ಲಿ ಮಂಗಳೂರಿನಲ್ಲಿ ಹತ್ತು ಸಾವಿರ ಲೀಟರ್ ಸಾಮರ್ಥ್ಯದ ಹಾಲನ್ನು ಸಂಸ್ಕರಿಸುವ ಡೈರಿಯನ್ನು ಸ್ಥಾಪಿಸುವುದರೊಂದಿಗೆ ಹಾಲಿನ ಸಂಗ್ರಹಣೆ ಹಾಗೂ ವಿತರಣೆಯ ಜಾಲವೂ ಜಿಲ್ಲೆಯಲ್ಲಿ ಪ್ರಾರಂಭಗೊಂಡಿತು. ನಂತರ ಮಣಿಪಾಲದಲ್ಲಿ ೧೯೭೪ರಲ್ಲಿ ಕೆನರಾ ಹಾಲು ಒಕ್ಕೂಟವನ್ನು ಸಂಘಟಿಸಲಾಯಿತು. ಐದನೆ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಸಹಕಾರಿ ಸಂಘಗಳನ್ನು ಅದರಲ್ಲೂ ಪ್ರಮುಖವಾಗಿ ಪ್ರಾಥಮಿಕ ವ್ಯವಸಾಯ ಪತ್ತಿನ ಸಂಘಗಳನ್ನು ಬಲಪಡಿಸುವ ಸಲುವಾಗಿ ಮತ್ತು ಅವುಗಳನ್ನು ನಿರ್ವಹಣಾ ಸಾಮರ್ಥ್ಯದ ಆರ್ಥಿಕ ಘಟಕಗಳನ್ನಾಗಿ ಪರಿವರ್ತಿಸಲು ಹಲವಾರು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಅದರಂತೆ ಅನೇಕ ದುರ್ಬಲ ಸಹಕಾರಿ ಸಂಘಗಳನ್ನು ಅದರಲ್ಲೂ ವಿಶೇಷವಾಗಿ ವ್ಯವಸಾಯ ಪತ್ತಿನ ಸಂಘಗಳನ್ನು ಇತರ ಸಧೃಢ (ಪತ್ತಿನ) ಸಂಘಗಳೊಂದಿಗೆ ವಿಲೀನಗೊಳಿಸಿ ಅವುಗಳನ್ನು ಪುನರ್ರಚಿಸಲಾಯಿತು. ಆ ಪರಿಣಾಮವಾಗಿ ಜಿಲ್ಲೆಯ ಕೃಷಿ ಪತ್ತಿನ ಸಂಘಗಳ ಸಂಖ್ಯೆಯಲ್ಲಿ ಗಣನೀಯ ಇಳಿಮುಖ ಕಂಡಿತು. ಜಿಲ್ಲೆಯಲ್ಲಿ ೧೯೭೦–೭೧ರಲ್ಲಿ ಒಟ್ಟು ೮೬೦ (ಸಮಾಪನೆಗೊಂಡವು ಸೇರಿದಂತೆ) ಸಹಕಾರ ಸಂಘಗಳಿದ್ದು, ಆ ಪೈಕಿ ಕೃಷಿ ಪತ್ತಿನ ಸಂಘಗಳ ಸಂಖ್ಯೆ ೩೪೫ ಮತ್ತು ಇತರ ಎಲ್ಲ ಬಗೆಯ ಸಹಕಾರ ಸಂಘಗಳ ಸಂಖ್ಯೆ ೫೧೫ ಆಗಿದ್ದಿತು. ಜಿಲ್ಲೆಯ ಎಲ್ಲ ಸಕ್ರಿಯ ಸಹಕಾರ ಸಂಘಗಳಲ್ಲಿನ ಸದಸ್ಯರ ಸಂಖ್ಯೆ ೩.೦೭ ಲಕ್ಷದಷ್ಟಿತ್ತು. ೧೯೭೪–೭೫ರಲ್ಲಿ ಒಟ್ಟು ೧೦೭೧ ಸಹಕಾರ ಸಂಘಗಳಿದ್ದು, ಅವುಗಳಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆ ೩೧೦ ಮತ್ತು ಇತರ ಸಹಕಾರ ಸಂಘಗಳ ಸಂಖ್ಯೆ ೭೬೧ ಆಗಿದ್ದಿತು. ಸಕ್ರಿಯ ಸಹಕಾರ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೩.೮೫ ಲಕ್ಷಕ್ಕೆ ಏರಿತ್ತು. ಮುಂದೆ ೧೯೭೮–೭೯ರಲ್ಲಿ ಜಿಲ್ಲೆಯಲ್ಲಿ ಒಟ್ಟು ೯೪೧ ಸಹಕಾರ ಸಂಘಗಳು ಇದ್ದು, ಆ ಪೈಕಿ ೧೬೪ ಸಂಘಗಳು ಕೃಷಿ ಪತ್ತಿನ ಸಂಘಗಳಾಗಿದ್ದು, ಉಳಿದ ೭೭೭ ಇತರ ಎಲ್ಲ ಬಗೆಯ ಸಹಕಾರಿ ಸಂಘಗಳಾಗಿದ್ದುವು. ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳಲ್ಲಿನ ಸದಸ್ಯರ ಸಂಖ್ಯೆ ೫.೧೬ ಲಕ್ಷದಷ್ಟಾಗಿತ್ತು. ೧೯೭೭ರಲ್ಲಿ ರಾಜ್ಯದ ಪ್ರಥಮ ಮೀನುಗಾರರ ಮಹಿಳಾ ಸಹಕಾರಿ ಸಂಘವನ್ನು ಮಲ್ಪೆಯಲ್ಲಿ ಸಂಘಟಿಸಲಾಯಿತು.

ಹೈನುಗಾರಿಕೆ ಉದ್ಯಮಕ್ಕೆ ದೊರೆತ ಸರಕಾರದ ಪ್ರೋತ್ಸಾಹದಿಂದಾಗಿ ೧೯೮೦ರ ನಂತರದ ದಶಕಗಳಲ್ಲಿ ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಬಹು ವ್ಯಾಪಕವಾಗಿ ಸ್ಥಾಪನೆಗೊಂಡವು. ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವನ್ನು ೧೯೮೬ರಲ್ಲಿ ಸ್ಥಾಪಿಸಿ, ಆ ಮೊದಲೇ ಅಸ್ತಿತ್ವದಲ್ಲಿದ್ದ ಮಣಿಪಾಲದ ಕೆನರಾ ಹಾಲು ಒಕ್ಕೂಟವನ್ನು ಇದರೊಂದಿಗೆ ವಿಲೀನಗೊಳಿಸಲಾಯಿತು ಹಾಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಎಲ್ಲ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಮಂಗಳೂರು ಹಾಲು ಒಕ್ಕೂಟದ ವ್ಯಾಪ್ತಿಗೆ ಸೇರಿಸಲಾಯಿತು.

ಜಿಲ್ಲೆಯಲ್ಲಿ ೧೯೮೫ರ ಜೂನ್ ಅಂತ್ಯದ ವೇಳೆಗೆ ಒಟ್ಟು ೧೦೭೩ ಸಹಕಾರ ಸಂಘಗಳಿದ್ದು, ಅವುಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೬.೨೪ ಲಕ್ಷದಷ್ಟಾಗಿತ್ತು. ಒಟ್ಟು ಸಹಕಾರ ಸಂಘಗಳಲ್ಲಿ (೧೦೭೩), ೧೬೭ ಸಕ್ರಿಯ ಕೃಷಿ ಪತ್ತಿನ ಸಂಘಗಳಿದ್ದು, ಅವುಗಳಲ್ಲಿನ ಸದಸ್ಯರ ಸಂಖ್ಯೆ ೨.೬೭ ಲಕ್ಷದಷ್ಟಾಗಿದ್ದಿತು. ವರ್ಷಾಂತ್ಯದ ವೇಳೆಗೆ ಕೃಷಿ ಪತ್ತಿನ ಸಂಘಗಳು ಸದಸ್ಯರಿಗೆ ವಿತರಿಸಿದ ಅಲ್ಪಾವಧಿ ಸಾಲದ ಮೊತ್ತ ೨೫೦೨.೬೩ ಲಕ್ಷ ರೂ. ಮತ್ತು ಮಧ್ಯಮಾವಧಿ ಸಾಲದ ಮೊತ್ತ ೩೦೨.೧೮ ಲಕ್ಷ ರೂ.ಗಳಾಗಿದ್ದಿತು. ೧೯೯೧–೯೨ರಲ್ಲಿ (ಸಮಾಪನೆಗೊಂಡ ೧೦೧ ಸಂಘಗಳು ಸೇರಿದಂತೆ) ಜಿಲ್ಲೆಯಲ್ಲಿನ ಒಟ್ಟು ಸಹಕಾರ ಸಂಘಗಳ ಸಂಖ್ಯೆ ೮೯೭ ಆಗಿದ್ದಿತು (ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹೊರತುಪಡಿಸಿ). ಒಟ್ಟು ೬೩೧ ಸಕ್ರಿಯ ಸಹಕಾರ ಸಂಘಗಳ ಪೈಕಿ ೧೬೫ ಸಂಘಗಳು ಕೃಷಿ ಪತ್ತಿನ ಸಂಘಗಳಾಗಿದ್ದು, ಅವುಗಳಲ್ಲಿನ ಸದಸ್ಯರ ಸಂಖ್ಯೆ ೩.೫೧ ಲಕ್ಷದಷ್ಟಾಗಿದ್ದಿತು. ಕೃಷಿ ಪತ್ತಿನ ಸಹಕಾರ ಸಂಘಗಳು ವರ್ಷಾಂತ್ಯದ ವೇಳೆಗೆ ವಿತರಿಸಿದ್ದ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳ ಮೊತ್ತ ಕ್ರಮವಾಗಿ ೪೩೨೩ ಲಕ್ಷ ರೂ., ೩೯೫ ಲಕ್ಷ ರೂ ಮತ್ತು ೧೭೬ ಲಕ್ಷ ರೂ. ಗಳಾಗಿದ್ದಿತು. ೧೯೯೧–೯೨ರಲ್ಲಿ ಜಿಲ್ಲೆಯಲ್ಲಿ ೨೨೩ ಹಾಲು ಉತ್ಪಾದಕರ ಸಂಘಗಳಿದ್ದು, ಅವುಗಳಲ್ಲಿನ ಸದಸ್ಯರ ಸಂಖ್ಯೆ ೩೯೭೬೫ ಆಗಿದ್ದಿತು.

ದಕ್ಷಿಣ ಕನ್ನಡ ಜಿಲ್ಲೆಯನ್ನು ೧೯೯೭ರಲ್ಲಿ ಎರಡು ಜಿಲ್ಲೆಗಳನ್ನಾಗಿ ವಿಭಜಿಸಲಾಯಿತು. ಅದರಂತೆ ರಚನೆಯಾದ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾದಂತೆ ವಿವಿಧ ಬಗೆಯ ಸಹಕಾರ ಸಂಘಗಳ ವಿವರವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧೩**

| | ಪ್ರಮುಖ ಸಹಕಾರ ಸಂಘಗಳು | ವರ್ಷ | | | |
|---|---|---|---|---|---|
| | | ೧೯೯೫-೯೬ | ೨೦೦೦-೦೧ | ೨೦೦೨-೦೩ | ೨೦೦೩-೦೪ |
| ೧ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | ೧೦೪ | ೧೧೧ | ೧೧೧ | ೧೧೨ |
| ೨ | ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು | ೫ | ೫ | ೫ | ೫ |
| ೩ | ಪಟ್ಟಣ ಬ್ಯಾಂಕುಗಳು | ೮ | ೮ | ೮ | ೮ |
| ೪ | ನೌಕರರ ಮತ್ತು ಇತರೆ ಪತ್ತಿನ ಸಹಕಾರ ಸಂಘಗಳು | ೪೯ | ೫೮ | ೫೯ | ೬೧ |
| ೫ | ಮಾರುಕಟ್ಟೆ ಸಹಕಾರ ಸಂಘಗಳು | ೫ | ೫ | ೫ | ೫ |
| ೬ | ಇತರೆ ವಿಶೇಷ ಉತ್ಪನ್ನ ಮಾರಾಟ ಸಹಕಾರ ಸಂಘಗಳು | ೩ | ೩ | ೩ | ೩ |
| ೭ | ಸಂಸ್ಕರಣ ಸಹಕಾರ ಸಂಘಗಳು | ೩ | ೩ | ೩ | ೩ |
| ೮ | ಬೇಸಾಯ ಸಹಕಾರ ಸಂಘಗಳು | ೩ | ೩ | ೩ | ೨ |
| ೯ | ಹಾಲು ಉತ್ಪಾದಕರ ಸಹಕಾರ ಸಂಘಗಳು | ೧೩೬ | ೧೮೬ | ೨೦೩ | ೨೧೩ |
| ೧೦ | ಬಳಕೆದಾರರ ಸಹಕಾರ ಸಂಘಗಳು | ೩೫ | ೨೭ | ೨೩ | ೨೨ |
| ೧೧ | ಗೃಹನಿರ್ಮಾಣ ಸಹಕಾರ ಸಂಘಗಳು | ೩೨ | ೩೬ | ೩೬ | ೩೬ |
| ೧೨ | ಕೈಗಾರಿಕಾ ಸಹಕಾರ ಸಂಘಗಳು | ೬೦ | ೬೧ | ೬೧ | ೬೧ |
| ೧೩ | ನೀರಾವರಿ ಸಹಕಾರ ಸಂಘಗಳು | ೨ | ೩ | ೩ | ೩ |
| ೧೪ | ನೇಕಾರರ ಸಹಕಾರ ಸಂಘಗಳು | ೫ | ೫ | ೫ | ೫ |
| ೧೫ | ಇತರೆ ಸಹಕಾರ ಸಂಘಗಳು | ೧೧೨ | ೧೨೩ | ೧೪೭ | ೧೩೦ |
| | ಜಿಲ್ಲೆಯಲ್ಲಿನ ಒಟ್ಟು ಸಹಕಾರ ಸಂಘಗಳು | ೫೬೨ | ೬೩೭ | ೬೭೫ | ೬೬೯ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು.

## ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ., ಮಂಗಳೂರು

ಭಾರತೀಯ ಸಹಕಾರಿ ಸಂಘಗಳ ಕಾಯ್ದೆ ೧೯೧೨ರ ಅನ್ವಯ ಜಿಲ್ಲೆಯಲ್ಲಿ ಹಲವಾರು ಪ್ರಾಥಮಿಕ ಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟವು. ಅವುಗಳಿಗೆ ಹಣಕಾಸಿನ ನೆರವನ್ನು ಒದಗಿಸುವ ಕೇಂದ್ರ ಸಂಸ್ಥೆಯ ಹೊಣೆಗಾರಿಕೆಯನ್ನು ಮೊದಲು ೧೯೦೯ರ ಪುತ್ತೂರಿನ ಗ್ರಾಮೀಣ ಪತ್ತಿನ ಸಹಕಾರಿ ಸಂಘಕ್ಕೆ ಒಪ್ಪಿಸಲಾಯಿತು. ಈ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ಕೇಂದ್ರ ಸಂಸ್ಥೆಯ ಅವಶ್ಯಕತೆಯನ್ನು ಮನಗಂಡು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ. ೧೯೧೩ರ ನವಂಬರ್ ೩೦ರಂದು ಆಗಿನ ಮದ್ರಾಸ್ ಪ್ರಾಂತ್ಯದಲ್ಲಿ ಏಳನೆಯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಾಗಿ ನೋಂದಣಿ ಪಡೆದು, ೧೯೧೪ರ ಜನವರಿ ೨೪ರಂದು ಮೊದಲು ಪುತ್ತೂರಿನಲ್ಲಿ ಕಾರ್ಯಾರಂಭ ಮಾಡಿತು. ಜಿಲ್ಲೆಯ ಸಹಕಾರಿ ಧುರೀಣರಾದ ದಿ.ಮೊಳಹಳ್ಳಿ ಶಿವರಾಯರ ಮುಂದಾಳುತನದಲ್ಲಿ ಸ್ಥಾಪಿತವಾದ ಈ ಬ್ಯಾಂಕು ಪ್ರಾರಂಭದಿಂದಲೂ ತನ್ನ ಸದಸ್ಯ ಸಹಕಾರ ಸಂಘಗಳಿಗೆ ಮಾರ್ಗದರ್ಶನ, ಸಲಹೆ ಸೂಚನೆ, ಹಣಕಾಸಿನ ಸೌಲಭ್ಯ ಮುಂತಾದವನ್ನು ನೀಡುತ್ತಾ ಜಿಲ್ಲೆಯಾದ್ಯಂತ ಸಹಕಾರಿ ಚಳವಳಿಯನ್ನು ಪೋಷಿಸಿ, ಬೆಳೆಸಿಕೊಂಡು ಮುನ್ನಡೆಯುವಂತಾಯಿತು. ಆರಂಭದ ವರ್ಷಗಳನ್ನು ಪುತ್ತೂರಿನಲ್ಲಿ ಕಳೆದು, ಭದ್ರ ತಳಹದಿಯ ಮೇಲೆ ನಿಂತ ಈ ಬ್ಯಾಂಕು, ಜಿಲ್ಲಾ ಕೇಂದ್ರವಾದ ಮಂಗಳೂರಿಗೆ ೧೯೨೮ರಲ್ಲಿ ಸ್ಥಳಾಂತರಿಸಲ್ಪಟ್ಟಿತು. ಬ್ಯಾಂಕು ೧೯೪೯ರಲ್ಲಿ ತನ್ನ ವಿಶಾಲವಾದ ಹೊಸ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸಿತು. ವಿಭಜಿತ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಎಲ್ಲಾ ಗ್ರಾಮಗಳಿಗೂ ಸಹಕಾರ ಚಳವಳಿಯನ್ನು ವಿಸ್ತರಿಸಿ, ಸೇವೆ ಸಲ್ಲಿಸುತ್ತಿರುವ ಈ ಬ್ಯಾಂಕು ಸಹಕಾರ ತತ್ವದ ಪಸಾರ ಮತ್ತು ಶಿಕ್ಷಣ ಕ್ಷೇತ್ರದಲ್ಲೂ ದುಡಿಯುತ್ತಾ ಬಂದಿದೆ. ಜಿಲ್ಲಾ ಸಹಕಾರಿ ಯೂನಿಯನ್ ನಡೆಸುತ್ತಿರುವ 'ಕನ್ನಡ ಸಹಕಾರಿ' ಪತ್ರಿಕೆಯನ್ನು ಈ ಬ್ಯಾಂಕು ೧೯೯೯ರಲ್ಲಿ ಆರಂಭಿಸಿತ್ತು.

ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಜಿಲ್ಲೆಯ ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಮಾರಾಟ ಸಹಕಾರ ಸಂಘ, ಕೃಷಿ ಅಭಿವೃದ್ಧಿ ಸಂಘ (ಸ್ಕ್ಯಾಡ್ಸ್), ನೇಕಾರರ ಸಹಕಾರ ಸಂಘ, ಮೀನು ಮಾರಾಟ ಮಹಾಮಂಡಲ, ತೋಟಗಾರಿಕೆ ಉತ್ಪನ್ನಗಳ ಮಾರಾಟ ಸಹಕಾರ ಸಂಘ, ಸಕ್ಕರೆ ಕಾರ್ಖಾನೆ, ಹಾಲು ಉತ್ಪಾದಕರ ಸಹಕಾರ ಸಂಘ ಮುಂತಾದ ಹಲವಾರು ಸಹಕಾರ ಸಂಘಗಳ ಮೂಲಕ ಜಿಲ್ಲೆಯ ಗ್ರಾಮೀಣ ಆರ್ಥಿಕಾಭಿವೃದ್ಧಿಗೆ ಅನುವು ಮಾಡಿಕೊಟ್ಟಿದೆ. ಜಿಲ್ಲೆಯ ಪ್ರಮುಖ ಬೆಳೆಗಳಾದ ಅಡಿಕೆ, ತೆಂಗು, ಬಾಳೆ, ಭತ್ತ ಕಬ್ಬು ಮುಂತಾದ ಬೆಳೆಗಳನ್ನು ಬೆಳಸಲು ಅಲ್ಪಾವಧಿ ಸಾಲವನ್ನು ನೀಡುತ್ತಿದೆ. ಸರಕಾರದ ಪ್ರಾಯೋಜಿತ ಕಾರ್ಯಕ್ರಮಗಳಾದ ಐ.ಆರ್.ಡಿ.ಪಿ, ನೂರು ಬಾವಿ ಯೋಜನೆ, ಬಯೋಗ್ಯಾಸ್, ಸ್ಪೆಶಲ್ ಕಾಂಪೋನೆಂಟ್ ಮುಂತಾದ ಹಲವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಿಸುವಲ್ಲಿ ಬ್ಯಾಂಕು ಮಹತ್ವದ ಪಾತ್ರ ವಹಿಸುತ್ತಿದೆ. ಗ್ರಾಮೀಣ ರೈತರಿಗೆ ಪಂಪ್‌ಸೆಟ್, ಪವರ್‌ಟಿಲ್ಲರ್, ಹೈನುಗಾರಿಕೆ, ಕೋಳಿಸಾಕಣೆ, ಕೆರೆ ದುರಸ್ತಿ, ಭೂ ಅಭಿವೃದ್ಧಿ, ಕೃಷಿಕ್ಷೇತ್ರ, ಗೃಹ ನಿರ್ಮಾಣ, ಕೋಣ ಖರೀದಿ, ಮುಂತಾದ ಉದ್ದೇಶಗಳಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸುತ್ತಿದೆ. ಹೈನುಗಾರಿಕೆಗೆ ಸಾಕಷ್ಟು ಸಾಲ ಒದಗಿಸುತ್ತಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಈ ಕಸುಬನ್ನು ಅವಲಂಬಿಸಿ ಹಲವಾರು ಕುಟುಂಬಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿರುತ್ತವೆ. ಗ್ರಾಮೀಣ ನಿರುದ್ಯೋಗವನ್ನು ನೀಗಿಸಲು ಕೃಷಿ ಕಷೇತ್ರವೊಂದಕ್ಕೆ ಸಾಧ್ಯವಾಗದಿರುವುದರಿಂದ ಬ್ಯಾಂಕು 'ನಬಾರ್ಡ್' ಪುನರ್ಧನ ಯೋಜನೆಯಡಿಯಲ್ಲಿ ಗ್ರಾಮೀಣ ಗುಡಿಕೈಗಾರಿಕೆ, ಕಿರು ಕೈಗಾರಿಕೆ, ಸೇವಾ ಘಟಕಗಳು, ಮುಂತಾದವುಗಳಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುತ್ತಿದ್ದು, ಹಲವಾರು ಗ್ರಾಮೀಣ ಜನರು ಈ ಸಾಲ ಸೌಲಭ್ಯ ಪಡೆದು ಸ್ವಂತ ಉದ್ಯೋಗವನ್ನು ಕೈಗೊಳ್ಳುವ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿದ್ದಾರೆ. ಗ್ರಾಮೀಣ ಜನರಿಗೆ ವ್ಯಾಪಾರ ಸಾಲ, ವಾಹನ ಖರೀದಿ ಸಾಲ, ಕಲ್ಯಾಣಮಂಟಪ, ವಾಣಿಜ್ಯ ಸಂಕೀರ್ಣ ನಿರ್ಮಾಣ ಸಾಲ ಮುಂತಾದ ಹಲವು ವಿಧದ ಸಾಲದ ಬೇಡಿಕೆಯನ್ನು ಬ್ಯಾಂಕು ಪೂರೈಸುತ್ತಿದೆ. ಮಹಿಳೆಯರು ಸ್ವ-ಉದ್ಯೋಗ ಕೈಗೊಳ್ಳಲು ಉತ್ತೇಜನ, ಮಾರ್ಗದರ್ಶನ, ಸಾಲಸೌಲಭ್ಯ, ಮುಂತಾದವನ್ನು ನೀಡುತ್ತಿದೆ.

೧೯೧೪ರಲ್ಲಿ ಕಾರ್ಯಾರಂಭ ಮಾಡಿದ ಬ್ಯಾಂಕು ತನ್ನ ಬಹುತೇಕ ವ್ಯವಹಾರಗಳನ್ನು ಸದಸ್ಯ ಸಹಕಾರ ಸಂಘಗಳ ಮೂಲಕವೇ ಮಾಡುತ್ತಾ ಬಂದು, ವ್ಯವಹಾರಗಳು ಅಭಿವೃದ್ಧಿಗೊಂಡಂತೆ ತನ್ನದೇ ಆದ ಶಾಖೆಗಳನ್ನು ಜಿಲ್ಲೆಯಾದ್ಯಂತ ತೆರೆಯಲು ಮುಂದಾಯಿತು. ಅದರಂತೆ ಪ್ರಥಮ ಶಾಖೆಯನ್ನು ೧೯೬೪ರಲ್ಲಿ ಪುತ್ತೂರಿನಲ್ಲಿ ತೆರೆಯಿತು. ನಂತರ ಅದೇ ವರ್ಷದಲ್ಲಿ ಕುಂದಾಪುರ ಶಾಖೆ, ೧೯೬೮ರಲ್ಲಿ ಬಂಟ್ವಾಳ ಮತ್ತು ಉಡುಪಿ ಶಾಖೆಗಳು, ೧೯೬೯ರಲ್ಲಿ ಕಾರ್ಕಳ, ಬೆಳ್ತಂಗಡಿ, ಮಂಗಳೂರು (ಮಿಶನ್ ರಸ್ತೆ) ಮತ್ತು ಸುಳ್ಯ ಶಾಖೆಗಳು ಸ್ಥಾಪಿತವಾದವು. ಮುಂದೆ ಹಂತಹಂತವಾಗಿ ಜಿಲ್ಲೆಯಾದ್ಯಂತ ಮತ್ತಷ್ಟು ಶಾಖೆಗಳು ಸ್ಥಾಪನೆಗೊಂಡು ೨೦೦೫ರ ಮಾರ್ಚ್ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿನ ಒಟ್ಟು ಶಾಖೆಗಳ ಸಂಖ್ಯೆ ೪೯ ಆಗಿದ್ದಿತು.

ಬ್ಯಾಂಕು ೧೯೯೯-೨೦೦೦ದಿಂದ ಜಾರಿಗೊಳಿಸಿದ ಮಂಗಳಾ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯನ್ವಯ ಮಾತ್ರ ಇತ್ತೀಚಿನ ವರ್ಷಗಳಲ್ಲಿ ರೈತರಿಗೆ ಸಾಲವನ್ನು ಒದಗಿಸುತ್ತಿದೆ. ಅದರಂತೆ ಸಾಲ ಪಡೆಯುವ ರೈತರನ್ನು ವೈಯಕ್ತಿಕ ಅಪಘಾತ ವಿಮಾ ಯೋಜನೆಯ ವ್ಯಾಪ್ತಿಗೂ ಒಳಪಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ಈ ಯೋಜನೆ ಪ್ರಾರಂಭವಾದಂದಿನಿಂದ ೨೦೦೫ರವರೆಗೆ ಒಟ್ಟು ೪೦೪೩೨ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ಸದಸ್ಯ ಸಹಕಾರ ಸಂಘಗಳ ಮೂಲಕ ರೈತರಿಗೆ ಹಂಚಲಾಗಿದೆ. ಈ ಕಾರ್ಡುಗಳು ರೂ.೧೬,೧೨೨.೪೦ ಲಕ್ಷದಷ್ಟು ಸಾಲದ ಮಿತಿಯನ್ನು ಹೊಂದಿರುತ್ತದೆ. ಗ್ರಾಮೀಣ ಬಡಜನರ ಆರ್ಥಿಕಾಭಿವೃದ್ಧಿಯಲ್ಲಿ ಪರಿಣಾಮಕಾರಿ ಪಾತ್ರವಹಿಸುತ್ತಿರುವ 'ಸ್ವಸಹಾಯ ಗುಂಪು'ಗಳಿಗೂ ಜಿಲ್ಲಾ ಬ್ಯಾಂಕು ಸಾಲಸೌಲಭ್ಯಗಳನ್ನು ಒದಗಿಸುತ್ತಿದೆ. 'ನಬಾರ್ಡ್' ನಿರ್ದೇಶನದಂತೆ ಈ 'ಸ್ವಸಹಾಯ ಗುಂಪು' ಯೋಜನೆಯನ್ನು ಜಿಲ್ಲೆಯಲ್ಲಿ ೧೯೯೯-೨೦೦೦ದಲ್ಲಿ ಕಾರ್ಯಗತಗೊಳಿಸಲಾಯಿತು.

ಈ ಯೋಜನೆಯು ಪ್ರಾರಂಭವಾದಂದಿನಿಂದ (೯೯-೨೦೦೦) ಮಾರ್ಚ್ ೨೦೦೫ರವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಹಕಾರಿ ರಂಗದಲ್ಲಿ ಒಟ್ಟು ೨೧೫೬೨ ಸ್ವಸಹಾಯ ಗುಂಪುಗಳ ರಚನೆಯಾಗಿದ್ದು, ಅವುಗಳಿಂದ ೧೫೩೭.೮೨ ಲಕ್ಷ ರೂ. ಠೇವಣಿ ಸಂಗ್ರಹಿಸಿ, ೩೦೦೯.೮೭ ಲಕ್ಷ ರೂ. ಸಾಲವನ್ನು ನೀಡಲಾಗಿದೆ. (ನಬಾರ್ಡ್‌ನಿಂದ ದೊರೆತ ಪುನರ್ಧನದ ಮೊತ್ತ ೧೬೨೧.೦೧ ಲಕ್ಷ ರೂ.ಗಳಾಗಿತ್ತು.) ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಕಳೆದ ೨೫ ವರ್ಷಗಳ ಅವಧಿಯ ಕೆಲವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೪** (ಲಕ್ಷ ರೂ.ಗಳಲ್ಲಿ)

| | ವಿವರ | ವರ್ಷ | | | | | |
|---|---|---|---|---|---|---|---|
| | | ೧೯೮೦–೮೧ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
| ೧ | ಒಟ್ಟು ಶಾಖೆಗಳು (ಸಂಖ್ಯೆ) | ೨೨ | ೨೩ | ೨೫ | ೪೪ | ೪೫ | ೪೯ |
| ೨ | ಸದಸ್ಯತ್ವ: | | | | | | |
| ಅ | ಸರ್ಕಾರ | ೧ | – | ೧ | – | – | – |
| ಆ | ಸಹಕಾರ ಸಂಘಗಳು | ೩೮೪ | ೬೬೪ | ೭೬೬ | ೭೮೫ | ೭೭೭ | ೮೩೮ |
| ಇ | ಅಸೋಸಿಯೇಟ್ಸ್ | – | – | – | – | ೪೧ | ೯೦ |
| ಈ | ನಾಮಿನಲ್ | ೩೬೦೪ | ೧೪೯೩೮ | ೩೩೨೯೪ | – | – | – |
| ೩ | ಪಾಲು ಬಂಡವಾಳ: | | | | | | |
| ಅ | ಸರ್ಕಾರ | ೩೬.೬೦ | ೩೨.೬೦ | – | – | – | – |
| ಆ | ಸಹಕಾರ ಸಂಘಗಳು | ೧೦೧.೯೨ | ೨೮೯.೫೧ | ೪೬೯.೨೮ | ೭೩೦.೩೧ | ೭೫೬.೫೬ | ೭೪೮.೮೦ |
| ಇ | ಅಸೋಸಿಯೇಟ್ಸ್ | – | – | – | – | ೨.೯೫ | ೭.೦೫ |
| ಈ | ನಾಮಿನಲ್ | ೦.೦೪ | ೦.೭೫ | ೧.೬೬ | – | – | – |
| | ಒಟ್ಟು | ೧೩೮.೫೬ | ೩೨೨.೮೬ | ೪೭೦.೯೪ | ೭೩೦.೩೧ | ೭೫೯.೫೧ | ೭೫೫.೮೫ |
| ೪ | ಕಾಯ್ದಿಟ್ಟ ನಿಧಿಗಳು | ೯೧.೪೧ | ೧೧೮.೯೮ | ೧೯೩.೮೯ | ೪೬೪.೫೪ | ೯೦೩.೧೫ | ೧೧೮೮.೨೦ |
| ೫ | ಠೇವಣಿಗಳು | ೧೦೦೮.೫೪ | ೩೭೮೫.೬೨ | ೯೨೬೨.೯೯ | ೨೮೯೨೮.೮೨ | ೩೭೩೯೭.೫೮ | ೩೮೩೩೬.೬೧ |
| ೬ | ತಂದ ಸಾಲಗಳು | ೧೫೨.೬೬ | ೧೦೭೫.೭೪ | ೧೦೭೧.೬೭ | ೨೦೩೫.೮೩ | ೪೩೨೨.೪೬ | ೫೫೪೯.೩೮ |
| ೭ | ದುಡಿಯುವ ಬಂಡವಾಳ | ೧೩೯೧.೧೭ | ೫೩೦೩.೩೦ | ೧೧೮೬೯.೧೯ | ೩೪೪೫೦.೩೦ | ೪೪೩೪೮.೯೨ | ೪೭೪೭೧.೦೭ |
| ೮ | ಸಂಚಯನಗಳು | ೩೦೭.೩೭ | ೧೩೦೫.೨೫ | ೨೮೮೪.೭೦ | ೯೪೧೨.೧೪ | ೧೩೩೬೫.೭೩ | ೧೪೪೨೮.೧೮ |
| ೯ | ಬರಬೇಕಾದ ಸಾಲ | ೧೦೦೨.೮೫ | ೩೭೦೪.೯೨ | ೭೮೮೪.೨೭ | ೨೧೭೪೪.೧೧ | ೨೭೧೧೦.೩೦ | ೨೮೭೩೬.೨೦ |
| ೧೦ | ಅವಧಿ ಮೀರಿದ ಸಾಲ | ೧೯೫.೯೫ | ೭೬೮.೪೦ | ೧೨೩.೨೭ | ೫೩೪.೪೧ | ೧೫೬೭.೫೦ | ೨೮೧೩.೮೨ |
| ೧೧ | ಸಾಲ ವಸೂಲಾತಿಪ್ರಮಾಣ : | | | | | | |
| ಅ | ಕೃಷಿ ಸಾಲ (ಜೂನ್)(ಶೇ) | ೭೩.೨೫ | ೭೪.೮೧ | ೧೦೦.೦೦ | ೧೦೦.೦೦ | ೧೦೦.೦೦ | ೯೯.೪೨ |
| ಆ | ಎಲ್ಲಾ ವಿಧದ ಸಾಲ(ಜೂನ್) (ಶೇ) | ೭೩.೩೦ | ೭೪.೮೦ | ೯೮.೩೩ | ೯೪.೩೨ | ೯೧.೧೪ | ೮೫.೭೭ |
| ೧೨ | ಲಾಭ | ೦.೧೪ | ೨೫.೯೧ | ೪೫.೭೭ | ೨೫೮.೩೮ | ೪೦೪.೪೮ | ೪೦೫.೧೬ |
| ೧೩ | ಡಿವಿಡೆಂಡ್ (ಶೇ) | – | – | ೬.೦೦ | ೧೧.೦೦ | ೧೦.೦೦ | ೧೦.೦೦\ |
| ೧೪ | ಸಿಬ್ಬಂದಿ ಸಂಖ್ಯೆ | ೨೨೭ | ೨೩೨ | ೨೮೨ | ೪೨೭ | ೪೧೩ | ೪೧೯ |

**ಆಧಾರ**: ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಮಂಗಳೂರು

## ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು

ಲೇವಾದೇವಿಗಾರರು ೧೯೩೬–೩೭ರ ಸಮಯದಲ್ಲಿ ನ್ಯಾಯಾಲಯದ ಡಿಕ್ರಿಯ ಮೂಲಕ ಸಣ್ಣ, ಅತಿ ಸಣ್ಣ ರೈತ ಸಾಲಗಾರರ ಭೂಮಿಯ ಸ್ವಾಧೀನತೆಯನ್ನು ಪಡೆಯಲು ಮುಂದಾದನ್ನು ಕಂಡು ಅಂತಹ ರೈತರಿಗೆ ನೆರವಾಗುವ ಉದ್ದೇಶದಿಂದ ಜಿಲ್ಲೆಯ ಸಹಕಾರಿ ಧುರೀಣರಾದ ದಿ. ಮೋಳಹಳ್ಳಿ ಶಿವರಾಯರು ಕೂಡಲೇ 'ಭೂಮಿ ಅಡಮಾನ ಬ್ಯಾಂಕು'ಗಳ ಸ್ಥಾಪನೆಗೆ ಮುಂದಾದರು. ಅದರಂತೆ ಪುತ್ತೂರು ಡಿವಿಜನ್ ಸಹಕಾರಿ ಭೂಮಿ ಅಡಮಾನ ಬ್ಯಾಂಕನ್ನು ೧೯೩೮ರ ಮೇ ಒಂದರಂದು ಸ್ಥಾಪಿಸಲಾಯಿತು. ಬ್ಯಾಂಕಿನ ಆಗಿನ ಕಾರ್ಯವ್ಯಾಪ್ತಿ ಕಾಸರಗೋಡು, ಬೆಳ್ತಂಗಡಿ, ಬಂಟ್ವಾಳ, ಸುಳ್ಯ ಮತ್ತು ಪುತ್ತೂರು ತಾಲೂಕುಗಳನ್ನೊಳಗೊಂಡ ೨೯೮ ಗ್ರಾಮಗಳಾಗಿದ್ದವು. ನಂತರ ೧೯೩೮ರ ಜೂನ್ ೨೬ಕ್ಕೆ ಮಂಗಳೂರು ಡಿವಿಜನ್ ಸಹಕಾರಿ ಭೂಮಿ ಅಡಮಾನ ಬ್ಯಾಂಕು ಮತ್ತು ಅದೇ ವರ್ಷದಲ್ಲಿ ಉಡುಪಿ

ಡಿವಿಜನ್ ಸಹಕಾರಿ ಭೂಮಿ ಅಡಮಾನ ಬ್ಯಾಂಕುಗಳು ಸ್ಥಾಪನೆಯಾದವು. ಈ ಬ್ಯಾಂಕುಗಳು ರೈತರಿಗೆ ಕೇವಲ ಹಳೆಯ ಸಾಲದ (ಸಾಹುಕಾರಿ ಸಾಲ) ತೀರುವಳಿಯ ಉದ್ದೇಶಕ್ಕಾಗಿಯೇ ಸಾಲವನ್ನು ಒದಗಿಸುತ್ತಿದ್ದುವು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯದ ಪುನರ್‌ರಚನೆಯಿಂದಾಗಿ ದಕ್ಷಿಣ ಕನ್ನಡ (ಕಾಸರಗೋಡು ತಾಲೂಕನ್ನು ಬಿಟ್ಟು) ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾಯಿತು. ನಂತರದಲ್ಲಿ ಆಡಳಿತದ ಅನುಕೂಲಕ್ಕಾಗಿ ಬೆಳ್ತಂಗಡಿ, ಬಂಟ್ವಾಳ, ಕುಂದಾಪುರ, ಕಾರ್ಕಳ ಮತ್ತು ಸುಳ್ಯ ತಾಲೂಕುಗಳಿಗೆ ಪ್ರತ್ಯೇಕ ಪ್ರಾಥಮಿಕ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು. ಈ ಬ್ಯಾಂಕುಗಳ ಹೆಸರನ್ನು ೧೯೬೫ರಲ್ಲಿ ಪ್ರಾಥಮಿಕ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕುಗಳೆಂದೂ ಮತ್ತೆ ೧೯೮೫ರಲ್ಲಿ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳೆಂದು ಬದಲಾಯಿಸಲಾಯಿತು. ಈ ಬ್ಯಾಂಕುಗಳು ೧೯೬೫ರವರೆಗೆ ರೈತರಿಗೆ ಹಳೆಯ ಸಾಲ ತೀರುವಳಿಗಾಗಿ ಮಾತ್ರ ಸಾಲವನ್ನು ನೀಡುತ್ತಿದ್ದು, ನಂತರದ ವರ್ಷಗಳಲ್ಲಿ ಬದಲಾದ ಪರಿಸ್ಥಿತಿಗನುಗುಣವಾಗಿ ಸಾಲ ಮಂಜೂರಾತಿಯ ಧೋರಣೆಯನ್ನು ಬದಲಾಯಿಸಿಕೊಂಡು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚುಹೆಚ್ಚಾಗಿ ಸಾಲ ಮಂಜೂರಾತಿ ಮಾಡುತ್ತಿವೆ. ಇವು ಪ್ರಮುಖವಾಗಿ ದೀರ್ಘಾವಧಿ ಕೃಷಿ ಸಾಲದ ವಿತರಣೆ ಕೈಗೊಳ್ಳುತ್ತಿದ್ದರೂ, ೧೯೮೭ರಿಂದ ಕೃಷಿಯೇತರ ಚಟುವಟಿಕೆಗಳಾದ ಗ್ರಾಮೀಣ ಸಣ್ಣ ಕೈಗಾರಿಕೆಗಳು ೧೯೮೯ರಿಂದ ಗ್ರಾಮೀಣ ಗೃಹ ನಿರ್ಮಾಣ ಮುಂತಾದ ಉದ್ದೇಶಗಳಿಗೂ ಸಾಲ ಸೌಲಭ್ಯವನ್ನು ಒದಗಿಸುತ್ತಿವೆ. ವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಇತ್ತೀಚಿನ ದಶಕದ ಕೆಲವು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧೫** (ಮೊತ್ತ ಲಕ್ಷ ರೂ.ಗಳಲ್ಲಿ)

| | ಪ್ರಮುಖ ವಿವರಗಳು | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
|---|---|---|---|---|---|
| ೧ | ಬ್ಯಾಂಕುಗಳ ಸಂಖ್ಯೆ | ೫ | ೫ | ೫ | ೫ |
| ೨ | ಸದಸ್ಯತ್ವ (ಸಾವಿರಗಳಲ್ಲಿ) | ೪೧ | ೪೫ | ೪೮ | ೪೯ |
| ೩ | ಪಾಲು ಬಂಡವಾಳ: | | | | |
| | ಅ) ಒಟ್ಟು | ೨೩೪.೧೮ | ೨೯೯.೬೪ | ೩೫೧.೬೧ | ೧೬೬.೨೦ |
| | ಆ) ಸರ್ಕಾರದ ಪಾಲು | ೨೧.೬೧ | ೩೫.೫೪ | ೩೬.೦೪ | ೩೫.೫೪ |
| ೪ | ಕಾಯ್ದಿಟ್ಟ ಮತ್ತು ಇತರ ನಿಧಿಗಳು | ೧೨೬.೪೪ | ೧೫೬.೨೩ | ೨೧೯.೮೪ | ೨೯೪.೫೯ |
| ೫ | ಪಡೆದ ಎರವಲು | ೨೩೬೩.೩೭ | ೩೪೩೬.೭೩ | ೪೧೧೯.೨೬ | ೪೧೮೭.೮೭ |
| ೬ | ಚಾಲ್ತಿ ಬಂಡವಾಳ | ೩೮೫೧.೭೧ | ೪೯೫೬.೭೭ | ೬೧೭೪.೨೯ | ೬೨೮೮.೫೦ |
| ೭ | ಠೇವಣಿಗಳು | ೪೧೩.೦೯ | ೭೯೩.೦೫ | ೧೦೭೩.೦೦ | ೧೦೯೨.೨೯ |
| ೮ | ಸಾಲ: | | | | |
| | ಅ) ನೀಡಿಕೆ | ೮೧೨.೭೭ | ೯೦೨.೦೭ | ೧೧೩೭.೮೪ | ೯೯೬.೦೩ |
| | ಆ) ಬರಬೇಕಾದ | ೩೧೧೨.೭೨ | ೪೧೫೨.೧೨ | ೪೪೮೨.೪೧ | ೪೦೬೬.೩೬ |
| | ಇ) ಅವಧಿ ಮೀರಿದ | – | – | ೨೫೮೦.೦೦ | ೨೦೧೫.೬೯ |
| | ಈ) ವಸೂಲಾದ | ೯೫.೬೪ | ೮೬.೪೧ | ೨೮೭.೪೪ | ೪೪೫.೯೮ |
| ೯ | ಲಾಭ (+) ಅಥವಾ ನಷ್ಟ (–) (ಬ್ಯಾಂಕುಗಳು) | | | | |
| | (+) | – | ೨ | ೨ | ೪ |
| | (–) | – | ೩ | ೩ | ೧ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು / ಬ್ಯಾಂಕುಗಳು

ವ್ಯವಸಾಯದ ಅಭಿವೃದ್ಧಿಗೆ ಒದಗಿಸಲಾಗುವ ಸಹಕಾರಿ ಸಾಲವನ್ನು ಹೆಚ್ಚು ವ್ಯಾಪಕ ಮತ್ತು ಪರಿಣಾಮಕಾರಿಯನ್ನಾಗಿ ಮಾಡುವುದು ಈ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಜವಾಬ್ದಾರಿಯಾಗಿದೆ. ಗ್ರಾಮಮಟ್ಟದಲ್ಲಿ ವ್ಯವಸಾಯ ಸಾಲ ಪ್ರವಹಿಸುವುದು ಈ ಸಂಸ್ಥೆಗಳ ಮೂಲಕವೇ ಆಗಿರುತ್ತದೆ. ಇವು ಸದಸ್ಯ ರೈತರಿಗೆ ವ್ಯವಸಾಯದ ಅಭಿವೃದ್ಧಿಗಾಗಿ ಅಲ್ಪಾವಧಿ (ಬೆಳೆಸಾಲ) ಮತ್ತು ಮಧ್ಯಮಾವಧಿ ಕೃಷಿ ಸಾಲಗಳ ಜೊತೆಗೆ ಉತ್ತಮ ಬೀಜ, ರಸಗೊಬ್ಬರ, ಕ್ರಿಮಿನಾಶಕ ಮುಂತಾದವನ್ನು ಒದಗಿಸುತ್ತವೆ. ದಿನನಿತ್ಯದ ಗ್ರಾಹಕ

ಸಾಮಗ್ರಿಗಳ ಜೊತೆಗೆ ಪಡಿತರ ಸಾಮಗ್ರಿ, ಬಟ್ಟೆ ಮುಂತಾದವನ್ನು ಮಾರಾಟ ಮಾಡುತ್ತವೆ. ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ಲಭಿಸುವಲ್ಲಿ ನೆರವಾಗುತ್ತವೆ. ಗ್ರಾಮೀಣ ಕಸುಬುದಾರರಿಗೂ ಸಾಲ ಒದಗಿಸಿ ಅವರ ಆರ್ಥಿಕ ಪ್ರಗತಿಗೆ ಪ್ರಯತ್ನಿಸುತ್ತವೆ. ೧೯೯೫–೯೬ನೇ ಸಾಲಿನಿಂದ ವ್ಯಾಪಾರ ಅಭಿವೃದ್ಧಿ ಯೋಜನೆ ಕಾರ್ಯಕ್ರಮದಡಿ ಈ ಪತ್ತಿನ ಸಂಘಗಳನ್ನು ಬಲಪಡಿಸಿ, ಅವುಗಳನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಸರ್ಕಾರ ಇವುಗಳಿಗೆ ಬ್ಯಾಂಕಿಂಗ್ ಕೌಂಟರ್ ಅಳವಡಿಸಲು, ಕಬ್ಬಿಣದ ತಿಜೋರಿ ಇತ್ಯಾದಿಗಳನ್ನು ಖರೀದಿಸಲು ಆರ್ಥಿಕ ನೆರವನ್ನು ಒದಗಿಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳ (ಬ್ಯಾಂಕುಗಳ) ಇತ್ತೀಚಿನ ಕೆಲವು ವರ್ಷಗಳ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೬** (ಮೊತ್ತ ಲಕ್ಷ ರೂ.ಗಳಲ್ಲಿ)

| | ವಿವರ | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
|---|---|---|---|---|---|
| ೧ | ಒಟ್ಟು ಕೃಷಿಪತ್ತಿನ ಸಂಘಗಳು(ಬ್ಯಾಂಕುಗಳು) | ೧೦೪ | ೧೧೧ | ೧೧೧ | ೧೧೨ |
| ೨ | ಸದಸ್ಯತ್ವ : | | | | |
| ಅ | ಪರಿಶಿಷ್ಟ ಜಾತಿ | ೧೪ | ೧೬ | ೧೬ | ೧೫ |
| ಆ | ಪರಿಶಿಷ್ಟ ಪಂಗಡ | ೧೮ | ೨೨ | ೨೨ | ೨೨ |
| ಇ | ಇತರೆ | ೧೪೯ | ೧೪೪ | ೧೫೭ | ೧೮೧ |
| ಈ | ಒಟ್ಟು (ಸಾವಿರಗಳಲ್ಲಿ) | ೧೮೧ | ೧೮೩ | ೧೯೫ | ೨೧೮ |
| ೩ | ಒಟ್ಟು ಪಾಲು ಬಂಡವಾಳ | ೯೦೬೬ | ೨೧೯೧ | ೨೪೪೧ | ೨೭೧೬ |
| ಅ. | ಸರ್ಕಾರದ ಪಾಲು | ೧೧೬ | ೨೦೭ | ೧೬೯ | ೧೭೬ |
| ೪ | ವಿತರಿಸಿದ ಸಾಲ | ೧೦೮೩೨ | ೨೮೧೨೦ | ೩೦೨೩೮ | ೨೫೩೯೫ |
| ೫ | ವಸೂಲಾದ ಸಾಲ | ೮೬೧೮ | ೧೭೭೯೩ | ೨೬೩೩೮ | ೨೧೭೧೩ |
| ೬ | ಬಾಕಿ ಉಳಿದ ಸಾಲ | ೨೨೧೪ | ೫೩೨೭ | ೩೯೦೦ | ೩೬೮೨ |
| ೭ | ಗಡವು ಮೀರಿದ ಸಾಲ | ೨೯೮ | ೩೩೫೧ | ೨೧೧೨ | ೨೩೨೨ |
| ೮ | ಶೇಕಡಾ ವಸೂಲಾತಿ | ೭೯ | ೭೪ | ೬೭ | ೮೧ |
| ೯ | ಲಾಭ (+) ಅಥವಾ ನಷ್ಟ (–) | | | | |
| | (+) | – | ೩೪೫೬೭ | ೬೦೪೭೩ | ೫೩೫೩೪ |
| | (–) | – | ೨೬೫೬೬ | ೧೯೪೧೮ | ೩೨೪೯೫ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು

### ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು

ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರ ವ್ಯವಸಾಯ ಉತ್ಪನ್ನಗಳಿಗೆ ಉತ್ತಮ ಬೆಲೆ ಲಭಿಸುವಂತೆ ಮಾಡುವುದು ಮತ್ತು ರೈತರಿಗೆ ವ್ಯವಸಾಯ ಪೂರಕ ಸಾಮಗ್ರಿ ಒದಗಿಸುವ ಉದ್ದೇಶದಿಂದ ಈ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಲೂಕಿಗೊಂದರಂತೆ ಐದು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸದಸ್ಯರಿಗೆ ಬಿತ್ತನೆ ಬೀಜ, ಕ್ರಿಮಿನಾಶಕ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಒದಗಿಸುವುದೇ ಈ ಸಂಘಗಳ ಮುಖ್ಯ ಉದ್ದೇಶವಾಗಿದೆ. ಅಲ್ಲದೇ ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರಕುವಂತೆ ವ್ಯವಸ್ಥೆ ಮಡುವುದು, ರೈತರ ಕೃಷಿ

ಉತ್ಪನ್ನಗಳನ್ನು ಅಡವು ಇಟ್ಟುಕೊಂಡು, ಸಾಲ ಮತ್ತು ಮಾರಾಟ ಜೋಡಣೆ ಸೌಲಭ್ಯ ಒದಗಿಸಿ ಸಾಲ ನೀಡುವುದು, ರೈತರ ಕೃಷಿ ಉತ್ಪನ್ನಗಳಿಗೆ ರೂಪಾಂತರ ವ್ಯವಸ್ಥೆ ಒದಗಿಸುವುದು, ಸರ್ಕಾರದ ಏಜೆಂಟರಾಗಿ ಸರ್ಕಾರ ವಹಿಸುವ ಕೆಲಸಗಳನ್ನು ನಿರ್ವಹಿಸುವುದು, ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ದಿನಬಳಕೆ ವಸ್ತುಗಳು, ಜವಳಿ ಇತ್ಯಾದಿಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಒದಗಿಸುವುದು, ಮುಂತಾದ ಕೆಲಸಗಳನ್ನು ಈ ಮಾರಾಟ ಸಂಘಗಳು ನಿರ್ವಹಿಸುತ್ತವೆ. ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ವಿವಿಧ ಧ್ಯೇಯೋದ್ದೇಶಗಳನ್ನು ಸಾಧಿಸಲು ಮತ್ತು ಅವುಗಳನ್ನು ಬಲಪಡಿಸಿ ಸುಧಾರಿಸಲು, ರಾಜ್ಯ ಸರ್ಕಾರ ಎನ್.ಸಿ.ಡಿ.ಸಿ.ಯ ಸಹಯೋಗದೊಂದಿಗೆ ಇವುಗಳಿಗೆ ಅಗತ್ಯ ಹಣಕಾಸಿನ ನೆರವನ್ನು ನೀಡುತ್ತಿದೆ. ಮಾರಾಟ ಸಹಕಾರ ಸಂಘಗಳ ವ್ಯವಹಾರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವ ಉದ್ದೇಶದಿಂದ ಅವುಗಳಲ್ಲಿ ೧೯೯೫–೯೭ರಿಂದ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಆರಂಭಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಇತ್ತೀಚಿನ ಕೆಲವು ವರ್ಷಗಳ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೭**

| ಕ್ರ.ಸಂ | ವಿವರ | ವರ್ಷ | | | |
|---|---|---|---|---|---|
| | | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
| ೧ | ತಾಲೂಕು ಕೃಷಿ ಉತ್ಪನ್ನ ಮಾರಾಟ ಸಂಘಗಳ ಸಂಖ್ಯೆ | ೫ | ೫ | ೫ | ೫ |
| ೨ | ಸದಸ್ಯತ್ವ : | ೭೫೬೧ | ೧೦೭೬೨ | ೧೦೯೫೧ | ೧೧೧೦೪ |
| ೩ | ಪಾಲು ಬಂಡವಾಳ (ಸಾವಿರ ರೂ.) | ೬೯೯೫ | ೧೦೯೬೧ | ೧೧೬೦೫ | ೧೨೪೦೦ |
| | ಸರ್ಕಾರದ ಪಾಲು (ಸಾವಿರ ರೂ.) | – | – | ೪೨೦೦ | ೪೨೦೦ |
| ೪ | ದುಡಿಯುವ ಬಂಡವಾಳ (ಸಾವಿರ ರೂ.) | ೫೫೬೯೫ | ೭೦೩೨೫ | ೭೨೫೨೪ | ೭೮೬೪೭ |
| ೫ | ಕಾಯ್ದಿಟ್ಟ ಮತ್ತು ಇತರೆ ನಿಧಿಗಳು (ಸಾವಿರ ರೂ.) | ೭೬೬೨ | ೧೦೦೮೨ | ೧೧೧೦೮ | ೧೨೫೦೬ |
| ೬ | ಪಡೆದ ಸಾಲ (ಸಾವಿರ ರೂ.) | – | ೪೧೦೦ | ೩೮೦೦ | ೪೦೦೦ |
| ೭ | ವ್ಯವಸಾಯ ಸಾಮಗ್ರಿಗಳ ಮಾರಾಟ ಮೌಲ್ಯ : | | | | |
| ಅ | ಬೀಜಗಳು (ಸಾವಿರ ರೂ.) | ೭೦ | ೯೦ | ೯೫ | ೧೦೦ |
| ಆ | ಗೊಬ್ಬರ (ಸಾವಿರ ರೂ.) | ೮೨೨೫ | ೧೧೩೩೧ | ೧೨೬೮೧ | ೨೯೯೨೩ |
| ಇ | ಇತರೆ ವಸ್ತುಗಳು (ಸಾವಿರ ರೂ.) | ೫೧ | ೮೦ | ೯೦ | ೧೧೦ |
| ೮ | ಹೊಂದಿರುವ ಸ್ವಂತ ಉಗ್ರಾಣಗಳು (ಸಂಖ್ಯೆ) | ೩೦ | ೩೨ | ೩೨ | ೩೨ |
| ೯ | ಬಾಡಿಗೆಗೆ ಪಡೆದ ಉಗ್ರಾಣಗಳು (ಸಂಖ್ಯೆ) | ೪ | ೫ | ೬ | ೬ |
| ೧೦ | ಲಾಭಗಳಿಸಿದ ಸಂಘಗಳು (ಸಂಖ್ಯೆ) | ೧ | ೧ | ೨ | ೨ |
| | ಗಳಿಸಿದ ಲಾಭ (ಸಾವಿರ ರೂ.) | ೯೫ | ೯೦ | ೧೦೧ | ೩೧೮ |
| ೧೧ | ನಷ್ಟ ಅನುಭವಿಸಿದ ಸಂಘಗಳು (ಸಂಖ್ಯೆ) | ೪ | ೪ | ೩ | ೩ |
| | ನಷ್ಟ (ಸಾವಿರ ರೂ.) | ೨೧೨೫ | ೩೪೬೧ | ೩೫೧೮ | ೫೬೧೫ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು.

## ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು

ಈ ಸಹಕಾರ ಸಂಘಗಳ ಮೂಲ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆ ಉದ್ಯಮಕ್ಕೆ ಪೂರಕವಾದ ಮೂಲ ಭೂತ ಸೌಲಭ್ಯಗಳನ್ನು ಸದಸ್ಯರಿಗೆ ಒದಗಿಸುವಲ್ಲಿ ನೆರವಾಗುವುದಲ್ಲದೇ, ಸದಸ್ಯರು ಉತ್ಪಾದಿಸಿದ ಹಾಲನ್ನು ಶೇಖರಿಸಲು ಮತ್ತು ಮಾರಾಟ ಮಾಡಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ. ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ೧೯೮೬ರಲ್ಲಿ ಮಂಗಳೂರಿನಲ್ಲಿ ಸ್ಥಾಪನೆಯಾದ ನಂತರ, ಜಿಲ್ಲೆಯಲ್ಲಿ ಹೈನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವಂತಾಯಿತು. ಗ್ರಾಮಾಂತರ ಪ್ರದೇಶದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಹೆಚ್ಚು ಹೆಚ್ಚಾಗಿ ಸ್ಥಾಪಿತವಾದವು. ಜಿಲ್ಲೆಯಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಕ್ಷೀರಕ್ರಾಂತಿಯನ್ನು ವ್ಯಾಪಕಗೊಳಿಸುವಲ್ಲಿ

ಈ ಸಹಕಾರ ಸಂಘಗಳು ಮಹತ್ವದ ಪಾತ್ರವನ್ನು ವಹಿಸಿವೆ. ಕಳೆದ ಒಂದು ದಶಕದ ಅವಧಿಯ ಕೆಲವು ವರ್ಷಗಳಲ್ಲಿ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳು ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೮** (ಮೊತ್ತ ಸಾವಿರಗಳಲ್ಲಿ)

| | ವಿವರ | ವರ್ಷ | | | |
|---|---|---|---|---|---|
| | | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
| ೧ | ಒಟ್ಟು ಸಂಘಗಳು | ೧೩೬ | ೧೮೬ | ೨೦೩ | ೨೧೩ |
| ೨ | ಒಟ್ಟು ಸದಸ್ಯರು | ೨೧೨೧೪ | ೨೯೪೧೨ | ೩೧೧೬೮ | ೩೩೪೭೪ |
| ೩ | ಪಾಲು ಬಂಡವಾಳ | ೧೦೬೫ | ೨೦೧೬ | ೨೨೦೦ | ೨೯೦೩ |
| ೪ | ದುಡಿಯುವ ಬಂಡವಾಳ | ೨೮೩೬೨ | ೪೧೮೬೨ | ೪೫೩೫೦ | ೬೨೩೨೨ |
| ೫ | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | ೨೦೦೦ | ೫೦೦೦ | ೫೦೦೦ | ೨೨೫೦೧ |
| ೬ | ಖರೀದಿ | ೧೯೯೧೪೫ | ೨೧೧೮೪೪ | ೬೫೪೬೦೩ | ೭೬೯೦೨೪ |
| ೭ | ಮಾರಾಟ | ೨೦೦೫೬೪ | ೨೨೩೩೭೮ | ೮೧೦೬೪೨ | ೯೫೭೦೬೬ |
| ೮ | ಲಾಭ (+) ಅಥವಾ ನಷ್ಟ (–) | | | | |
| | (+) | ೬೫೧೩ | ೯೮೧೩ | ೯೭೦೦ | ೪೫೧೧ |
| | (–) | ೧೦ | ೧೫ | ೧೦ | ೧೮ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು

## ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು

ಖಾಸಗಿ ವಲಯದ ತೀವ್ರ ಪೈಪೋಟಿಯ ನಡುವೆಯೂ ಸೇವಾ ವಲದಯಲ್ಲಿ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು ಮಹತ್ವದ ಹಾಗೂ ಗಮನಾರ್ಹ ಸೇವೆಯನ್ನು ಸಾರ್ವಜನಿಕರಿಗೆ ಸಲ್ಲಿಸುತ್ತಿವೆ. ಗ್ರಾಹಕರಿಗೆ ದಿನಬಳಕೆ ವಸ್ತುಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ವಿತರಿಸುವ ಕಾರ್ಯದಲ್ಲಿ ನಿರತವಾಗಿವೆ. ಇವು ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ತಕ್ಕಮಟ್ಟಿಗೆ ತಡೆಗಟ್ಟುವಲ್ಲಿ ತಮ್ಮ ಪಾಲಿನ ಕಾರ್ಯವನ್ನು ನಿರ್ವಹಿಸುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಬಳಕೆದಾರರ ಸಹಕಾರ ಸಂಘಗಳ ಸ್ವಸಾಮರ್ಥ್ಯವನ್ನು ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರ ವ್ಯಾಪಾರ ಅಭಿವೃದ್ಧಿ ಯೋಜನೆ ಅನ್ವಯ ನೆರವು ಒದಗಿಸಿ ಅವುಗಳನ್ನು ಲಾಭದಾಯಕ ಘಟಕಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸಲಾಗುತ್ತಿದೆ. ಜಿಲ್ಲೆಯಲ್ಲಿನ ಬಳಕೆದಾರರ ಸಹಕಾರ ಸಂಘಗಳ ವಿವರವನ್ನು ಇತ್ತೀಚಿನ ಕೆಲವು ವರ್ಷಗಳಿಗೆ ಸಂಬಂಧಿಸಿದಂತೆ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧೯** (ಮೊತ್ತ ಸಾವಿರ ರೂ.ಗಳಲ್ಲಿ)

| | ವಿವರ | ವರ್ಷ | | | |
|---|---|---|---|---|---|
| | | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
| ೧ | ಸಂಘಗಳ ಸಂಖ್ಯೆ | ೩೫ | ೨೭ | ೨೩ | ೨೨ |
| ೨ | ಒಟ್ಟು ಸದಸ್ಯರು | ೩೬೫೧೩ | ೩೭೯೧೪ | ೨೧೨೫೪ | ೨೧೭೨೪ |
| ೩ | ಒಟ್ಟು ಪಾಲು ಬಂಡವಾಳ | ೪೦೦೫ | ೩೯೬೦ | ೪೧೦೨ | ೪೨೩೨ |
| | ಸರ್ಕಾರದ ಪಾಲು | ೧೧೨೦ | ೧೬೮೨ | ೧೯೧೭ | ೧೮೧೮ |
| ೪ | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | ೮೭೫ | ೧೦೦೦೫ | ೯೮೮೯ | ೧೦೦೧೦ |
| ೫ | ದುಡಿಯುವ ಬಂಡವಾಳ | ೪೨೨೩೬ | ೪೩೮೧೯ | ೩೦೭೫೪ | ೩೪೮೨೧ |
| ೬ | ಖರೀದಿ | ೧೧೫೬೭೬ | ೧೨೪೬೮೮ | ೧೭೦೭೬೫ | ೧೪೧೨೦೭ |
| ೭ | ಮಾರಾಟ | ೧೨೦೦೫೭ | ೧೩೨೧೫೭ | ೧೩೯೦೫೬ | ೧೫೦೦೨೦ |
| ೮ | ಲಾಭ (+) ಅಥವಾ ನಷ್ಟ (–) | | | | |
| | (+) | ೧೨೨೨ | ೧೪೨೨ | ೧೫೬೪ | ೧೬೭೧ |
| | (–) | ೧೨೫೩ | ೧೭೯೩ | ೧೭೭೭ | ೧೫೨೧ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು

## ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ನೌಕರರ ಪತ್ತಿನ ಸಂಘಗಳು

ಪಟ್ಟಣ ಸಹಕಾರಿ ಬ್ಯಾಂಕುಗಳ ಸ್ಥಾಪನೆ ಸಹಕಾರಿ ಚಳವಳಿಯ ಪ್ರಾರಂಭದೊಂದಿಗೆ ಸಾಗಿ ಬಂದಿದೆ. ಇವು ನಗರ ಮತ್ತು ವಾಣಿಜ್ಯ ಪ್ರದೇಶಗಳಲ್ಲೇ ಹೆಚ್ಚಾಗಿ ಕಂಡು ಬರುತ್ತವೆ. ಸಣ್ಣ–ಪುಟ್ಟ ವರ್ತಕರು ಮತ್ತು ಉದ್ಯಮಿಗಳು, ಕುಶಲಕರ್ಮಿಗಳು, ಮೊದಲಾದವರು ಈ ಬ್ಯಾಂಕುಗಳ ಸದಸ್ಯರು ಹಾಗೂ ಗ್ರಾಹಕರು. ಈ ಬ್ಯಾಂಕುಗಳು ಎಲ್ಲಾ ಬಗೆಯ ಠೇವಣಿಗಳನ್ನು ಸ್ವೀಕರಿಸುತ್ತವೆ. ವ್ಯಕ್ತಿ ಮತ್ತು ಆಸ್ತಿಯ ಆಧಾರದ ಮೇಲೆ ವಿವಿಧ ಬಗೆಯ ಸಾಲಗಳನ್ನು ನೀಡುತ್ತವೆ. ವಸ್ತು ಅಥವ ಆಭರಣಗಳ ಆಧಾರದ ಮೇಲೂ ಸಾಲವನ್ನೀಡುತ್ತವೆ. ಹಲವು ಬ್ಯಾಂಕುಗಳು ತಮ್ಮ ಬಂಡವಾಳದ ಆಧಾರದ ಮೇಲೆ ೧೯೪೯ರ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಗೆ ಒಳಪಟ್ಟಿವೆ. ನೌಕರರ ಸಹಕಾರಿ ಪತ್ತಿನ ಸಂಘಗಳೂ ತಮ್ಮ ತಮ್ಮ ಸದಸ್ಯರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತವೆ. ಸದಸ್ಯರಲ್ಲಿ ಉಳಿತಾಯದ ಭಾವನೆಯನ್ನು ಮೂಡಿಸುತ್ತವೆ. ಠೇವಣಿಗಳನ್ನು ಆಕರ್ಷಿಸುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪಟ್ಟಣ ಸಹಕಾರಿ ಬ್ಯಾಂಕುಗಳ ಮತ್ತು ನೌಕರರ ಪತ್ತಿನ ಸಹಕಾರಿ ಸಂಘಗಳು ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೦ : ಪಟ್ಟಣ ಸಹಕಾರಿ ಬ್ಯಾಂಕುಗಳು**

(ಮೊತ್ತ ಲಕ್ಷ ರೂ.ಗಳಲ್ಲಿ)

| | ವಿವರ | ವರ್ಷ | | | |
|---|---|---|---|---|---|
| | | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
| ೧ | ಬ್ಯಾಂಕುಗಳ ಸಂಖ್ಯೆ | ೮ | ೮ | ೮ | ೮ |
| ೨ | ಒಟ್ಟು ಸದಸ್ಯರು (ಸಾವಿರಗಳಲ್ಲಿ) | ೫೩ | ೭೧ | ೭೪ | ೭೮ |
| ೩ | ಕಾಯ್ದಿಟ್ಟ ಮತ್ತು ಇತರ ನಿಧಿಗಳು | ೧೦೨೬.೩೧ | ೧೫೦೦.೦೧ | ೧೫೫೮.೯೮ | ೧೬೬೧.೦೧ |
| ೪ | ಠೇವಣಿಗಳು | ೧೨೬೪೮.೩೯ | ೧೮೩೨೪.೬೪ | ೨೪೯೧೮.೪೦ | ೨೨೧೧೬.೭೧ |
| ೫ | ನೀಡಿದ ಸಾಲಗಳು | ೧೧೫೬೫.೨೩ | ೧೨೯೪೬.೩೧ | ೧೩೭೩೮.೮೫ | ೧೪೭೧೬.೨೧ |
| ೬ | ಷೇರು ಬಂಡವಾಳ | ೯೧೨.೯೨ | ೧೧೦೧.೯೧ | ೧೧೧೩.೩೧ | ೧೨೩೧.೧೪ |
| ೭ | ದುಡಿಯುವ ಬಂಡವಾಳ | ೨೦೧೦೪.೮೬ | ೨೮೧೦೧.೩೬ | ೨೪೨೫೩.೯೩ | – |
| ೮ | ಲಾಭದಲ್ಲಿನ ಬ್ಯಾಂಕುಗಳ ಸಂಖ್ಯೆ | ೮ | ೮ | ೭ | ೭ |
| ೯ | ನಷ್ಟದಲ್ಲಿನ ಬ್ಯಾಂಕುಗಳ ಸಂಖ್ಯೆ | – | – | ೧ | ೧ |

**ಕೋಷ್ಟಕ ೬.೨೧ : ನೌಕರರ ಪತ್ತಿನ ಸಹಕಾರ ಸಂಘಗಳು**

(ಮೊತ್ತ ಲಕ್ಷ ರೂ.ಗಳಲ್ಲಿ)

| | ವಿವರ | ವರ್ಷ | | | |
|---|---|---|---|---|---|
| | | ೧೯೯೫–೯೬ | ೨೦೦೦–೦೧ | ೨೦೦೨–೦೩ | ೨೦೦೩–೦೪ |
| ೧ | ಸಂಘಗಳ ಸಂಖ್ಯೆ | ೬೩ | ೬೮ | ೬೮ | ೬೮ |
| ೨ | ಒಟ್ಟು ಸದಸ್ಯರು (ಸಾವಿರಗಳಲ್ಲಿ) | ೪೯ | ೫೮ | ೫೯ | ೬೧ |
| ೩ | ಒಟ್ಟು ಪಾಲು ಬಂಡವಾಳ | ೫೧೨.೧೭ | ೭೧೩.೨೬ | ೭೬೪.೬೫ | ೮೧೨.೬೫ |
| ೪ | ದುಡಿಯುವ ಬಂಡವಾಳ | ೭೨೧೬.೦೪ | ೯೧೨೧.೦೬ | ೯೯೭೩.೦೮ | ೯೯೯೮.೦೭ |
| ೫ | ಕಾಯ್ದಿಟ್ಟ ಮತ್ತು ಇತರ ನಿಧಿಗಳು | ೩೫೧.೬೫ | ೪೦೦.೫೧ | ೪೨೭.೭೨ | ೪೬೩.೫೧ |
| ೬ | ಠೇವಣಿಗಳು | ೬೨೫೧.೮೧ | ೭೨೩೫.೬೧ | ೭೮೮೯.೩೧ | ೭೯೧೨.೩೨ |

**ಆಧಾರ** : ಜಿಲ್ಲಾ ಸಹಕಾರ ಇಲಾಖೆ, ಮಂಗಳೂರು

## ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್, ಮಂಗಳೂರು

ಸಹಕಾರಿ ಆಂದೋಲನದ ವ್ಯಾಪಕ ಮತ್ತು ಹಿತಕರ ಬೆಳವಣಿಗೆಯಲ್ಲಿ ಸಹಕಾರಿ ಯೂನಿಯನ್‌ಗಳು ಪ್ರಾರಂಭದಿಂದಲೂ ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ಮೂಲಭೂತ ಸಹಕಾರ ತತ್ವಗಳ ಪ್ರಚಾರ, ಸಂಘಗಳ ರಚನೆಗೆ ಮಾರ್ಗದರ್ಶನ, ಸದಸ್ಯರಿಗೆ ಮತ್ತು ಆಡಳಿತ ವರ್ಗದವರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ, ಸಹಕಾರಿ ಧೋರಣೆಯ ನಿರೂಪಣೆ, ಸದಸ್ಯರಿಗೆ ಸಹಕಾರಿ ಶಿಕ್ಷಣದ ಪ್ರಚಾರ ಮುಂತಾದವು ಈ ಸಂಸ್ಥೆಗಳ ಪ್ರಮುಖ ಉದ್ದೇಶಗಳು. ರಾಜ್ಯ ಪುನರ್ರಚನೆಯ ನಂತರ ರಾಜ್ಯ ಮಟ್ಟದಲ್ಲಿ ಪುನರ್ರಚನೆಗೊಂಡ ರಾಜ್ಯ ಸಹಕಾರಿ ಯೂನಿಯನ್ (ನಂತರ ಸಹಕಾರ ಮಹಾಮಂಡಳ), ಬೆಂಗಳೂರು, ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪರಿಣಾಮಕಾರಿ ಪಾತ್ರವಹಿಸುತ್ತಿದೆ. ಜಿಲ್ಲಾ ಸಹಕಾರಿ ಯೂನಿಯನ್‌ಗಳ ಒಕ್ಕೂಟವೇ ಸಹಕಾರಿ ಮಹಾಮಂಡಳವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಯವ್ಯಾಪ್ತಿಯನ್ನು ಹೊಂದಿದಂತೆ ೧೯೬೦ರಲ್ಲಿ ಸ್ಥಾಪಿತವಾದ "ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ, ಮಂಗಳೂರು" ಸಂಸ್ಥೆ ೧೯೩೯ರಲ್ಲಿ ಸ್ಥಾಪಿತವಾದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘ ನಿಯಮಿತ ಎಂಬ ಸಂಸ್ಥೆಯ ಉತ್ತರಾಧಿಕಾರಿ. ಸಹಕಾರ ಚಳವಳಿಯ ಪ್ರಗತಿಗೆ ಅಗತ್ಯವಾದ ಮಾರ್ಗದರ್ಶನ ನೀಡುವ ಉದ್ದೇಶದಿಂದ ಮೊದಲು ೧೯೩೯ರಲ್ಲಿ 'ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘ ನಿಯಮಿತ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿತ್ತು. ಜಿಲ್ಲಾ ಮಟ್ಟದ ಸಹಕಾರಿ ಸಂಘಗಳು ಮತ್ತು ತಾಲೂಕು ಯೂನಿಯನ್‌ಗಳು ಅದರ ಸದಸ್ಯತ್ವವನ್ನು ಹೊಂದಿದ್ದವು. ಈ ಸಂಸ್ಥೆ ಸಹಕಾರಿ ತತ್ವ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪಯುಕ್ತ ಮಾಹಿತಿಯುಳ್ಳ 'ಕನ್ನಡ ಸಹಕಾರಿ' ಮಾಸ ಪತ್ರಿಕೆಯನ್ನು ಪ್ರಕಟಿಸುವ ಕಾರ್ಯದಲ್ಲೂ ನಿರತವಾಗಿತ್ತು. ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್, (ನಿ). ಆಗಿ ಪರಿವರ್ತನೆಗೊಂಡ ನಂತರ, ಇದು ರಾಜ್ಯ ಸಹಕಾರ ಮಹಾಮಂಡಳದ ಮಾರ್ಗದರ್ಶನ ಮೇರೆಗೆ ಸಹಕಾರಿ ತತ್ವಗಳಾದ ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಕ್ಕೆ ತರುವ ಮೂಲಕ ಸಹಕಾರದ ಉದ್ದೇಶ ಹಾಗೂ ತತ್ವಗಳನ್ನು ಪ್ರಚಾರಮಾಡಿ ಸಹಕಾರ ಚಳವಳಿಯ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಅಲ್ಲದೇ ಜಿಲ್ಲೆಯಲ್ಲಿನ ಎಲ್ಲ ಬಗೆಯ ಸಹಕಾರ ಸಂಘಗಳನ್ನು ಬಲಪಡಿಸುವುದು, ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಮಾರ್ಗದರ್ಶನ ನೀಡುವುದು ಮುಂತಾದವು ಈ ಸಂಸ್ಥೆಯ ಉದ್ದೇಶಗಳಲ್ಲಿ ಸೇರಿವೆ. ಜಿಲ್ಲೆಯಲ್ಲಿನ ಎಲ್ಲಾ ಬಗೆಯ ಸಹಕಾರ ಸಂಘಗಳು ಈ ಯೂನಿಯನ್ನಿನ ಸದಸ್ಯತ್ವವನ್ನು ಪಡೆಯಬಹುದಾಗಿದೆ. ಹಿಂದಿನ 'ಕನ್ನಡ ಸಹಕಾರಿ' ಮಾಸ ಪತ್ರಿಕೆಯನ್ನು ಈ ಸಂಸ್ಥೆ 'ದಕ್ಷಿಣ ಕನ್ನಡ ಸಹಕಾರಿ' ಎಂದು ಹೆಸರಿನ ಬದಲಾವಣೆಯೊಂದಿಗೆ ಮುಂದುವರಿಸಿಕೊಂಡು ಬರುತ್ತಿದೆ. ಪ್ರತ್ಯೇಕ ಉಡುಪಿ ಜಿಲ್ಲೆಯ ರಚನೆಯಿಂದಾಗಿ ೧೯೯೮ ರಿಂದ ಇದರ ಕಾರ್ಯಕ್ಷೇತ್ರವು ಹೊಸ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಯಿತು.

## ಕೃಷಿ ಉತ್ಪನ್ನ ಮಾರುಕಟ್ಟೆಗಳು

ವ್ಯವಸಾಯದ ಅಭಿವೃದ್ಧಿಗೆ ಪೂರಕವಾದ ಹಲವಾರು ಅಂಶಗಳಲ್ಲಿ ಕೃಷಿ ಉತ್ಪನ್ನಗಳ ಸುವ್ಯವಸ್ಥಿತ ಮಾರಾಟ ವ್ಯವಸ್ಥೆ ಸಹ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಕೃಷಿ ಉತ್ಪನ್ನಗಳ ನಿಯಂತ್ರಿತ ಮಾರುಕಟ್ಟೆ ಯೋಜನೆಯು ಕಾರ್ಯರೂಪಕ್ಕೆ ಬರುವ ಪೂರ್ವದಲ್ಲಿ ಬಹುಪಾಲು ಕೃಷಿ ಉತ್ಪನ್ನಗಳ ಮಾರಾಟವು ಸ್ಥಳೀಯ ವಾರದ ಸಂತೆ ಅಥವಾ ಮಾರುಕಟ್ಟೆಗಳಲ್ಲಿ ನೇರವಾಗಿ ಅಥವಾ ಮಧ್ಯವರ್ತಿಗಳ ಮೂಲಕ ನಡೆಯುತ್ತಿತ್ತು. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಸಾಂಸ್ಥಿಕ ಸಾಲ ಸೌಲಭ್ಯದ ಅಭಾವ, ನಿಯಂತ್ರಿತ ಮಾರುಕಟ್ಟೆಗಳಿಲ್ಲದಿರುವಿಕೆ, ಅಳತೆ–ತೂಕಗಳಲ್ಲಿನ ಅಪ್ರಮಾಣಿಕತೆ, ಉಗ್ರಾಣಗಳ ಅಭಾವ, ಗುಣಮಟ್ಟವಿಲ್ಲದ ಹಾಗೂ ವರ್ಗೀಕರಿಸದ ಸರಕುಗಳು ಇವೇ ಮೊದಲಾದ ನ್ಯೂನತೆಗಳಿಂದ ವ್ಯವಸಾಯಗಾರರಿಗೆ ಶ್ರಮಕ್ಕೆ ಸಮನಾದ ಬೆಲೆ ಸಿಗದೆ ಅವರ ಆರ್ಥಿಕ ಪರಿಸ್ಥಿತಿಯು ತುಂಬಾ ಕಷ್ಟಕರವಾಗಿತ್ತು. ಈ ಶೋಚನೀಯ ಪರಿಸ್ಥಿತಿಯಿಂದ ವ್ಯವಸಾಯಗಾರರನ್ನು ರಕ್ಷಿಸುವ ಉದ್ದೇಶದಿಂದ ಅಂದಿನ ಕೇಂದ್ರ ಸರ್ಕಾರ ೧೯೨೭ರಲ್ಲಿ ಕೃಷಿಗೆ ಸಂಬಂಧಪಟ್ಟ ರಾಯಲ್ ಆಯೋಗವನ್ನು ನಿಯಮಿಸಿತು. ಆ ಆಯೋಗವು ವ್ಯವಸಾಯಗಾರರ ಪರಿಸ್ಥಿತಿಯನ್ನು ಸುಧಾರಿಸಲು ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಯ ಪ್ರಾಮುಖ್ಯತೆಯನ್ನು ಒತ್ತಿಹೇಳಿತು.

ಕೃಷಿಕರ ವ್ಯವಸಾಯೋತ್ಪನ್ನಗಳಿಗೆ ಉತ್ತಮ ಬೆಲೆ ಮತ್ತು ಮಾರಾಟದ ಅನುಕೂಲತೆಗಳನ್ನು ಒದಗಿಸಿಕೊಡುವ ಉದ್ದೇಶದಿಂದ ಹಿಂದಿನ

ಮದ್ರಾಸ್ ರಾಜ್ಯದಲ್ಲಿ ಮೊದಲ ಬಾರಿಗೆ ೧೯೩೩ರಲ್ಲಿ ಮದ್ರಾಸ್ ವಾಣಿಜ್ಯ ಬೆಳೆಗಳ ಕಾಯಿದೆಯನ್ನು ರೂಪಿಸಲಾಗಿತ್ತು. ಮದ್ರಾಸ್ ವಾಣಿಜ್ಯ ಬೆಳೆಗಳ ಕಾಯಿದೆ ೧೯೩೩ರ ಅನ್ವಯ ಆಗಿನ ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಯವ್ಯಾಪ್ತಿಯನ್ನು ಹೊಂದಿದಂತೆ ಕೃಷಿ ಮಾರುಕಟ್ಟೆ ಸಮಿತಿಯನ್ನು ೧೯೫೧ರಲ್ಲಿ ಮಂಗಳೂರಿನಲ್ಲಿ ರಚಿಸಲಾಯಿತು. ಈ ಮಾರುಕಟ್ಟೆ ಪ್ರದೇಶದಲ್ಲಿ ಕೃಷಿ ಉತ್ಪನ್ನಗಳ ಕೊಳ್ಳುವಿಕೆ ಮತ್ತು ಮಾರುವಿಕೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲಾಗುತ್ತಿತ್ತು.

## ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ ೧೯೬೬

ಕೃಷಿ ಉತ್ಪನ್ನಗಳ ಮಾರಾಟಕ್ಕೆ ಇನ್ನೂ ಹೆಚ್ಚಿನ ಸೌಲಭ್ಯ ಮತ್ತು ರಾಜ್ಯಾದ್ಯಂತ ನಿಯಂತ್ರಣ ವ್ಯವಸ್ಥೆಯಲ್ಲಿ ಏಕರೂಪತೆಯನ್ನು ತರುವ ಉದ್ದೇಶದಿಂದ ರಾಜ್ಯ ಪುನರ್‌ಘಟನೆಯ ನಂತರ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಸಮಗ್ರ ಏಕೀಕೃತ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆಯನ್ನು ೧೯೬೬ರಲ್ಲಿ ರಚಿಸಲಾಯಿತು. ಈ ಕಾಯಿದೆಯನ್ನು ಜಾರಿಗೆ ತರಲು ಅನುಕೂಲವಾಗುವಂತೆ ೧೯೬೮ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಗಳನ್ನು ರೂಪಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಆಡಳಿತವನ್ನು ನೋಡಿಕೊಳ್ಳಲು ೧೯೬೭ರ ಫೆಬ್ರುವರಿ ಒಂದರಂದು ಮೊದಲು ಜಿಲ್ಲಾ ಮಾರುಕಟ್ಟೆ ಅಧಿಕಾರಿಯವರ ಕಚೇರಿಯನ್ನು ಸ್ಥಾಪಿಸಲಾಯಿತು (ಆಗ ಇದರ ಕಾರ್ಯ ವ್ಯಾಪ್ತಿ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಾಗಿದ್ದವು). ಅದನ್ನು ೧೯೮೭ರ ಮಾರ್ಚ್ ೧೨ರಲ್ಲಿ ಕೃಷಿ ಮಾರಾಟ ಸಹಾಯಕ ನಿರ್ದೇಶಕರ ಕಚೇರಿ ಎಂದು ಪುನರ್‌ನಾಮಕರಣ ಮಾಡಲಾಯಿತು ಹಾಗೂ ಅದರ ಕಾರ್ಯವ್ಯಾಪ್ತಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಯಿತು. ಈ ಇಲಾಖೆ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ ೧೯೬೬ ಮತ್ತು ನಿಯಮಾವಳಿಗಳು ೧೯೬೮, ಕೇಂದ್ರ ಸರ್ಕಾರದ ಆಗ್‌ಮಾರ್ಕ್ ಕಾಯಿದೆ (ಗ್ರೇಡಿಂಗ್ ಮತ್ತು ಮಾರ್ಕಿಂಗ್) ೧೯೩೭ ಹಾಗೂ ಕರ್ನಾಟಕ ಉಗ್ರಾಣ ಕಾಯಿದೆ ೧೯೬೧ ಮತ್ತು ನಿಯಮಗಳು ೧೯೬೯ (ಲೈಸನ್ಸ್ ಮಂಜೂರಾತಿ ಮಾತ್ರ) ಇವುಗಳನ್ನು ಜಿಲ್ಲೆಯಲ್ಲಿ ಕಾರ್ಯಾಚರಣೆಗೆ ತರುವಲ್ಲಿ ನಿರತವಾಗಿದೆ. ನಿಯಂತ್ರಿತ ಮಾರುಕಟ್ಟೆಯ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳಲು ರೈತರ ಹನ್ನೊಂದು (ಪರಿಶಿಷ್ಟ ವರ್ಗಕ್ಕೆ ಒಂದು, ಪರಿಶಿಷ್ಟ ಜಾತಿಗೆ ಒಂದು, ಮಹಿಳಾ ವರ್ಗಕ್ಕೆ ಒಂದು ಮತ್ತು ಹಿಂದುಳಿದ ವರ್ಗಕ್ಕೆ ಎರಡು ಸ್ಥಾನ ಮೀಸಲಿದ್ದಂತೆ), ಖರೀದಿದಾರರ ಒಂದು, ಸಹಕಾರಿ ಮಾರಾಟ ಸಂಘ ಒಂದು, ಸಹಕಾರಿ ಸಂಸ್ಕರಣ ಸಂಘ ಒಂದು, ಸರ್ಕಾರದ (ಮಾರಾಟ ಇಲಾಖೆಯ) ಒಂದು, ಒಟ್ಟು ೧೫ ಚುನಾಯಿತ ಸದಸ್ಯರು ಮತ್ತು ಸರ್ಕಾರದಿಂದ ನಾಮಕರಣಗೊಂಡ ಮೂರು ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ಪ್ರತಿ ಮಾರುಕಟ್ಟೆಯಲ್ಲಿಯೂ ರಚಿಸುವಂತೆ ಕಾಯಿದೆ ಅವಕಾಶ ಕಲ್ಪಿಸಿದೆ. ಚುನಾಯಿತ ಸಮಿತಿಯ ಅವಧಿಯು ಐದು ವರ್ಷವಾಗಿದ್ದು, ಸಮಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ರೈತರ ಪ್ರತಿನಿಧಿಗಳಾಗಿರುತ್ತಾರೆ. ಮಾರುಕಟ್ಟೆ ಸಮಿತಿ ತನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಮಾರಾಟ ವ್ಯವಸ್ಥೆಯನ್ನು ನಿಯಂತ್ರಿಸುವುದಲ್ಲದೇ, ಮಾರುಕಟ್ಟೆ ಪ್ರಾಂಗಣದಲ್ಲಿ ರಸ್ತೆ, ನೀರು, ದೀಪ, ಹರಾಜುಕಟ್ಟೆ, ಉಪಾಹಾರಗೃಹ, ವಿಶ್ರಾಂತಿಗೃಹ, ನೆರಳಿನ ವೃಕ್ಷ ಮುಂತಾದ ಸೌಕರ್ಯಗಳನ್ನು ಮತ್ತು ಕೃಷಿ ಉತ್ಪನ್ನಗಳ ವರ್ಗೀಕರಣ ಸೌಲಭ್ಯವನ್ನು (ಆಯ್ದ ಮಾರುಕಟ್ಟೆಗಳಲ್ಲಿ) ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಮಾರುಕಟ್ಟೆ ಸಮಿತಿಯ ಮುಖ್ಯ ಆದಾಯದ ಮೂಲಗಳು ಮಾರುಕಟ್ಟೆ ಶುಲ್ಕ ಮತ್ತು ಪರವಾನಗಿ ಶುಲ್ಕಗಳು. ಮಾರುಕಟ್ಟೆ ಸಮಿತಿಯ ಎಲ್ಲ ಕರ್ಚು ವೆಚ್ಚಗಳನ್ನು ಈ ಆದಾಯದಿಂದ ಭರಿಸಲಾಗುತ್ತದೆ. ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯವಹರಿಸುವ ಮಾರುಕಟ್ಟೆ ಕಾರ್ಯಕರ್ತರ ಮೇಲೆ ಪರವಾನಗಿ (ಲೇಸನ್ಸ್) ಶುಲ್ಕವನ್ನು ವಿಧಿಸಲಾಗುತ್ತದೆ. ಅಲ್ಲದೇ ಕೃಷಿ ಉತ್ಪನ್ನಗಳ ಖರೀದಿದಾರರಿಂದ ಉತ್ಪನ್ನಗಳ ಮೌಲ್ಯದ ಶೇಕಡ (ರೂ.)ಒಂದರಂತೆ ಹಾಗೂ ಜಾನುವಾರುಗಳಿಗೆ ತಲಾ ಎರಡು ರೂ. ಮತ್ತು ಕುರಿ–ಮೇಕೆಗೆ ತಲಾ ಒಂದಕ್ಕೆ ೨೫ ಪೈಸೆಯಂತೆ ಮಾರುಕಟ್ಟೆ ಶುಲ್ಕವನ್ನು ವಸೂಲು ಮಾಡಲಾಗುತ್ತದೆ.

## ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦೦೪–೦೫ರಲ್ಲಿದ್ದಂತೆ ಐದು ಮುಖ್ಯ ಮಾರುಕಟ್ಟೆಗಳು ಹಾಗೂ ಮೂರು ಉಪ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದ್ದುವು. ಅವುಗಳ ವಿವರವನ್ನು ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

| ಕ್ರ. ಸಂ | ಜಿಲ್ಲೆಯ ಮುಖ್ಯ ಮಾರುಕಟ್ಟೆಗಳು ಮತ್ತು ಉಪ-ಮಾರುಕಟ್ಟೆಗಳು | ಅವು ಇರುವ ಸ್ಥಳ | ಸ್ಥಾಪನಾ ವರ್ಷ | ಕಾರ್ಯ ವ್ಯಾಪ್ತಿ |
|---|---|---|---|---|
| ೧. | ಮಂಗಳೂರು ಮುಖ್ಯ ಮಾರುಕಟ್ಟೆ | ಮಂಗಳೂರು | ೧೯೫೧ | ಮಂಗಳೂರು ತಾಲೂಕು |
| | ಮಂಗಳೂರು ಉಪ ಮಾರುಕಟ್ಟೆ | ಮೂಡಬಿದ್ರೆ | ೧-೮-೧೯೯೭ | ಮೂಡಬಿದ್ರೆ ಪುರಸಭೆ |
| ೨. | ಪುತ್ತೂರು ಮುಖ್ಯ ಮಾರುಕಟ್ಟೆ | ಪುತ್ತೂರು | ೧೧-೧೧-೧೯೯೨ | ಪುತ್ತೂರು ತಾಲೂಕು |
| | ಪುತ್ತೂರು ಉಪ ಮಾರುಕಟ್ಟೆ | ಉಪ್ಪಿನಂಗಡಿ ಹಾಗೂ ನೆಕ್ಕಿಲಾಡಿ | ೨೩-೪-೧೯೯೬ | ಉಪ್ಪಿನಂಗಡಿ ಮತ್ತು ನೆಕ್ಕಿಲಾಡಿ |
| ೩. | ಸುಳ್ಯ ಮುಖ್ಯ ಮಾರುಕಟ್ಟೆ | ಸುಳ್ಯ | ೧೬-೧೧-೧೯೯೬ | ಸುಳ್ಯ ತಾಲೂಕು |
| ೪. | ಬೆಳ್ತಂಗಡಿ ಮುಖ್ಯ ಮಾರುಕಟ್ಟೆ | ಬೆಳ್ತಂಗಡಿ | ೧-೪-೧೯೯೯ | ಬೆಳ್ತಂಗಡಿ ತಾಲೂಕು |
| ೫. | ಬಂಟ್ವಾಳ ಮುಖ್ಯ ಮಾರುಕಟ್ಟೆ | ಬಂಟ್ವಾಳ | ೧೮-೧೨-೨೦೦೧ | ಬಂಟ್ವಾಳ ತಾಲೂಕು |
| | ಬಂಟ್ವಾಳ ಉಪ ಮಾರುಕಟ್ಟೆ | ವಿಟ್ಲ | ೧೮-೧೨-೨೦೦೧ | ವಿಟ್ಲ ವಿಧಾನಸಭಾ ಕ್ಷೇತ್ರ |

**ಆಧಾರ** : ಕೃಷಿ ಮಾರಾಟ ಇಲಾಖೆ, ಮಂಗಳೂರು.

## ನಿಯಂತ್ರಿತ ಸರಕುಗಳು

ಸಾಮಾನ್ಯವಾಗಿ ಮಾರುಕಟ್ಟೆ ಕ್ಷೇತ್ರದಲ್ಲಿ ಕೃಷಿ ಉತ್ಪನ್ನಗಳ ಸಮೀಕ್ಷೆ ನಡೆಸಿ, ಅವು ಆ ಕ್ಷೇತ್ರದಲ್ಲಿ ಬೆಳೆದಿದ್ದಲ್ಲಿ ಅಥವಾ ಸಂಗ್ರಹವಾದಲ್ಲಿ ಅಂತಹ ಉತ್ಪನ್ನಗಳು ನಿಯಂತ್ರಿಸಲ್ಪಡುತ್ತವೆ. ಅಲ್ಲದೇ ಕಾಲಕಾಲಕ್ಕೆ ಹೊಸ ಹುಟ್ಟುವಳಿಗಳನ್ನು ನಿಯಂತ್ರಣ ಕಾಯಿದೆಯ ವ್ಯಾಪ್ತಿಗೆ ತರಲಾಗುತ್ತದೆ. ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಉತ್ಪನ್ನಮಾರುಕಟ್ಟೆಗಳಲ್ಲಿ ಸರಕಾರದ ಅಧಿಸೂಚನೆ ದಿನಾಂಕ: ೨೯-೧೦-೨೦೦೧ರ ಅನ್ವಯ ಒಟ್ಟು ೧೧೩ ಕೃಷಿ ಉತ್ಪನ್ನಗಳನ್ನು ನಿಯಂತ್ರಣಕ್ಕೊಳಪಡಿಸಲಾಗಿದೆ.

ಅವುಗಳಲ್ಲಿ ಅಡಕೆ, ತೆಂಗು, ಕೊಬ್ಬರಿ, ಭತ್ತ, ಅಕ್ಕಿ, ಗೇರುಬೀಜ, ಕಾಳುಮೆಣಸು, ಶುಂಠಿ, ಒಣಮೆಣಸಿನಕಾಯಿ, ಬೆಲ್ಲ, ಬಾಳೆಹಣ್ಣು, ಬಾಳೆಕಾಯಿ, ಸಿಹಿಗೆಣಸು, ಮಾವಿನಹಣ್ಣು, ಜಾನುವಾರುಗಳು, ಮರಮುಟ್ಟು ಮುಂತಾದವು ಪ್ರಮುಖವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ನಿಯಂತ್ರಿತ ಮಾರುಕಟ್ಟೆಗಳ ಮೂಲಕ ಇತ್ತೀಚಿನ ದಶಕದ ಕೆಲವು ವರ್ಷಗಳಲ್ಲಿ ಮಾರಲ್ಪಟ್ಟ ಹುಟ್ಟುವಳಿಗಳ ಪ್ರಮಾಣ ಮತ್ತು ಮಾರಾಟ ಮೌಲ್ಯವನ್ನು ಕೋಷ್ಟಕ ೬.೨೨ರಲ್ಲಿ ತೋರಿಸಲಾಗಿದೆ.

## ಆದಾಯ ಮತ್ತು ವೆಚ್ಚ

ಪರವಾನಗಿ ಶುಲ್ಕ ಮತ್ತು ಮಾರುಕಟ್ಟೆ ಶುಲ್ಕಗಳು ಮಾರುಕಟ್ಟೆ ಸಮಿತಿಯ ಮುಖ್ಯ ಆದಾಯದ ಮೂಲಗಳಾಗಿವೆ. ಅದರಂತೆ ೧೯೯೦-೯೧ರಲ್ಲಿ ಮಂಗಳೂರು ಮಾರುಕಟ್ಟೆ ಸಮಿತಿಯ ಆದಾಯವು ೨೪೭೬೧ ಕ್ಷ ರೂ.ಗಳಾಗಿದ್ದಿತು ಮತ್ತು ವೆಚ್ಚವು ೭೪.೬೬ಲಕ್ಷ ರೂ.ಗಳಾಗಿತ್ತು. ೧೯೯೫-೯೬ರಲ್ಲಿ ಅದರ ಆದಾಯದ ಮೊತ್ತವು ೧೮೦.೪೧ಲಕ್ಷರೂ. ಹಾಗೂ ವೆಚ್ಚದ ಮೊತ್ತ ೭೧.೪೯ ಲಕ್ಷರೂ.ಗಳಾಗಿದ್ದಿತು. ಪುತ್ತೂರು ಮಾರುಕಟ್ಟೆ ಸಮಿತಿಯ ಆದಾಯವು ೧೯೯೫-೯೬ರಲ್ಲಿ ೬೫.೪೫ಲಕ್ಷರೂ.ಗಳಾಗಿದ್ದು, ವೆಚ್ಚವು ೪೪.೬೭ ಲಕ್ಷರೂ.ಗಳಾಗಿತ್ತು. ಕಳೆದ ಮೂರು ವರ್ಷಗಳಿಗೆ ಅನ್ವಯಿಸಿದಂತೆ ಜಿಲ್ಲೆಯ ಮಾರುಕಟ್ಟೆ ಸಮಿತಿಗಳ ಆದಾಯ ಮತ್ತು ವೆಚ್ಚವನ್ನು ಮುಂದಿನ ಕೋಷ್ಟಕ ೬.೨೩ ನೀಡಲಾಗಿದೆ.

**ಕೋಷ್ಟಕ ೬.೨೨**

| | ಹುಟ್ಟುವಳಿಯ ಹೆಸರು | ೧೯೯೦–೯೧ ಮಂಗಳೂರು ಆವಕ (ಕ್ವಿಂ) | ೧೯೯೦–೯೧ ಮಂಗಳೂರು ಮೌಲ್ಯ (ಲಕ್ಷ ರೂ.) | ೧೯೯೫–೯೬ ಮಂಗಳೂರು ಆವಕ (ಕ್ವಿಂ) | ೧೯೯೫–೯೬ ಮಂಗಳೂರು ಮೌಲ್ಯ (ಲಕ್ಷ ರೂ.) | ೧೯೯೫–೯೬ ಪುತ್ತೂರು ಆವಕ (ಕ್ವಿಂ) | ೧೯೯೫–೯೬ ಪುತ್ತೂರು ಮೌಲ್ಯ (ಲಕ್ಷ ರೂ.) |
|---|---|---|---|---|---|---|---|
| ೧ | ಅಡಕೆ | ೩೪೮೩೦೨ | ೧೨೩೧೮.೦೨ | ೨೨೨೦೧೨ | ೯೨೬೮.೫೧ | ೩೮೩೪೫ | ೧೬೬೧.೩೩ |
| ೨ | ಹಣ್ಣಡಕೆ (ಸಂ) | ೭೮೨೦೩೩೩ | ೨೦.೩೦ | ೨೧೭೨೨೮೫ | ೭.೮೮ | ೨೮೨೬೬೧೮ | ೧೦.೦೮ |
| ೩ | ಕೊಬ್ಬರಿ | ೨೭೩೭೭ | ೫೯೮.೫೨ | ೪೬೨೦೦ | ೧೧೮೯.೫೩ | ೧೧೭ | ೨.೫೪ |
| ೪ | ತೆಂಗಿನಕಾಯಿ (ಸಂ) | ೮೦೯೨೨೬೯ | ೨೧೦.೫೫ | ೩೯೫೦೭೪೩ | ೧೧೨.೨೩ | ೫೭೭೩೭ | ೧.೭೧ |
| ೫ | ಅಕ್ಕಿ | ೧೯೯೬೭೪ | ೮೭೯.೦೮ | ೨೫೬೩೮೩ | ೨೦೬೧.೦೬ | ೭೮೧೮ | ೫೨.೪೯ |
| ೬ | ಭತ್ತ | ೨೧೬೩೨೫ | ೫೩೬.೪೨ | ೧೨೫೧೬೧ | ೫೭೪.೧೭ | ೧೩೩ | ೦.೫೩ |
| ೭ | ಬೆಲ್ಲ | ೬೩೬೪೯ | ೩೭೩.೬೭ | ೪೨೪೪೯ | ೩೫೦.೩೬ | ೨೮೫ | ೧.೮೨ |
| ೮ | ಒಣಮೆಣಸಿನಕಾಯಿ | ೨೧೭೨೯ | ೧೫೯.೮೫ | ೧೭೩೧೭ | ೭೯೮.೬೦ | ೨೦೬ | ೬.೧೨ |
| ೯ | ಕಾಳುಮೆಣಸು | ೧೩೫೫ | ೩೭.೧೨ | ೧೭೬೭ | ೬೬.೬೦ | ೧೦೨ | ೪.೧೮ |
| ೧೦ | ಗೇರುಬೀಜ | ೧೫೧೬೨೮ | ೩೦೭೧.೮೫ | ೨೨೪೬೧ | ೬೨೭.೦೭ | ೬೧೮೬೨ | ೧೭೩೪.೩೬ |
| ೧೧ | ಗೇರುಬೀಜತಿರುಳು | – | – | ೨೮೭೩ | ೫೨೦.೩೬ | – | – |
| ೧೨ | ಗೆಣಸು | ೩೫೭೫ | ೫.೩೩ | ೨೪೫೦ | ೪.೫೯ | – | – |
| ೧೩ | ಶುಂಠಿ | ೭೯೭೮ | ೪೮.೭೪ | ೫೯೧ | ೬.೮೪ | ೨೮೦ | ೦.೯೦ |
| ೧೪ | ಬಾಳೆಕಾಯಿ (ಸಂ) | ೨೪೪೫೪೧೩೩ | ೩೭.೭೫ | ೧೬೩೬೮ (ಕ್ವಿಂ) | ೭೨.೦೫ | ೧೪೮೧೨೦ | ೨.೮೬ |
| ೧೫ | ಇತರ ಹಣ್ಣುಗಳು | ೬೯೦೦೦ | ೪೬ | ೪೫೦ | ೧.೦೮ | – | – |
| ೧೬ | ಮರುಮುಟ್ಟು (ಸಿ.ಎಫ್.ಟಿ) | – | – | ೪೭೫೨ | ೧೯.೦೧ | – | – |

| ಕ್ರಮ. ಸಂ. | ಹುಟ್ಟುವಳಿಯ ಹೆಸರು | ೨೦೦೦–೦೧ ಮಂಗಳೂರು ಆವಕ (ಕ್ವಿಂ) | ಮಂಗಳೂರು ಮೌಲ್ಯ (ಲಕ್ಷ ರೂ.) | ಪುತ್ತೂರು ಆವಕ (ಕ್ವಿಂ) | ಪುತ್ತೂರು ಮೌಲ್ಯ (ಲಕ್ಷ ರೂ.) | ಸುಳ್ಯ ಆವಕ (ಕ್ವಿಂ) | ಸುಳ್ಯ ಮೌಲ್ಯ (ಲಕ್ಷ ರೂ.) | ಬೆಳ್ತಂಗಡಿ ಆವಕ (ಕ್ವಿಂ) | ಬೆಳ್ತಂಗಡಿ ಮೌಲ್ಯ (ಲಕ್ಷ ರೂ.) |
|---|---|---|---|---|---|---|---|---|---|
| ೧ | ಅಡಕೆ | ೨೨೪೨೯೨ | ೧೪೫೮೮.೦೫ | ೮೧೬೧೪ | ೪೭೬೨.೫೯ | ೩೭೨೮೨ | ೨೪೦೩.೨೪ | ೧೭೪೮೨ | ೧೦೯೫.೬೪ |
| ೨ | ಹಣ್ಣಡಕೆ (ಸಂ) | ೪೨೨೪೬೪೦ | ೨.೯೬ | ೧೩೯೩೫೦೦ | ೪.೩೨ | ೪೭೭೩೪೦೦ | ೧೫.೭೮ | ೧೫೦೦ (ಕ್ವಿಂ) | ೧೨.೫೧ |
| ೩ | ಕೊಬ್ಬರಿ | ೮೯೪೫೯ | ೧೯೩೮.೯೨ | ೫೬೫೦ | ೧೧೬.೪೧ | ೧೦೨೬೧ | ೨೦೧.೮೩ | ೧೦೫ | ೨.೨೨ |
| ೪ | ತೆಂಗಿನಕಾಯಿ (ಸಂ) | ೨೫೬೬೬೨೨ | ೧೦೧.೪೩ | ೨೮೮೯೬೪ | ೭.೯೩ | ೪೭೬೩೮೨೦ | ೧೩೬.೬೯ | ೧೪೬೫೪೯೭ | ೪೭.೩೨ |
| ೫ | ಅಕ್ಕಿ | ೩೫೨೧೯೯ | ೩೮೭೦.೬೭ | ೭೦೩೪೩ | ೬೯೭.೩೬ | ೨೯೪೦೪ | ೨೮೫.೩೫ | ೬೧.೫೯ | ೬೦೬.೩೯ |
| ೬ | ಭತ್ತ | ೨೬೨೫೮ | ೧೭೧.೦೨ | ೫೧೯ | ೨.೫೪ | – | – | ೮೮೫೩೯ | ೫೯೦.೯೧ |
| ೭ | ಬೆಲ್ಲ | ೫೨೭೨೨ | ೫೫೬.೨೨ | ೧೨೭೫೫ | ೧೩೦.೮೪ | – | – | ೪೭೦ | ೪.೬೧ |
| ೮ | ಒಣಮೆಣಸಿನಕಾಯಿ | ೨೪೧೯೦ | ೧೦೭೮.೯೧ | ೧೪೦೫ | ೪೫.೧೯ | ೨೦೯ | ೪.೨೩ | ೧೦೨ | ೩.೯೧ |
| ೯ | ಕಾಳುಮೆಣಸು | ೧೫೮೯ | ೨೩೫.೫೬ | ೧೯೭ | ೨೩.೪೪ | ೫೨೭ | ೫೪.೬೩ | ೩ | ೦.೨೮ |
| ೧೦ | ಗೇರುಬೀಜ | ೩೧೫೭ | ೧೧೪.೬೫ | ೩೬೯೧೬ | ೧೩೬೭.೨೬ | ೪೦೯೮೮ | ೧೬೪೩.೧೬ | ೧೭೬೭ | ೫೯.೯೬ |
| ೧೧ | ಗೇರುಬೀಜತಿರುಳು | ೧೩೬೨ | ೩೫೭.೩೨ | ೦.೫೮ | ೦.೯೮ | ೧೬೩ | ೨೧.೪೪ | – | – |
| ೧೨ | ಗೆಣಸು | ೭೭೫ | ೨.೭೫ | – | – | – | – | – | – |
| ೧೩ | ಶುಂಠಿ | ೧೪೨೦ | ೧೪.೪೬ | ೧೨೩ | ೦.೬೮ | ೩೬೯೧ | ೧೯.೦೭ | ೮೮೦ | ೪.೪೦ |
| ೧೪ | ಬಾಳೆಕಾಯಿ (ಸಂ) | ೧೮೬೮೫ | ೯೬.೩೬ | ೧೩೭೦.೫೦೦ (ಸಂ) | ೨.೫೯ | ೪೭೬ | ೧.೩೩ | ೧೯೬೧ | ೮.೨೬ |
| ೧೫ | ಇತರ ಹಣ್ಣುಗಳು | ೨೪೮ | ೨.೨೧ | – | – | – | – | – | – |
| ೧೬ | ಮರಮುಟ್ಟು (ಸಿ.ಎಫ್.ಟಿ) | ೮೦೧೭ | ೪೪.೧೦ | ೨೧೭೨೮ | ೧೬೦.೩೯ | ೪೪೭ | ೩೨.೩೪ | ೩೦ | ೧.೯೦ |

| | ಪ್ರಮುಖ ಹುಟ್ಟುವಳಿಗಳು | ೨೦೦೨–೦೩ | | | | | | | | | |
|---|---|---|---|---|---|---|---|---|---|---|---|
| | | ಮಂಗಳೂರು | | ಪುತ್ತೂರು | | ಸುಳ್ಯ | | ಬೆಳ್ತಂಗಡಿ | | ಬಂಟ್ವಾಳ | |
| | | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) |
| ೧ | ಅಡಕೆ | ೨೧೪೪೯೯ | ೯೮೯೨.೨೪ | ೧೧೭೧೪೧ | ೪೫೨೯.೫೬ | ೬೪೭೬೧ | ೨೭೫೨.೬೫ | ೩೧೨೧೪ | ೧೦೪೫.೨೮ | ೩೬೮೮೯ | ೧೬೫೯.೩೯ |
| ೨ | ಹಣ್ಣಡಕೆ (ಸಂ) | – | – | ೩೮೬೩೦೦ | ೧.೧೩ | ೬೫೭೬೦೦೦ | ೧೫.೫೨ | ೧೭೯೪ | ೮.೬೨ | ೭೪೨೩೫೬ | ೨.೫೬ |
| ೩ | ಕೊಬ್ಬರಿ | ೫೬೫೫೪ | ೧೮೦೯.೭೫ | ೭೪೦೩ | ೨೧೪.೩೦ | ೨೪೧೨ | ೭೫.೩೭ | ೧೨೧ | ೪.೦೬ | ೧೦೧೩ | ೨೨.೭೭ |
| ೪ | ತೆಂಗಿನಕಾಯಿ (ಸಂ) | ೨೧೯೩೯೧೦ | ೧೦೯.೦೧ | ೫೫೪೬೧೫ | ೨೩.೬೬ | ೮೯೮೫೮೯೫ | ೩೯೫.೭೫ | ೨೩೦೬೯೧೦ | ೯೩.೬೦ | ೩೨೩೯೭೩ | ೧೩.೩೮ |
| ೫ | ಅಕ್ಕಿ | ೧೯೦೮೬೩ | ೧೯೦೧.೨೪ | ೧೧೮೫೨ | ೧೧೪.೫೭ | ೨೮೮೨೩ | ೨೫೩.೧೬ | ೩೨೭೯೮ | ೩೨೬.೦೯ | ೨೬೪೮೪ | ೨೩೪.೪೫ |
| ೬ | ಭತ್ತ | ೨೪೮೦ | ೧೪.೮೮ | ೧೪೫ | ೦.೮೪ | – | – | ೬೪೪೨೮ | ೩೭೮.೪೩ | ೧೫೮೯೭ | ೮೧.೪೨ |
| ೭ | ಬೆಲ್ಲ | ೨೨೧೪೬ | ೨೧೫.೨೮ | ೧೯೧ | ೨.೦೯ | – | – | ೨೭೫ | ೨.೭೫ | ೯೪೩ | ೭.೫೯ |
| ೮ | ಒಣಮೆಣಸಿನಕಾಯಿ | ೧೦೫೪೦ | ೪೦೦.೫೬ | ೧೭೭೬ | ೪೦.೪೦ | ೨೯೯ | ೭.೪೯ | ೫೨ | ೨.೩೭ | ೮೪೫ | ೧೪.೦೭ |
| ೯ | ಕಾಳುಮೆಣಸು | ೨೦೫೧ | ೧೫೩.೨೬ | ೧೩೩ | ೭.೪೬ | ೨೫೩೫ | ೧೩೬.೫೩ | ೩೦ | ೨.೪೦ | ೩೪ | ೨.೫೮ |
| ೧೦ | ಗೇರುಬೀಜ | ೬೫೬೧ | ೨೦೧.೫೨ | ೩೩೪೯೮ | ೯೫೫.೮೦ | ೫೭೦೬೮ | ೧೭೧೪.೨೮ | ೧೨೩೬ | ೩೫.೩೮ | ೩೨೫೯ | ೧೧೧.೪೬ |
| ೧೧ | ಗೆಣಸು | ೨೬೩ | ೦.೯೭ | – | – | – | – | – | – | – | – |
| ೧೨ | ಶುಂಟಿ | ೫೭೯ | ೭.೯೨ | – | – | ೨೨೩೦ | ೧೦.೮೦ | ೬೫೫ | ೩.೧೭ | – | – |
| ೧೩ | ಬಾಳೆಕಾಯಿ (ಸಂ) | ೧೪೪೧೦ | ೭೫.೮೦ | ೭೧೨೦೦೦ | ೧.೩೭ | ೧೩೨೦ | ೬.೫೩ | ೧೯೧೫ | ೮.೫೫ | ೧೫೫೨೦೦ (ಸಂ) | ೦.೯೦ |
| ೧೪ | ಇತರ ಹಣ್ಣುಗಳು | ೩೨೭೩ | ೪೩.೨೭ | ೫೬ | ೦.೧೫ | – | – | – | – | – | – |
| ೧೫ | ಮರಮುಟ್ಟು (ಸಿ.ಎಫ್‌ಟಿ) | ೭೨೬೪ | ೩೭.೭೮ | ೮೪೨೭ | ೨೬.೪೬ | ೨೦೮೪ | ೧೩೯.೭೯ | ೩೮೦ | ೨೪.೯೦ | – | ೧೧.೩೨ |
| ೧೬ | ತರಕಾರಿ | ೧೦೭೪೯೨ | ೪೪೬.೯೯ | ೨೦೬ | ೦.೮೭ | – | – | ೨೦ | ೦.೧೦ | ೩೧೩೬ | ೨.೫೦ |
| ೧೭ | ಎಣ್ಣೆಬೀಜಗಳು | ೭೧೮ | ೩.೪೪ | ೩೧ | ೦.೫೪ | – | – | – | – | ೪ | ೦.೦೮ |
| ೧೮ | ಕಾಡುತ್ಪತ್ತಿ | ೨೬೭೦ | ೯೦.೮೮ | ೬೧೧ | ೪.೨೪ | ೩೪೦ | ೧.೪೬ | – | – | ೯ | ೦.೧೨ |
| ೧೯ | ಸಾಂಬಾರು ಪದಾರ್ಥ | ೧೬೨೯೯ | ೫೨೪.೦೯ | ೩೮ | ೧.೪೨ | – | – | – | – | ೬೪ | ೧.೨೫ |
| ೨೦ | ದ್ವಿದಳಧಾನ್ಯ | ೧೦೪೬೫೩ | ೧೪೯೮.೧೮ | ೨೪೧ | ೬.೦೯ | – | – | – | – | ೭೯೪೮ | ೫೯.೦೦ |

| ಪ್ರಮುಖ ಹುಟ್ಟುವಳಿಗಳು | | ೨೦೦೩–೦೪ ಮಂಗಳೂರು | | ಪುತ್ತೂರು | | ಸುಳ್ಯ | | ಬೆಳ್ತಂಗಡಿ | | ಬಂಟ್ವಾಳ | |
|---|---|---|---|---|---|---|---|---|---|---|---|
| | | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) | ಆವಕ (ಕ್ವಿ) | ಮೌಲ್ಯ (ರೂ.) |
| ೧ | ಅಡಕೆ | ೧೭೫೫೧೬ | ೮೪೧೭.೯೮ | ೭೫೭೦೩ | ೩೭೯೭.೭೮ | ೫೭೧೫೮ | ೩೦೩೪.೪೧ | ೨೮೪೯೭ | ೧೦೯೦.೩೯ | ೩೯೬೭೦ | ೨೦೭೫.೫೦ |
| ೨ | ಹಣ್ಣಡಕೆ (ಸಂ) | – | – | ೧೫೦೦೦ | ೦.೦೫ | ೪೩೪೬೦೦೦ | ೧೨.೬೯ | ೧೫೬೦ | ೭.೩೬ | ೬೫೬೮೫೦ | ೨.೨೫ |
| ೩ | ಕೊಬ್ಬರಿ | ೪೧೬೪೦ | ೧೪೧೬.೭೨ | ೫೮೪೨ | ೧೮೩.೧೮ | ೩೩೧೧ | ೧೩.೨೯೧ | ೧೮೭ | ೭.೨೦ | ೧೩೧೧ | ೪೩.೩೮ |
| ೪ | ತೆಂಗಿನಕಾಯಿ (ಸಂ) | ೩೪೮೪೧೫೦ | ೧೭೪.೨೧ | ೬೬೮೦೫೩ | ೩೬.೬೮ | ೯೭೨೩೬೬೧ | ೫೩೩.೩೯ | ೧೯೧೭೦೨೦ | ೮೭.೦೮ | ೧೮೮೨೧೬೪ | ೯೮.೦೮ |
| ೫ | ಅಕ್ಕಿ | ೧೮೯೮೯೯ | ೧೯೩೧.೧೨ | ೧೦೮೯೨ | ೧೦೫.೩೦ | ೧೮೬೩೮ | ೧೬೭.೦೦ | ೨೪೫೧೮ | ೨೩೯.೪೫ | ೩೨೪೪೯ | ೩೦೮.೭೮ |
| ೬ | ಭತ್ತ | ೬೬೯೮ | ೪೩.೩೨ | ೧೩೧ | ೦.೮೧ | – | – | ೩೫೬೧೩ | ೨೧೩.೦೦ | ೧೬೩೭೦ | ೯೩.೭೦ |
| ೭ | ಬೆಲ್ಲ | ೧೫೮೮೮ | ೧೮೯.೨೮ | – | – | – | – | ೨೭೫ | ೨.೭೮ | ೧೮೨೧ | ೧೫.೧೫ |
| ೮ | ಒಣಮೆಣಸಿನಕಾಯಿ | ೧೨೪೩೦ | ೪೬೫.೨೯ | ೧೨೯೩ | ೩೪.೮೧ | ೨೬೬ | ೬.೭೮ | ೭೭ | ೪.೧೩ | ೬೯೦ | ೧೪.೫೧ |
| ೯ | ಕಾಳುಮೆಣಸು | ೬೬೨೪ | ೪೬೧.೪೫ | ೨೧೦ | ೭.೦೮ | ೬೫೬ | ೩೫.೬೯ | ೩೪ | ೨.೨೬ | ೨೦೯ | ೧೩.೦೧ |
| ೧೦ | ಗೇರುಬೀಜ | ೧೦೭೨೦ | ೩೩೮.೫೨ | ೪೫೬೬೪ | ೧೩೬೦.೩೪ | ೪೦೮೬೦ | ೧೩೨೪.೧೩ | ೧೭೦೦ | ೫೦.೯೮ | ೮೯೫೪ | ೨೭೮.೦೪ |
| ೧೧ | ಗೆಣಸು | ೨೦೭ | ೦.೮೩ | – | – | – | – | – | – | – | – |
| ೧೨ | ಶುಂಠಿ | ೫೩೪ | ೧೨.೯೪ | – | – | ೨೧೮೩ | ೧೬.೦೦ | – | – | – | – |
| ೧೩ | ಬಾಳೆಕಾಯಿ (ಕ್ವಿ) | ೧೬೭೦೯ | ೮೩.೫೫ | ೯೫೦೦ | ೦.೦೫ | ೨೫೧೫ | ೧೨.೧೦ | ೧೭೮೪ | ೮.೪೪ | ೩೯೦೦೫೦ | ೧.೮೮ |
| ೧೪ | ಇತರ ಹಣ್ಣುಗಳು | ೩೨೩ | ೨.೭೫ | – | – | – | – | – | – | – | – |
| ೧೫ | ಮರಮುಟ್ಟು (ಸಿ.ಎಫ್‌ಟಿ) | ೧೬೮೩೬ | ೮೪.೧೮ | ೫೨೫೩ | ೨೫.೧೮ | ೧೮೯೩ | ೧೩೦.೫೧ | ೩೭೭ | ೨೬.೦೪ | – | ೫೨.೪೪ |
| ೧೬ | ತರಕಾರಿ | – | – | ೨೭ | ೦.೧೭ | – | – | ೧೫೫ | ೦.೬೦ | ೧೯೬ | ೧.೧೭ |
| ೧೭ | ಎಣ್ಣೆಬೀಜಗಳು | – | – | ೧೮ | ೦.೪೨ | – | – | | | ೯ | ೦.೪೬ |
| ೧೮ | ಕಾಡುತ್ಪತ್ತಿ | – | – | ೫೪೪ | ೨.೯೮ | ೩೩೦ | ೧.೦೩ | | | ೧೬೦ | ೧.೨೮ |
| ೧೯ | ಸಾಂಬಾರು ಪದಾರ್ಥ | – | – | ೧೯ | ೦.೭೬ | – | – | | | ೧೭ | ೦.೩೬ |
| ೨೦ | ದ್ವಿದಳಧಾನ್ಯ | – | – | ೨೨೮ | ೭.೩೦ | – | – | | | ೪೨೮೭ | ೩೦.೮೨ |

**ಆಧಾರ** : ಜಿಲ್ಲಾ ಕೃಷಿ ಮಾರಾಟ ಇಲಾಖೆ, ಮಂಗಳೂರು.

**ಕೋಷ್ಟಕ ೬.೨೩**

(ಲಕ್ಷ ರೂ.ಗಳಲ್ಲಿ)

| ಜಿಲ್ಲೆಯ ಮಾರುಕಟ್ಟೆ ಸಮಿತಿಗಳು | ೨೦೦೦–೦೧ | | ೨೦೦೨–೦೩ | | ೨೦೦೩–೦೪ | |
|---|---|---|---|---|---|---|
| | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ |
| ಮಂಗಳೂರು | ೨೬೦.೩೪ | ೨೧೧.೬೫ | ೨೮೫.೯೮ | ೧೩೯.೯೭ | ೨೩೬.೪೯ | ೧೪೦.೬೬ |
| ಪುತ್ತೂರು | ೮೫.೪೬ | ೫೮.೫೫ | ೮೧.೨೯ | ೪೩.೨೭ | ೭೦.೦೧ | ೪೮.೮೧ |
| ಸುಳ್ಯ | ೫೨.೬೮ | ೪೫.೪೪ | ೫೫.೪೫ | ೨೩.೩೫ | ೬೦.೮೪ | ೩೦.೪೭ |
| ಬೆಳ್ತಂಗಡಿ | ೨೪.೯೬ | ೭.೮೬ | ೧೯.೭೦ | ೯.೫೨ | ೨೩.೧೯ | ೯.೯೯ |
| ಬಂಟ್ವಾಳ | – | – | ೨೧.೪೬ | ೧೧.೪೫ | ೩೩.೪೬ | ೧೩.೨೭ |

**ಆಧಾರ** : ಜಿಲ್ಲಾ ಕೃಷಿ ಮಾರಾಟ ಇಲಾಖೆ, ಮಂಗಳೂರು.

ಜಿಲ್ಲೆಯ ಮಾರುಕಟ್ಟೆ ಸಮಿತಿಗಳಲ್ಲಿನ ಪ್ರಮುಖ ಕಾರ್ಯಕರ್ತರ ಸಂಖ್ಯೆಯನ್ನು ೧೯೯೦–೯೧ ರಿಂದ ೨೦೦೩–೦೪ರ ವರೆಗಿನ ಕೆಲವು ವರ್ಷಗಳಿಗೆ ಸಂಬಂಧಿಸಿದಂತೆ ಈ ಮುಂದಿನ ಕೋಷ್ಟಕ ೬.೨೪ ನೀಡಲಾಗಿದೆ.

**ಕೋಷ್ಟಕ ೬.೨೪**

| ಕ್ರ. ಸಂ | ಮಾರುಕಟ್ಟೆ ಕಾರ್ಯಕರ್ತರು | ೧೯೯೦–೯೧ | ೧೯೯೫–೯೬ | | ೨೦೦೦–೦೧ | | | |
|---|---|---|---|---|---|---|---|---|
| | | ಮಂಗಳೂರು | ಮಂಗಳೂರು | ಪುತ್ತೂರು | ಮಂಗಳೂರು | ಪುತ್ತೂರು | ಸುಳ್ಯ | ಬೆಳ್ತಂಗಡಿ |
| ೧ | ದಲಾಲರು | ೯೩ | ೧೦೨ | ೧೫ | ೧೦೪ | ೧೪ | ೧೧ | ೧ |
| ೨ | ವರ್ತಕರು | ೧೦೯೦ | ೭೩೯ | ೨೪೬ | ೬೬೧ | ೨೧೬ | ೧೦೧ | ೪೨ |
| ೩ | ಚಿಲ್ಲರೆ ವರ್ತಕರು | ೬೬೯ | ೧೬೫ | ೩೨೫ | ೧೦೩ | ೧೬೦ | ೮೩ | ೧೦೨ |
| ೪ | ಆಮದುದಾರರು | ೪೦೫ | ೪೩೧ | ೪೫ | ೩೮೫ | ೬೫ | ೧೫ | ೧೮ |
| ೫ | ರಫ್ತುದಾರರು | ೪೭೬ | ೫೦೧ | ೧೫೩ | ೪೬೨ | ೧೩೬ | ೫೭ | ೧೮ |
| ೬ | ಪ್ರೊಸಸರ್ಸ್ | ೩೧೯ | ೧೮೨ | ೩೭ | ೮೪ | ೬೯ | ೧೬ | ೧೫ |
| ೭ | ತೂಕದವರು | ೮೪ | ೧೬ | – | – | – | – | – |
| ೮ | ಹಮಾಲಿಗಳು | ೧೯೫ | ೩೬ | ೬ | ೧೩೨ | ೨ | – | – |
| ೯ | ಸಾರಿಗೆಯವರು | ೬ | ೪ | ೨ | ೬ | – | – | – |
| ೧೦ | ಉಗ್ರಾಣದವರು | ೨ | ೨ | – | ೨ | – | – | – |
| ೧೧ | ಕ್ರಷರ್ಸ್ | ೧೧೦ | ೪೪ | ೩೨ | ೧೬ | ೧೮ | ೧೩ | ೧೧ |
| ೧೨ | ಬ್ರೋಕರ್ಸ್ | – | – | – | ೨ | – | – | – |
| ೧೩ | ದಾಸ್ತಾನುದಾರರು | ೨ | ೨ | – | ೧೧ | – | – | – |
| ೧೪ | ಗಾಡಿಯವರು | – | ೨ | – | – | – | – | – |

....ಮುಂದುವರೆದಿದೆ

| | ಮಾರುಕಟ್ಟೆ ಕಾರ್ಯಕರ್ತರು | ೨೦೦೨–೦೩ | | | | | ೨೦೦೩–೦೪ | | | | |
|---|---|---|---|---|---|---|---|---|---|---|---|
| | | ಮಂಗಳೂರು | ಪುತ್ತೂರು | ಸುಳ್ಯ | ಬೆಳ್ತಂಗಡಿ | ಬಂಟ್ವಾಳ | ಮಂಗಳೂರು | ಪುತ್ತೂರು | ಸುಳ್ಯ | ಬೆಳ್ತಂಗಡಿ | ಬಂಟ್ವಾಳ |
| ೧ | ದಲಾಲರು | ೯೫ | ೧೦ | ೧೨ | – | ೧೦ | ೮೯ | ೧೨ | ೧೪ | ೬ | ೯ |
| ೨ | ವರ್ತಕರು | ೫೮೬ | ೯೯೧ | ೧೨೩ | ೫೫ | ೧೨೬ | ೫೯೮ | ೨೦೩ | ೧೨೯ | ೫೯ | ೧೫೦ |
| ೩ | ಚಿಲ್ಲರೆ ವರ್ತಕರು | ೭೪ | ೨೯ | ೧೫೫ | ೧೧೭ | ೬೩ | ೩೬ | ೪೮ | ೧೫೮ | ೧೧೮ | ೫೨ |
| ೪ | ಆಮದುದಾರರು | ೩೮೯ | ೭೩ | ೨೬ | ೨೭ | ೬೮ | ೪೧೫ | ೭೪ | ೨೮ | ೧೯ | ೮೪ |
| ೫ | ರಫ್ತುದಾರರು | ೪೦೬ | ೧೪೮ | ೬೨ | ೨೨ | ೮೧ | ೪೨೩ | ೧೬೩ | ೬೬ | ೨೧ | ೮೩ |
| ೬ | ಪ್ರೊಸಸರ್ಸ್ | ೭೨ | ೭೩ | ೧೭ | ೧೯ | ೩೩ | ೮೬ | ೮೦ | ೧೮ | ೨೩ | ೩೬ |
| ೭ | ತೂಕದವರು | – | – | – | – | – | – | – | – | – | – |
| ೮ | ಹಮಾಲಿಗಳು | ೧೮೫ | ೨ | – | – | – | ೧೮೩ | ೧ | – | – | – |
| ೯ | ಸಾರಿಗೆಯವರು | ೨ | – | – | – | – | ೪ | – | – | – | – |
| ೧೦ | ಉಗ್ರಾಣದವರು | ೧ | – | – | – | – | ೨ | – | – | – | – |
| ೧೧ | ಕ್ರಷರ್ಸ್ | ೧೭ | ೪ | ೧೪ | ೧೨ | ೧೧ | ೨೧ | ೧೨ | ೧೪ | ೭ | ೧೧ |
| ೧೨ | ಬ್ರೋಕರ್ಸ್ | – | – | – | – | – | – | – | – | – | – |
| ೧೩ | ದಾಸ್ತಾನುದಾರರು | ೫ | ೨ | – | – | ೧ | ೫ | – | – | ೧ | – |
| ೧೪ | ಗಾಡಿಯವರು | – | – | – | – | – | – | – | – | – | – |

**ಆಧಾರ** : ಜಿಲ್ಲಾ ಕೃಷಿ ಮಾರಾಟ ಇಲಾಖೆ, ಮಂಗಳೂರು.

## ವ್ಯವಸಾಯೋತ್ಪನ್ನಗಳ ಮೇಲೆ ಅಡಮಾನ ಸಾಲ ಯೋಜನೆ

ವ್ಯವಸಾಯೋತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆಯು ಸಿಗದಿದ್ದಾಗ ಅನಿವಾರ್ಯ ಕಾರಣಗಳಿಂದ ರೈತರು ಬೆಳೆದಂತಹ ಉತ್ಪನ್ನಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವುದನ್ನು ತಪ್ಪಿಸಲು ಸರ್ಕಾರ ರಾಜ್ಯದ ಆಯ್ದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವ್ಯವಸಾಯೋತ್ಪನ್ನಗಳ ಅಡಮಾನ ಸಾಲ ಯೋಜನೆಯನ್ನು ೧೯೯೫ ರಿಂದ ಜಾರಿಗೊಳಿಸಿದೆ. ಅದರಂತೆ ಜಿಲ್ಲೆಯ ಪುತ್ತೂರು ಮತ್ತು ಸುಳ್ಯ ಮಾರುಕಟ್ಟೆ ಸಮಿತಿಗಳು ಸದರಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ವ್ಯವಸಾಯೋತ್ಪನ್ನಗಳ ಅಂದಾಜು ಮೌಲ್ಯದ ಶೇಕಡ ೬೦ರಷ್ಟನ್ನು ಅಥವಾ ಗರಿಷ್ಟ ೫೦ ಸಾವಿರ ರೂ.ಗಳು ಇದರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಅಲ್ಪಾವಧಿ (ಗರಿಷ್ಟ ಮೂರು ತಿಂಗಳ ಅವಧಿಗೆ) ಸಾಲವಾಗಿ ಕೊಡಲಾಗುತ್ತದೆ.

## ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ

ರೈತರು ಹಾಗೂ ರೈತ ಕುಟುಂಬದ ಸದಸ್ಯರು (೧೮ ರಿಂದ ೬೦ ವರ್ಷ ವಯಸ್ಸಿನ) ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾರಾಟ ಕಾರ್ಯಗಳಲ್ಲಿ ತೊಡಗಿರುವಾಗ ಅಪಘಾತವಾಗಿ ಸಾವು ಸಂಭವಿಸಿದರೆ ಅಥವಾ ಅಂಗವಿಕಲರಾದರೆ, ಕನಿಷ್ಟ ೧೫೦೦ ರೂ.ಗಳಿಂದ ೨೫,೦೦೦ ರೂ.ಗಳವರೆಗೆ ಪರಿಹಾರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತದೆ. ಈ ಯೋಜನೆಯನ್ವಯ ೧೯೯೬–೯೭ ರಿಂದ ೨೦೦೩–೦೪ರ ವರೆಗೆ ಮಂಗಳೂರು ಮಾರುಕಟ್ಟೆ ಸಮಿತಿಯು ೨೪ ಫಲಾನುಭವಿಗಳಿಗೆ ಒಟ್ಟು ೪,೭೧,೫೦೦ ರೂ.ಗಳ ಪರಿಹಾರವನ್ನು ವಿವಿಧ ಅಪಘಾತಗಳಿಗೆ ಅನ್ವಯಿಸಿದಂತೆ ವಿತರಿಸಿದೆ. ಪುತ್ತೂರು ಮಾರುಕಟ್ಟೆ ಸಮಿತಿಯು ೬೦ ಮಂದಿ ಫಲಾನುಭವಿಗಳಿಗೆ ಒಟ್ಟು ೧೦,೭೪,೦೦೦ ರೂ. ಈ ಯೋಜನೆಯಡಿಯಲ್ಲಿ ಪರಿಹಾರ ಧನ ವಿತರಿಸಿದೆ. ಸುಳ್ಯ ಮಾರುಕಟ್ಟೆ ಸಮಿತಿಯು ೩೭ ಫಲಾನುಭವಿಗಳಿಗೆ ಒಟ್ಟು ೭,೦೭,೦೦೦ರೂ.ಗಳ ಪರಿಹಾರ ಧನ, ಬೆಳ್ತಂಗಡಿ ಮಾರುಕಟ್ಟೆ ಸಮಿತಿಯ ೩೭ ಜನ ಫಲಾನುಭವಿಗಳಿಗೆ ಒಟ್ಟು ೫,೯೬,೫೦೦ ರೂ.ಗಳು ಹಾಗೂ ಬಂಟ್ವಾಳ ಮಾರುಕಟ್ಟೆ ಸಮಿತಿಯ ಐದು ಜನ ಫಲಾನುಭವಿಗಳಿಗೆ ಒಟ್ಟು ೧,೦೫,೦೦೦ರೂ. ಪರಿಹಾರ ಧನವನ್ನು ೨೦೦೩–೦೪ರವರೆಗೆ ವಿತರಿಸಿದೆ.

### ಹಮಾಲರಿಗೆ ಮತ್ತು ತೂಕದವರಿಗೆ ಜೀವ ವಿಮಾ ಯೋಜನೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ಹಮಾಲರು, ಚಕ್ಕಡಿಯವರು ಹಾಗೂ ತೂಕದವರ (೧೮ ರಿಂದ ೬೦ ವರ್ಷ ವಯಸ್ಸಿನ) ಸಾಮಾಜಿಕ ಭದ್ರತೆಗಾಗಿ ಸಮೂಹ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಅದನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಂತೆ ಪರವಾನಗಿ ಪಡೆದ ಹಮಾಲರು, ಚಕ್ಕಡಿಯವರು ಹಾಗೂ ತೂಕದವರು ಸ್ವಾಭಾವಿಕ ಮರಣ ಹೊಂದಿದರೆ ೨೫,೦೦೦ ರೂ. ಗಳಷ್ಟು ಹಾಗೂ ಅಪಘಾತದಿಂದ ಮರಣ ಹೊಂದಿದರೆ ೫೦,೦೦೦ ರೂ.ಗಳಷ್ಟು ವಿಮಾ ಪರಿಹಾರವನ್ನು ಪಡೆಯಬಹುದಾಗಿದೆ.

## ಆಹಾರ ಮತ್ತು ನಾಗರಿಕ ಸರಬರಾಜು

ಜೀವನಾವಶ್ಯಕ ವಸ್ತುಗಳ ಬೇಡಿಕೆ ಮತ್ತು ಪೂರೈಕೆಗೆ ಇರುವ ಅಂತರವನ್ನು ಗಮನಿಸಿ ಸರ್ಕಾರ ಜೀವನಾವಶ್ಯಕ ವಸ್ತುಗಳ ಸರಬರಾಜು ಮತ್ತು ಹಂಚಿಕೆಯನ್ನು ನಿಯಂತ್ರಿಸುತ್ತಾ ಬಂದಿದೆ. ವಿಶೇಷವಾಗಿ ಆಹಾರ ಧಾನ್ಯಗಳ ನಿಯಂತ್ರಣವನ್ನು ಎರಡನೆಯ ಮಹಾಯುದ್ಧದ ನಂತರ ಜಾರಿಗೊಳಿಸಲಾಯಿತು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಜೀವನಾವಶ್ಯಕ ಕಾಯ್ದೆ ೧೯೬೫ರನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ರೂಪಿಸಲ್ಪಟ್ಟ ೨೮ ವಿವಿಧ ನಿಯಂತ್ರಣ ಆಜ್ಞೆಗಳನ್ನು ಕಾರ್ಯಗತಗೊಳಿಸುತ್ತಿದೆ. ಜೀವನಾವಶ್ಯಕ ವಸ್ತುಗಳ ನ್ಯಾಯ ಸಮ್ಮತ ಹಂಚಿಕೆ ಮತ್ತು ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳುವ ಬಗ್ಗೆ ರಚಿಸಲಾದ ವಿವಿಧ ನಿಯಂತ್ರಣ ಕಾಯ್ದೆಗಳ ಅನುಷ್ಠಾನ ಮತ್ತು ಅನೌಪಚಾರಿಕ ಪಡಿತರ ಪದ್ಧತಿಯ ಕಾರ್ಯಾಚರಣೆ ಮುಂತಾದವು ಇಲಾಖೆಯ ಪ್ರಮುಖ ಕಾರ್ಯಗಳಾಗಿವೆ.

### ಸಾರ್ವಜನಿಕ ವಿತರಣಾ ವ್ಯವಸ್ಥೆ

ರಾಜ್ಯದಲ್ಲಿ ಆಹಾರ ಸಾಮಗ್ರಿಗಳ ತುರ್ತು ಹಂಚಿಕೆಯ ಅವಶ್ಯಕತೆಯು ೧೯೬೫ರಲ್ಲಿ ಉದ್ಭವಿಸಿದಾಗ, ಪರಿಸ್ಥಿತಿಯನ್ನು ಸುಧಾರಿಸಲು ಕೂಡಲೇ ಅನೌಪಚಾರಿಕ ಪಡಿತರ ಪದ್ಧತಿಯನ್ನು ಬೆಂಗಳೂರು ಮತ್ತು ಕೈಗಾರಿಕಾ ನಗರ ಕೆ.ಜಿ. ಎಫ್.ಗಳಲ್ಲಿ ಪ್ರಾರಂಭಿಸಲಾಯಿತು. ಈ ಪದ್ಧತಿಯನ್ನು ೧೯೭೪ರಲ್ಲಿ ಮಂಗಳೂರು ನಗರಕ್ಕೂ ವಿಸ್ತರಿಸಲಾಯಿತು. ನಂತರ ೧೯೭೮ರಲ್ಲಿ ಈ ವ್ಯವಸ್ಥೆಯನ್ನು ೪೦,೦೦೦ ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಎಲ್ಲಾ ನಗರ ಮತ್ತು ಪಟ್ಟಣಗಳಿಗೂ ವಿಸ್ತರಿಸಲಾಯಿತು. ಈಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ನಗರ ಮಾತ್ರ ಅನೌಪಚಾರಿಕ ಪಡಿತರ ಪದ್ಧತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ವಾರ್ಷಿಕ ಆದಾಯ ರೂ. ೩,೫೦೦ಕ್ಕಿಂತ (ಪ್ರಸ್ತುತ ರೂ. ೧೨,೦೦೦) ಕಡಿಮೆ ಇರುವ ರಾಜ್ಯದ ಗ್ರಾಮಾಂತರ ಪ್ರದೇಶದ ಬಡಜನರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನು ೧–೧೧–೮೫ ರಿಂದ ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯ ವ್ಯಾಪ್ತಿಗೆ ಭೂ ರಹಿತ ಕೃಷಿ ಕಾರ್ಮಿಕರು, ಗ್ರಾಮೀಣ ಕುಶಲಕರ್ಮಿಗಳೂ, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು, ತೋಟಗಾರಿಕೆ ಕಾರ್ಮಿಕರು, ಅಲ್ಲದೇ ಅಂಗವಿಕಲರು, ವೃದ್ಧಾಪ್ಯ ಹಾಗೂ ವಿಧವಾ ಮಾಸಾಶನದ ಫಲಾನುಭವಿಗಳು, ಮುಂತಾದವರನ್ನು ಒಳಪಡಿಸಲಾಯಿತು. ಈ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಿ, ಪ್ರತಿ ಪಡಿತರ ಚೀಟಿಗೆ ತಿಂಗಳಿಗೆ ಐದು ಕಿಲೋ ಅಕ್ಕಿ (ಕಿ.ಗ್ರಾಂ.ಗೆ ರೂ. ೨.೫೦) ಮತ್ತು ಐದು ಕಿಲೋ ಗೋಧಿಯನ್ನು (ಕಿ. ಗ್ರಾಂ.ಗೆ ರೂ. ೧.೬೦) ವಿತರಿಸಲಾಗುತ್ತಿತ್ತು. ಈ ಸೌಲಭ್ಯವನ್ನು ೧೯೮೯ರ ಆಗಸ್ಟ್ ೧೫ ರಿಂದ ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣ ಪ್ರದೇಶದ ಬಡಜನರಿಗೂ ವಿಸ್ತರಿಸಲಾಯಿತು. ಗ್ರಾಮೀಣ ಪ್ರದೇಶದ ದುರ್ಬಲ ವರ್ಗದವರನ್ನು ಪ್ರತ್ಯೇಕವಾಗಿ ಗುರುತಿಸುವ ಉದ್ದೇಶದಿಂದ ಅಂತಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯನ್ನು ಮತ್ತು ಇತರರಿಗೆ ಕೇಸರಿ ಬಣ್ಣದ ಪಡಿತರ ಚೀಟಿಯನ್ನು ನೀಡಲಾಗಿತ್ತು. ಅಂತೆಯೇ ಪಟ್ಟಣ ಪ್ರದೇಶದ ದುರ್ಬಲ ವರ್ಗದವರಿಗೆ ಹಸಿರು ಪಡಿತರ ಚೀಟಿಯನ್ನೂ ಹಾಗೂ ಇತರರಿಗೆ ಸಾಮಾನ್ಯ ಪಡಿತರಚೀಟಿಗಳನ್ನುವಿತರಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿನ ಕೇಸರಿ ಪಡಿತರ ಚೀಟಿಯನ್ನು ಪಡೆದವರು ಮತ್ತು ಪಟ್ಟಣ ಪ್ರದೇಶಗಳಲ್ಲಿನ ಸಾಮಾನ್ಯ ಪಡಿತರ ಚೀಟಿಯನ್ನು ಹೊಂದಿದವರು ಪರಿಮಿತ ಪ್ರಮಾಣದಲ್ಲಿ ಸಾಮಾನ್ಯ ನೀಡಿಕೆ ಬೆಲೆಗಳಲ್ಲಿ ನಿರ್ದಿಷ್ಟ ಪ್ರಮಾಣದ ಅವಶ್ಯಕ ಸಾಮಗ್ರಿಗಳನ್ನು ಪಡೆಯುತ್ತಿದ್ದರು.

ರಾಜ್ಯದಲ್ಲಿ ೧೯೯೭ರ ಜೂನ್ ೧ ರಿಂದ ಗುರಿ ಆಧಾರಿತ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಆಚರಣೆಗೆ ತರಲಾಗಿದೆ. ದಿನಾಂಕ: ೧–೧೧–೮೫ ರಿಂದ ರಾಜ್ಯದಲ್ಲಿ ರೂಢಿಯಲ್ಲಿದ್ದ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನೇ ಮುಂದುವರಿಸಲಾಗಿದೆ. ವಾರ್ಷಿಕ ಆದಾಯ ರೂ. ೧೬,೦೦೦ ಕ್ಕಿಂತ ಹೆಚ್ಚಿಗೆ ಇರುವ ನಗರವಾಸಿ ಕುಟುಂಬಗಳಿಗೆ ಭಾವಚಿತ್ರವಿರುವ ಫೋಟೋ ಪಡಿತರ

ಚೀಟಿಯನ್ನು, ವಾರ್ಷಿಕ ಆದಾಯ ರೂ. ೧೨,೦೦೦ಕ್ಕಿಂತ ಹೆಚ್ಚಿಗೆ ಇರುವ ಗ್ರಾಮಾಂತರ ಪ್ರದೇಶದ ಜನರಿಗೆ ಕೇಸರಿ ಪಡಿತರ ಚೀಟಿಯನ್ನೂ ನೀಡಲಾಗಿದೆ. ವಾರ್ಷಿಕ ಆದಾಯ ರೂ. ೧೨,೦೦೦ಕ್ಕಿಂತ ಕಡಿಮೆ ಇರುವ ಗ್ರಾಮಾಂತರ ಪ್ರದೇಶದ ಬಡಜನರಿಗೂ ಹಾಗೂ ವಾರ್ಷಿಕ ಆದಾಯ ರೂ. ೧೭,೦೦೦ಕ್ಕಿಂತ ಕಡಿಮೆ ಇರುವ ಪಟ್ಟಣ/ ನಗರವಾಸಿ ಬಡಜನರಿಗೂ ಹಸಿರು/ಹಳದಿ ಪಡಿತರ ಚೀಟಿಗಳನ್ನು ವಿರತಿಸಲಾಗಿದೆ. (ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇರೆಗೆ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಅಸ್ತಿತ್ವದಲ್ಲಿರುವ ಹಸಿರು ಪಡಿತರ ಚೀಟಿಯನ್ನು ಬದಲಿಸಿ ಹಳದಿ ಪಡಿತರ ಚೀಟಿಗಳನ್ನು ವಿರತಿಸಲಾಗಿದೆ). ಹಳದಿ ಪಡಿತರ ಚೀಟಿಯನ್ನು ಪಡೆದಿರುವ ಪ್ರತಿ ಕುಟುಂಬಕ್ಕೆ ನ್ಯಾಯಬೆಲೆ ಅಂಗಡಿಗಳ ಮೂಲಕ ತಿಂಗಳಿಗೆ ೨೮ ಕಿ.ಗ್ರಾಂ ಅಕ್ಕಿ (ಕಿಲೋಗೆ ರೂ. ೬.೧೫ ರಂತೆ) ಮತ್ತು ೭ ಕಿ.ಗ್ರಾಂ ಗೋಧಿ (ಕಿಲೋಗೆ ರೂ.೪.೬೫ರಂತೆ)ಯನ್ನು ನೀಡಲಾಗುತ್ತಿತ್ತು. ಈ ಯೋಜನೆಯನ್ನು ದಿನಾಂಕ೧–೯–೨೦೦೪ ರಿಂದ ಪರಿಷ್ಕರಿಸಲಾಗಿದ್ದು, ಅದರಂತೆ ೨೦ ಕಿಗ್ರಾಂ ಅಕ್ಕಿ (ಕಿಲೋಗೆ ೩ ರೂ.) ಹಾಗೂ ಐದು ಕಿ.ಗ್ರಾಂ. ಗೋಧಿಯನ್ನು (ಕಿಲೋಗೆ ೩ ರೂ.) ನೀಡಲಾಗುತ್ತಿದೆ.

ಭಾರತ ಸರ್ಕಾರ ಕಡು ಬಡವರಿಗಾಗಿ "ಅಂತ್ಯೋದಯ ಅನ್ನ ಯೋಜನೆ" ಎಂಬ ಹೊಸ ಯೋಜನೆಯನ್ನು ೨೦೦೧–೦೨ ರಲ್ಲಿ ಆರಂಭಿಸಿದೆ. ಈ ಯೋಜನೆಯಡಿಯಲ್ಲಿ ಪ್ರತಿ ಕುಟುಂಬಕ್ಕೆ ತಿಂಗಳಿಗೆ ೨೮ ಕಿ.ಗ್ರಾಂ. ಅಕ್ಕಿಯನ್ನು ಮತ್ತು ೭ ಕಿ.ಗ್ರಾಂ. ಗೋಧಿಯನ್ನು ಅತಿ ರಿಯಾಯಿತಿ ದರಗಳಲ್ಲಿ ಅಂದರೆ ಅಕ್ಕಿ ಕಿ.ಗ್ರಾಂ.ಗೆ ರೂ.೩ ಹಾಗೂ ಗೋಧಿ ಕಿ.ಗ್ರಾಂ.ಗೆ ರೂ. ೨ ರಂತೆ ವಿತರಿಸಲಾಗುತ್ತಿದೆ. ಮುಂದಿನ ಪಟ್ಟಿಯಲ್ಲಿ ೧೯೯೦–೯೧ ರಿಂದ ೨೦೦೩–೦೪ರ ಅವಧಿಯ ಕೆಲವು ವರ್ಷಗಳಲ್ಲಿ ಜಿಲ್ಲೆಯಲ್ಲಿನ ನ್ಯಾಯಬೆಲೆ ಅಂಗಡಿಗಳ ವಿವರವನ್ನು ನೀಡಲಾಗಿದೆ.

**ಕೋಷ್ಟಕ ೬.೨೫**

| ಪ್ರದೇಶ | ವರ್ಷ | | | | | |
|---|---|---|---|---|---|---|
| | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ |
| ನಗರ | ೧೮೦ | ೧೯೮ | ೧೪೨ | ೧೩೬ | ೧೩೧ | ೧೩೨ |
| ಗ್ರಾಮಾಂತರ | ೭೦೦ | ೬೭೬ | ೪೩೨ | ೪೩೨ | ೪೩೨ | ೪೧೪ |
| ಒಟ್ಟು | ೮೮೦ | ೮೭೪ | ೫೭೪ | ೫೬೮ | ೫೬೩ | ೫೪೬ |

ಜಿಲ್ಲೆಯಲ್ಲಿ ೧೯೯೦–೯೧ರ ವೇಳೆಗೆ ೧,೩೦,೭೪೩ ತ್ರಿವರ್ಣ, ೨,೬೨,೯೬೩ ಕೇಸರಿ ಹಾಗೂ ೧,೦೫,೪೨೭ ಪಟ್ಟಣ ಭಾವಚಿತ್ರ ಪಡಿತರ ಚೀಟಿಗಳನ್ನೊಳಗೊಂಡಂತೆ ಒಟ್ಟು ೪,೯೯,೧೩೩ ಪಡಿತರ ಚೀಟಿಗಳನ್ನು ವಿತರಿಸಲಾಗಿತ್ತು. ೧೯೯೫–೯೬ರ ವೇಳೆಗೆ ಜಿಲ್ಲೆಯಲ್ಲಿನ ಒಟ್ಟು ೫,೦೪,೨೫೬ ಪಡಿತರ ಚೀಟಿಗಳ ಪೈಕಿ, ೪,೨೪೭ ನಗರ ಮತ್ತು ೧,೭೪,೭೪೨ ಗ್ರಾಮಾಂತರ ಹಸಿರು ಪಡಿತರ ಚೀಟಿಗಳು, ೧,೯೮,೩೧೨ ಕೇಸರಿ ಪಡಿತರ ಚೀಟಿಗಳು ಮತ್ತು ೧,೨೬,೯೫೫ ಪಟ್ಟಣ ಭಾವಚಿತ್ರ ಪಡಿತರ ಚೀಟಿಗಳಾಗಿದ್ದವು. ನಂತರ ಉಡುಪಿ ಜಿಲ್ಲೆ ಅಸ್ತಿತ್ವದಕ್ಕೆ ಬಂದ ಹಿನ್ನೆಲೆಯಲ್ಲಿ ನೂತನ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾದಂತೆ ವಿವಿಧ ಬಗೆಯ ಪಡಿತರ ಚೀಟಿಗಳ ವಿವರವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೬**

| ವರ್ಷ | ಹಸಿರು ಪಡಿತರ ಚೀಟಿ | | ಕೇಸರಿ ಪಡಿತರ ಚೀಟಿ | ಪಟ್ಟಣ ಭಾವಚಿತ್ರ ಪಡಿತರ ಚೀಟಿ | ಒಟ್ಟು |
|---|---|---|---|---|---|
| | ನಗರ | ಗ್ರಾಮಾಂತರ | | | |
| ೨೦೦೦–೦೧ | ೧೬೪೨ | ೧೦೨೭೦೬ | ೧೨೮೧೬೭ | ೧೦೨೬೦೨ | ೩೩೫೧೨೦ |
| ೨೦೦೧–೦೨ | ೫೧೫೩ | ೬೯೬೮೨ | ೧೨೫೦೫೨ | ೯೯೫೯೬ | ೨೯೯೪೮೩ |
| ೨೦೦೨–೦೩ | ೫೧೪೫ | ೬೯೫೧೬ | ೧೨೮೨೪೦ | ೧೦೦೪೩೭ | ೩೦೩೩೩೮ |

| ವರ್ಷ | ಹಳದಿ ಪಡಿತರ ಚೀಟಿ | | ಅಂತ್ಯೋದಯ ಪಡಿತರ ಚೀಟಿ | | ಕೇಸರಿ ಪಡಿತರ ಚೀಟಿ | ಭಾವಚಿತ್ರ ಪಡಿತರ ಚೀಟಿ | ಒಟ್ಟು |
|---|---|---|---|---|---|---|---|
| | ನಗರ | ಗ್ರಾಮಾಂತರ | ನಗರ | ಗ್ರಾಮಾಂತರ | | | |
| ೨೦೦೩–೦೪ | ೧೩೪೯೦ | ೧೦೯೦೨೬ | ೨೧೯ | ೧೦೪೩೭ | ೧೨೬೧೪೧ | ೯೮೯೨೯ | ೩೫೮೨೪೨ |

**ಆಧಾರ** : ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಮಂಗಳೂರು